


ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಮೇ 14 ಗುರುವಾರ 2026
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸಂಪುಟ: 47 | ಸಂಚಿಕೆ: 28 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4



ಹಿಜಾಬ್ ನಿಷೇಧ ಹಿಂದಕ್ಕೆ

ಇನ್ನು ಜನಿವಾರ, ರುದ್ರಾಕ್ಷಿ, ಪೇಟ ಧರಿಸಲೂ ಅವಕಾಶ

ಬೆಂಗಳೂರು, ಮೇ 13– ರಾಜ್ಯದ ಶೈಕ್ಷಣಿಕ ವಲಯದಲ್ಲಿ ತೀವ್ರ ಸಂಚಲನ ಮೂಡಿಸಿದ್ದ 'ಹಿಜಾಬ್' ವಿವಾದಕ್ಕೆ ರಾಜ್ಯ ಸರ್ಕಾರವು ಈಗ ಅಧಿಕೃತ ವಾಗಿ ತೆರೆ ಎಳೆದಿದೆ. 2022ರಲ್ಲಿ ಅಂದಿನ ಸರ್ಕಾರ ಜಾರಿಗೆ ತಂದಿದ್ದ ಹಿಜಾಬ್ ನಿಷೇಧಕ್ಕೆ ಪೂರಕವಾಗಿದ್ದ ಆದೇಶವನ್ನು ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಈಗ ಹಿಂಪಡೆದಿದೆ. ಈ ಕುರಿತು 13.05.2026 ರಂದು ಹೊಸ ಮಾರ್ಗ ಸೂಚಿಯನ್ನು ಹೊರಡಿಸಲಾಗಿದ್ದು, ವಿದ್ಯಾರ್ಥಿನಿಯರು ಸಮವಸ್ತ್ರದ ಜೊತೆಗೆ 'ಹಿಜಾಬ್' (ತಲೆವಸ್ತ್ರ) ಧರಿಸಲು ಈಗ ಮುಕ್ತ ಅವಕಾಶ ಕಲ್ಪಿಸಲಾಗಿದೆ.

ಹಳೇ ಆದೇಶ ರದ್ದು, ಹೊಸ ನಿಯಮ ಜಾರಿ: 05.02.2022 ರಂದು ಹೊರ ಡಿಸಲಾಗಿದ್ದ ಸಮವಸ್ತ್ರ ಸಂಹಿತೆಯ ಆದೇಶ ವನ್ನು ರಾಜ್ಯ ಸರ್ಕಾರವು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆದಿದೆ. ಶಿಕ್ಷಣವು ವಿದ್ಯಾರ್ಥಿಗಳ ಸಮಗ್ರ ಅಭಿ ವೃದ್ಧಿಗೆ ಮತ್ತು ಸಾಂವಿಧಾನಿಕ ಮೌಲ್ಯ



ಗಳ ವೃದ್ಧಿಗೆ ಪೂರಕವಾಗಿರಬೇಕು. ಯಾವುದೇ ಧರ್ಮ ಅಥವಾ ಸಂಪ್ರದಾಯದ ಆಚ ರಣೆಯು ವಿದ್ಯಾರ್ಥಿಯ ಶಿಕ್ಷಣದ ಹಕ್ಕಿಗೆ ಅಡ್ಡಿಯಾಗಬಾರದು ಎಂಬ ಉದ್ದೇಶ ದಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಹಿಜಾಬ್ ಮಾತ್ರವಲ್ಲ, ಪೇಟ, ರುದ್ರಾಕ್ಷಿಗೂ ಅವಕಾಶ: ಸರ್ಕಾರದ ಹೊಸ ಆದೇಶದ ಪ್ರಕಾರ, ಶಾಲಾ–ಕಾಲೇಜುಗಳು ನಿಗದಿ ಪಡಿಸಿದ ಸಮವಸ್ತ್ರಕ್ಕೆ ಪೂರಕ ವಾಗಿ ಮತ್ತು ಅದಕ್ಕೆ ಹೊಂದಿಕೊಳ್ಳು ವಂತೆ ಸೀಮಿತ ಸಾಂಪ್ರದಾಯಿಕ ಸಂಕೇತಗಳನ್ನು ಧರಿಸಲು ಅನುಮತಿ ನೀಡಲಾಗಿದೆ. ಇದರಲ್ಲಿ ಪ್ರಮುಖವಾಗಿ ಹಿಜಾಬ್ (ತಲೆ ವಸ್ತ್ರ), ಪೇಟ ಅಥವಾ ಟರ್ಬನ್, ಜನಿವಾರ ಅಥವಾ ಪವಿತ್ರ ದಾರ, ಶಿವದಾರ ಮತ್ತು ರುದ್ರಾಕ್ಷಿ. ಧರಿಸು ವುದರಿಂದ ಶಾಲೆಯ ಶಿಸ್ತು ಅಥವಾ ಬೋಧನಾ ಪ್ರಕ್ರಿಯೆಗೆ ಧಕ್ಕೆಯಾಗದಂತೆ ನೋಡಿ ಕೊಳ್ಳಬೇಕೆಂದು ಸೂಚಿಸಲಾಗಿದೆ.

ವಿದ್ಯಾರ್ಥಿಗಳ ಶಿಕ್ಷಣದ ಹಕ್ಕೇ ಮುಖ್ಯ: ಈ ಹೊಸ ಆದೇಶದ ಅಡಿ ಯಲ್ಲಿ ಅತ್ಯಂತ ಮಹತ್ವದ ಅಂಶವೆಂದರೆ, ಯಾವುದೇ ವಿದ್ಯಾರ್ಥಿನಿಯು ಹಿಜಾಬ್ ಧರಿಸಿದ್ದಾಳೆ ಎಂಬ ಕಾರಣಕ್ಕೆ ಆಕೆಗೆ ಶಿಕ್ಷಣವನ್ನು ನಿರಾಕರಿಸುವಂತಿಲ್ಲ. ತರಗತಿ ಪ್ರವೇಶ ಅಥವಾ ಪರೀಕ್ಷಾ ಕೊಠಡಿಗಳಿಗೆ ಇಂತಹ ಸಂಪ್ರದಾಯಿಕ ಸಂಕೇತ ಗಳೊಂದಿಗೆ ಪ್ರವೇಶವನ್ನು ನಿರ್ಬಂಧಿಸ ಬಾರದು ಎಂದು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಆದರೆ, ಈ ಸಂಕೇತಗಳು ವಿದ್ಯಾರ್ಥಿಯ ಗುರುತಿಸುವಿಕೆಗೆ ಯಾವುದೇ ತೊಂದರೆ ನೀಡಬಾರದು ಎಂಬ ಷರತ್ತನ್ನು ವಿಧಿಸಲಾಗಿದೆ. ■ 6ನೇ ಪುಟಕ್ಕೆ

ಸಿದ್ದರಾಮಯ್ಯ ಜೆಡಿಎಸ್ ಒಂದಂಕಿ ದಾಟಲ್ಲ ಎಂದಿದ್ದಾರೆ; 58ಕ್ಕಿಂತ ಅಧಿಕ ಸ್ಥಾನ ಗೆದ್ದು ತೋರಿಸ್ತೇವೆ...

● ಜೆಡಿಎಸ್ ಯುವ ನಾಯಕ ನಿಖಿಲ್ ಕುಮಾರಸ್ವಾಮಿ ಶಪಥ ● ಜೆಡಿಎಸ್‌ನಲ್ಲಿ ಬೆಳೆದು ಈಗ ಅತ್ಯಂತ ಕೇವಲವಾಗಿ ಮಾತನಾಡುತ್ತಿದ್ದಾರೆ ● ಅಹಿಂದ ಚಾಂಪಿಯನ್ ಎಂದೇಳುವ ಇವರಿಂದ ಬಡವರಿಗೆ ಏನೂ ಪ್ರಯೋಜನವಾಗಿಲ್ಲ ● ವರುಣ ಕ್ಷೇತ್ರದಲ್ಲಿ 'ಜನರೊಂದಿಗೆ ಜನತಾ ದಳ' ಸಮಾವೇಶ; ಅಭಿಷೇಕ್ ಮಣೆಗಾರ್‌ಗೆ ಪಕ್ಷ ಸಂಘಟನೆ ಹೊಣೆ



ವರುಣದಲ್ಲಿ ಏರ್ಪಡಿಸಿದ್ದ ಜನರೊಂದಿಗೆ ಜನತಾದಳ ಸಮಾವೇಶದಲ್ಲಿ ಜೆಡಿಎಸ್ ರಾಜ್ಯ ಯುವ ನಾಯಕ ನಿಖಿಲ್ ಕುಮಾರಸ್ವಾಮಿ ಮಾತನಾಡಿದರು.

ವರುಣ ಕ್ಷೇತ್ರದ ಮುಖಂಡ ಅಭಿಷೇಕ್ ಅವರನ್ನು ಬೆಂಬಲಿಸಿ

ಮುಂಬರುವ ದಿನಗಳಲ್ಲಿ ವರುಣ ಕ್ಷೇತ್ರದಲ್ಲಿ ಅಭಿಷೇಕ್ ಅವರು ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲಿದ್ದಾರೆ. ಅವರಿಗೆ ಶಕ್ತಿ ತುಂಬಲು ಕ್ಷೇತ್ರದ ಕಾರ್ಯಕರ್ತರು ಸಹಕಾರ ನೀಡಬೇಕು. ಮುಂಬರುವ ಚುನಾವಣೆಯಲ್ಲಿ ಅವರನ್ನು ಬೆಂಬಲಿಸಬೇಕು.

- ನಿಖಿಲ್ ಕುಮಾರಸ್ವಾಮಿ, ರಾಜ್ಯಾಧ್ಯಕ್ಷ, ಯುವ ಜೆಡಿಎಸ್

ಮೈಸೂರು, ಮೇ 13(ಎಂಟಿವೈ)– ಮುಂಬರುವ ಚುನಾವಣೆಯಲ್ಲಿ ಜೆಡಿಎಸ್ ಒಂದಂಕಿಗೆ(ಸಿಂಗಲ್ ಡಿಜಿಟ್) ಕುಸಿಯ ಲಿದೆ ಎಂದು ಸದನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿರುವ ಹೇಳಿಕೆ ಯನ್ನು ಅವರ ವರುಣ ಕ್ಷೇತ್ರದಲ್ಲೇ ಸವಾ ಲಾಗಿ ಸ್ವೀಕರಿಸಿದ್ದು, ಮುಂಬರುವ ಚುನಾ ವಣೆಯಲ್ಲಿ 58ಕ್ಕಿಂತ ಹೆಚ್ಚು ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿಗಳನ್ನು ಗೆಲ್ಲಿಸಿಯೇ ತೀರುತ್ತೇವೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರ ಸ್ವಾಮಿ ಶಪಥ ಮಾಡಿದ್ದಾರೆ.

ಮೈಸೂರು ತಾಲೂಕಿನ ಮೆಲ್ಲಹಳ್ಳಿ ಬಳಿ ಆಯೋಜಿಸಿದ್ದ ವರುಣ ಕ್ಷೇತ್ರದ 'ಜನ ರೊಂದಿಗೆ ಜನತಾ ದಳ' ಸಮಾವೇಶ ವನ್ನು ಉದ್ಘಾಟಿಸಿ ಮಾತನಾಡಿದ ಅವರು, ಜೆಡಿಎಸ್‌ನಿಂದಲೇ ರಾಜ ಕೀಯವಾಗಿ ಬೆಳೆದ ಸಿದ್ದರಾಮಯ್ಯ ಅವರು ಇದೀಗ ನಮ್ಮ ಪಕ್ಷದ ವಿರುದ್ಧವೇ ಹಗುರವಾಗಿ ಮಾತ ನಾಡುತ್ತಿದ್ದಾರೆ. ಈ ಹಿಂದೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಮುಖ್ಯ ಮಂತ್ರಿಯಾಗಿದ್ದಾಗ ಹಣಕಾಸು ಸಚಿವ ಸ್ಥಾನ ನೀಡದಿದ್ದರೆ, ಇಂದು ಅವರು ಮುಖ್ಯ ಮಂತ್ರಿಯಾಗುತ್ತಿರಲಿಲ್ಲ ಎಂದರು.

ಇತ್ತೀಚೆಗೆ ಸದನದಲ್ಲಿ ಮಾತನಾಡುತ್ತಿದ್ದಾಗ ಮುಂಬರುವ ಚುನಾವಣೆಯಲ್ಲಿ ಜೆಡಿಎಸ್ ಒಂದಂಕಿ ದಾಟುವುದಿಲ್ಲ ಎಂದಿದ್ದಾರೆ. ಅಲ್ಲದೆ, ನಾನು ಜೆಡಿಎಸ್ ನಲ್ಲಿದ್ದಾಗ 58 ಸ್ಥಾನ ಗೆದ್ದಿದ್ದೇ ಹೆಚ್ಚು ಎಂದಿದ್ದಾರೆ. ಈ ಮಾತನ್ನು ಸವಾಲಾಗಿ ಸ್ವೀಕರಿಸಿದ್ದೇನೆ. ರಾಜ್ಯದ 224 ಕ್ಷೇತ್ರಗಳಲ್ಲೂ ಜನರೊಂದಿಗೆ ಜನತಾದಳ ಸಮಾವೇಶದಲ್ಲಿ ಪಾಲ್ಗೊಂಡು ಪಕ್ಷ ಸಂಘಟಿಸುತ್ತೇನೆ. ಸಿದ್ದರಾಮಯ್ಯ ಅವರು ಪಕ್ಷದಲ್ಲಿದ್ದಾಗ ಲಭಿಸಿದ್ದ 58 ಸ್ಥಾನಕ್ಕಿಂತ ಒಂದು ಸ್ಥಾನವಾದರೂ ಹೆಚ್ಚು ಅಭ್ಯರ್ಥಿ ಗಳನ್ನು ಗೆಲ್ಲಿಸಿಕೊಂಡು ಬಂದೆ ಬರುತ್ತೇನೆ ಎಂದು ಘೋಷಿಸಿದರು. ■ 6ನೇ ಪುಟಕ್ಕೆ

ಮೋದಿ ಮಿತವ್ಯಯ; ಭದ್ರತಾ ವಾಹನಗಳಲ್ಲಿ ಶೇ.50 ಕಡಿತ

ನವದೆಹಲಿ: ಪಶ್ಚಿಮ ಏಷ್ಯಾದ ಉದ್ವಿಗ್ನತೆ, ಇರಾನ್ ಮತ್ತು ಅಮೆರಿಕ ನಡುವಿನ ಸಂಘರ್ಷ ಹಾಗೂ ಜಾಗತಿಕ ಮಟ್ಟದಲ್ಲಿ ಕಚ್ಚಾತೈಲ ಬೆಲೆ ಏರಿಕೆಯ ಹಿನ್ನೆಲೆ ದೇಶದಲ್ಲಿ ಇಂಧನ ಉಳಿತಾಯಕ್ಕೆ ಪ್ರಧಾನಿ ನರೇಂದ್ರ ಮೋದಿಯವರು ಮಹತ್ವದ ಕ್ರಮ ಕೈಗೊಂಡಿದ್ದಾರೆ. ವಿಶೇಷ ಭದ್ರತಾ ಪಡೆ ಬಳಸುವ ಅಧಿಕೃತ ಬೆಂಗಾವಲು



ವಾಹನಗಳ ಸಂಖ್ಯೆಯನ್ನು ಶೇ.50ರಷ್ಟು ಕಡಿತಗೊಳಿಸಲು ಅವರು ಸೂಚನೆ ನೀಡಿದ್ದಾರೆ. ಮಿತವ್ಯಯ ಕ್ರಮಗಳ ಭಾಗವಾಗಿ ಇತ್ತೀಚೆಗೆ ನಡೆದ ಗುಹಾವಾಟಿ ಹಾಗೂ ವಡೋದರಾ ಭೇಟಿಗಳಲ್ಲೂ ಕಡಿಮೆ ವಾಹನಗಳಲ್ಲಿಯೇ ಕಟ್ಟುನಿಟ್ಟಿನ ಭದ್ರತಾ ವ್ಯವಸ್ಥೆ ಜಾರಿಗೊಳಿಸಲಾಗಿತ್ತು. ಈ ಮೂಲಕ ಕೇವಲ ಸಾರ್ವಜನಿಕರಿಗೆ ಮಾತ್ರವಲ್ಲ, ಸರ್ಕಾರವೂ ಮಿತವ್ಯಯ ■ 6ನೇ ಪುಟಕ್ಕೆ

ಆಮದು ಸುಂಕ ಶೇ.15ಕ್ಕೆ ಏರಿಕೆ; ಚಿನ್ನ, ಬೆಳ್ಳಿ ಇನ್ನು ದುಬಾರಿ

ನವದೆಹಲಿ: ದೇಶೀಯ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿಯ ಬೆಲೆಗಳು ಮತ್ತಷ್ಟು ದುಬಾರಿಯಾಗಲಿವೆ. ಚಿನ್ನ ಖರೀದಿಯನ್ನು ಮುಂದೂಡಿ ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ ಬೆನ್ನಲ್ಲೇ ಕೇಂದ್ರ ಸರ್ಕಾರ ಈಗ ಚಿನ್ನ ಮತ್ತು



ಬೆಳ್ಳಿ ಮೇಲಿನ ಒಟ್ಟು ಆಮದು ಸುಂಕವನ್ನು ದೇಶದ ವಿದೇಶಿ ವಿನಿಮಯ ಮೀಸಲು ನಿಧಿಯನ್ನು ರಕ್ಷಿಸಲು ಮತ್ತು ರೂಪಾಯಿ ಮೌಲ್ಯದ ಕುಸಿತವನ್ನು ತಡೆಯಲು ಈ ಕಠಿಣ ಕ್ರಮ ಕೈಗೊಳ್ಳಲಾಗಿದೆ.

ಹಿಂದೆ ಎಷ್ಟಿತ್ತು?: ಮೂಲ ಕಸ್ಟಮ್ಸ್ ಸುಂಕ ಈ ಹಿಂದೆ 5% ಇತ್ತು. ಈಗ ಇದನ್ನು 10%ಗೆ ಏರಿಕೆ ಮಾಡಲಾಗಿದೆ. ಕೃಷಿ ಮೂಲಸೌಕರ್ಯ ಮತ್ತು ಅಭಿವೃದ್ಧಿ ಸೆಸ್ ಈ ಹಿಂದೆ 5% ಇತ್ತು. ಈ ಸೆಸ್ ದರದಲ್ಲಿ ಯಾವುದೇ ■ 6ನೇ ಪುಟಕ್ಕೆ

ವಿಶ್ವಾಸಮತ ಗೆದ್ದ ವಿಜಯ್


ಚೆನ್ನೈ: ವಿಶ್ವಾಸಮತ ಯಾಚನೆ ಪರೀಕ್ಷೆಯಲ್ಲಿ ಟಿವಿಕೆ ಮುಖ್ಯಸ್ಥ ವಿಜಯ್ ಪಾಸ್ ಆಗಿದ್ದಾರೆ. ಸರ್ಕಾರಕ್ಕೆ 144 ಮಂದಿ ಶಾಸಕರು ಬೆಂಬಲ ವ್ಯಕ್ತಪಡಿಸಿದ್ದಾರೆ. ಟಿವಿಕೆ, ಕಾಂಗ್ರೆಸ್, ಸಿಪಿಎಂ, ಸಿಪಿಐ, ಮುಸ್ಲಿಮ್ ಲೀಗ್, ವಿಸಿಕೆ ಜೊತೆ ಎಐಎಡಿಎಂಕೆಯ ಬಂಡಾಯ ಎದ್ದಿರುವ 27 ಶಾಸಕರು ವಿಜಯ್ ಸರ್ಕಾರಕ್ಕೆ ಬೆಂಬಲ ನೀಡಿದ್ದಾರೆ. ಬಹುಮತ ಸಾಬೀತುಪಡಿಸುವ ವೇಳೆ ಡಿಎಂಕೆ ಮತ್ತು ಪಿಎಂಕೆ ಶಾಸಕರು ಸಭಾತ್ಯಾಗ ಮಾಡಿದರು. ಒಬ್ಬ ಬಿಜೆಪಿ ಶಾಸಕರು ಮತದಾನದಿಂದ ದೂರ ಉಳಿದರು.



■ 6ನೇ ಪುಟಕ್ಕೆ



ಶ್ರೀ 1008 ಸತ್ಯಾತ್ಮತೀರ್ಥ ಶ್ರೀಪಾದಂಗಳವರ 33 ದಿನಗಳ ದಿಗ್ವಿಜಯಕ್ಕೆ ಮೈಸೂರಲ್ಲಿಂದು ಭವ್ಯ ಸ್ವಾಗತ



ಸತ್ಯಾತ್ಮತೀರ್ಥ ಶ್ರೀಪಾದಂಗಳವರು.

ಮೈಸೂರು,ಮೇ.13(ಜಿಎ)–ಶ್ರೀ 1008 ಸತ್ಯಾತ್ಮತೀರ್ಥ ಶ್ರೀಪಾದಂಗಳವರ 33 ದಿನಗಳ ಮೈಸೂರು ದಿಗ್ವಿಜಯಕ್ಕೆ ಗುರುವಾರ (ಮೇ 14) ಸಂಜೆ 4.30ಕ್ಕೆ ನಗರದಲ್ಲಿ ಭವ್ಯ ಸ್ವಾಗತ ಕೋರಲಾಗುವುದು ಎಂದು ಉತ್ತರಾದಿ ಮಠದ ವ್ಯವಸ್ಥಾಪಕ ಪಂ. ಶ್ರೀ ಅನಿರುದ್ಧಾಚಾರ್ಯ ಪಾಂಡುರಂಗಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೆರವಣಿಗೆಯೂ ಮಹಾರಾಜ ಕಾಲೇಜು ಮೈದಾನದಿಂದ ಆರಂಭವಾಗಿ ವಿವಿಧ ಕಲಾ ತಂಡಗಳೊಡನೆ ಉತ್ತರಾದಿ ಮಠಕ್ಕೆ ಪಲ್ಲಕ್ಕಿ ಸಮೇತ ಆಗಮಿಸಲಿದೆ.

ಶಾಸಕ ಟಿ.ಎಸ್.ಶ್ರೀವತ್ಸ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಶಾಸಕ ಕೆ.ಹರೀಶ್‌ಗೌಡ, ವಿಪ್ರ ಮುಖಂಡ ಎನ್.ಎಂ.ನವೀನ್‌ಕುಮಾರ್, ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ, ಜಿಲ್ಲಾ ಬ್ರಾಹ್ಮಣ ಸಭಾ ಅಧ್ಯಕ್ಷ ಡಿ.ಟಿ.ಪ್ರಕಾಶ್, ಸಮಾಜ ಸೇವಕ ರಘುರಾಂ ವಾಜಪೇಯಿ, ವಿಶ್ವ ಹಿಂದೂ ಪರಿಷದ್ ರಾಜ್ಯಾಧ್ಯಕ್ಷ ಮಹೇಶ್ ಕಾಮತ್, ಸಮಾಜ ಸೇವಕ ಎಸ್.ಭುಜಂಗ, ಉದ್ಯಮಿ ಅನಂತ್ ನಾಗರಾಜ್, ಸಮಾಜ ಸೇವಕ ಎಸ್.ಬಿ.ವಾಸುದೇವಮೂರ್ತಿ ಇನ್ನಿತರರು ಭಾಗವಹಿಸಲಿದ್ದಾರೆ ಎಂದರು.

ಭವ್ಯ ಮೆರವಣಿಗೆಯಲ್ಲಿ ನಾದಸ್ವರ, ವೀರಗಾಸೆ ಕುಣಿತ, ಚಂಡೆ ನಗಾರಿ, ಡೊಳ್ಳು ಕುಣಿತ, ಬೊಂಬೆ ವೇಷ, ಕಂಸಾಳೆ, ಉಡುಪಿಯ ಬಾಣ ಬಿರುಸು, ಚೆನ್ನೈನ ಚಿತ್ತಾರದ ಆನೆ ಹಾಗೂ ವಿವಿಧ ಭಜನಾ ಮಂಡಳಿಗಳು ಪಾಲ್ಗೊಳ್ಳಲಿವೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ವಿಪ್ರ ಮುಖಂಡ ಎನ್.ಎಂ.ನವೀನ್‌ಕುಮಾರ್, ಆರ್.ಎಸ್.ಸತ್ಯನಾರಾಯಣ, ರಘುವೀರ್ ಸಾಂಗ್ಲಿ, ಪ್ರವೀಣ್‌ಕುಮಾರ್ ಉಪಸ್ಥಿತರಿದ್ದರು.

ಶ್ರೀ ರವಿಶಂಕರ್ ಗುರೂಜಿ ಜನ್ಮ ದಿನ...



ಆರ್ಟ್ ಆಫ್ ಲಿವಿಂಗ್ ಸಂಸ್ಥಾಪಕರಾದ ಗುರುದೇವ ಶ್ರೀ ಶ್ರೀ ರವಿಶಂಕರ್ ಗುರೂಜಿ ಜನ್ಮದಿನದ ಅಂಗವಾಗಿ ಅಪೂರ್ವ ಸ್ನೇಹ ಬಳಗದ ವತಿಯಿಂದ ಚಾಮುಂಡಿಪುರಂನಲ್ಲಿ ಗೋವುಗಳಿಗೆ ಪೂಜೆ ಸಲ್ಲಿಸಿ ಮೇವು ವಿತರಿಸಲಾಯಿತು. ಈ ವೇಳೆ ಬಳಗದ ಅಧ್ಯಕ್ಷ ಅಪೂರ್ವ ಸುರೇಶ್, ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ಜಗದೀಶ್, ದೂರ ರಾಜಣ್ಣ, ಆನಂದ್, ರಾಮಚಂದ್ರರಾವ್, ರಾಮಕೃಷ್ಣ, ಜತ್ತಿ ಪ್ರಸಾದ್, ಮಹದೇವಸ್ವಾಮಿ ಇನ್ನಿತರರು ಹಾಜರಿದ್ದರು.

ನಾಳೆ ಮೈಸೂರಿನ ವಿವಿಧ ಮಲ್ಟಿಪ್ಲೆಕ್ಸ್‌ನಲ್ಲಿ 'ಮಂಗಮಾಯ' ಚಲನಚಿತ್ರ ಬಿಡುಗಡೆ

ಮೈಸೂರು, ಮೇ.13(ಜಿಎ)– ಪುತ್ತೂರಿನ ಬ್ರದರ್ಸ್ ಎಂಟರ್‌ಟೈನ್ಮೆಂಟ್ ಸಂಸ್ಥೆ ಅಡಿಯಲ್ಲಿ ನಿರ್ಮಿಸಿರುವ 'ಮಂಗಮಾಯ' ಚಲನಚಿತ್ರ ಮೇ 15ರಂದು ಮೈಸೂರಿನ ವಿವಿಧ ಮಲ್ಟಿಪ್ಲೆಕ್ಸ್‌ನಲ್ಲಿ ತೆರೆಕಾಣಲಿದೆ ಎಂದು ನಿರ್ದೇಶಕ ಪ್ರಸಾದ್ ಪುತ್ತೂರು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿನಿಮಾ ಚಿತ್ರೀಕರಣ 43 ದಿನಗಳಲ್ಲಿ ಪೂರ್ಣಗೊಂಡಿದ್ದು, ಕಡಿಮೆ ಬಜೆಟ್‌ನೊಂದಿಗೆ ನೈಜ ಘಟನೆ ಆಧಾರಿತ, ಒಂದೇ ದಿನ ನಡೆಯುವ ಘಟನೆಗಳ ಕಥಾ ಹಂದರ ಒಳಗೊಂಡಿದೆ ಎಂದರು.

ಕೋವಿಡ್ ಮೊದಲನೇ ಅಲೆಯ ಸಮಯದಲ್ಲಿ ಉದ್ಯೋಗ ಅರಸಿ ಬೇಸತ್ತ ನಾಯಕ, ಕೊನೆಗೆ ಲಾಡ್ಜ್‌ವೊಂದರಲ್ಲಿ ರೂಂ ಬಾಯ್ ಆಗಿ ಕೆಲಸಕ್ಕೆ ಸೇರುತ್ತಾನೆ. ಎರಡನೇ ಅಲೆಯಲ್ಲಿ ಕಪ್ಪು ಹಣ ತರಲು ಲಾಡ್ಜ್‌ಗೆ ಬಂದಾಗ ಬ್ಯಾಗ್ ಮಂಗಮಾಯ ಆಗಿರುತ್ತದೆ. ನಂತರದ ರೋಚಕ ಘಟನೆಗಳನ್ನು ಸಿನಿಮಾ ಹೊಂದಿದೆ ಎಂದು ವಿವರಿಸಿದರು.


ಚಿತ್ರ ಈಗಾಗಲೇ ಮಂಗಳೂರು, ಉಡುಪಿಯಲ್ಲಿ ಬಿಡುಗಡೆಯಾಗಿದ್ದು, ಉತ್ತಮ ಪ್ರತಿಕ್ರಿಯೆ ಬಂದಿದೆ. ವಿಶೇಷ ಎಂದರೆ ಮೈಸೂರಿನ ವಿದ್ಯಾರಣ್ಯಪುರಂನ ಮನೆಯೊಂದರಲ್ಲಿ ಇಡೀ ಚಿತ್ರೀಕರಣ ನಡೆಸಲಾಗಿದೆ ಎಂದರು. ಗೋಷ್ಠಿಯಲ್ಲಿ ಪ್ರಸನ್ನ ಪುತ್ತೂರು, ಮೊಹಮ್ಮದ್ ನವೀದ್, ಮೊಹಮ್ಮದ್ ಹನೀಫ್ ಹೂಟಗಳ್ಳಿ ಮತ್ತಿತರರು ಉಪಸ್ಥಿತರಿದ್ದರು.

ಜೆ.ಪಿ.ನಗರ ಲಯನ್ಸ್ ಕ್ಲಬ್ ಅಧ್ಯಕ್ಷರಾಗಿ ಧನ್ಯಾ ಸತ್ಯೇಂದ್ರಮೂರ್ತಿ ಆಯ್ಕೆ



ಮೈಸೂರು: ಜೆ.ಪಿ.ನಗರ ಲಯನ್ಸ್ ಕ್ಲಬ್ಬಿನ 2026–27ನೇ ಸಾಲಿನ ನೂತನ ಅಧ್ಯಕ್ಷರಾಗಿ ಶ್ರೀಮತಿ ಧನ್ಯಾ ಸತ್ಯೇಂದ್ರಮೂರ್ತಿ ಆಯ್ಕೆಯಾಗಿದ್ದಾರೆ. ಮೇ 9ರಂದು ಹಾಲಿ ಅಧ್ಯಕ್ಷರಾದ ಲಯನ್ ಬಿ.ಎನ್.ಸುಧಾಕರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಕ್ಲಬ್ಬಿನ ಸಾಮಾನ್ಯ ಸಭೆಯಲ್ಲಿ ಕಾರ್ಯದರ್ಶಿಯಾಗಿ ಲಯನ್ ಗೆಜ್ಜಗಳ್ಳಿ ಮಹೇಶ್, ಕೋಶಾಧಿಕಾರಿಯಾಗಿ ಲಯನ್ ಬಿ.ಕೆ.ಮಾಧವರಾವ್, ಸೇವಾ ಚಟುವಟಿಕೆ ಮುಖ್ಯಸ್ಥರನ್ನಾಗಿ ಸಂಸ್ಥಾಪಕ ಅಧ್ಯಕ್ಷರಾದ ಲಯನ್ ಕೆ.ಎ.ಸಿದ್ದಲಿಂಗಪ್ಪ ಮತ್ತು ಸದಸ್ಯತ್ವ ಸಮಿತಿ ಅಧ್ಯಕ್ಷರನ್ನಾಗಿ ಲಯನ್ ಸತ್ಯೇಂದ್ರಮೂರ್ತಿ ಅವರನ್ನು ಆಯ್ಕೆ ಮಾಡಲಾಯಿತು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು, ಮೇ 13– ಮಂಡಕಳ್ಳಿ ವಿದ್ಯುತ್ ವಿತರಣಾ ಕೇಂದ್ರಗಳ ವ್ಯಾಪ್ತಿಯಲ್ಲಿ ತ್ರೈಮಾಸಿಕ ಅವಧಿ ನಿರ್ವಹಣಾ ಕಾಮಗಾರಿ ಕೆಲಸದ ನಿಮಿತ್ತ ಮೇ 15ರಂದು ಬೆಳಿಗ್ಗೆ 10 ರಿಂದ ಸಂಜೆ 6 ಘಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಹಾರೋಹಳ್ಳಿ, ಮೆಲ್ಲಹಳ್ಳಿ, ಗಳಿಗರಹುಂಡಿ, ಶಿವಪುರ, ಲಕ್ಷ್ಮೀಪುರ, ಹಲಗಯ್ಯನಹುಂಡಿ, ಎ.ಟಿ.ಎಂ.ಇ ಕಾಲೇಜು, ಹೆಚ್.ಎನ್.ಕೆ ಇಂಡಸ್ಟ್ರೀಸ್, ಬನ್ನೂರು ಮುಖ್ಯ ರಸ್ತೆ, ಟಿ.ನರಸೀಪುರ ಮುಖ್ಯ ರಸ್ತೆ, ನಾಡನಹಳ್ಳಿ, ಭುಗತಹಳ್ಳಿ, ವಾಜಮಂಗಲ, ವರುಣ, ದಂಡಿಕೆರೆ, ಪಿಲ್ಲಹಳ್ಳಿ, ಚಿಕ್ಕಹಳ್ಳಿ, ಚೋರನಹಳ್ಳಿ, ಯಾಂದಳ್ಳಿ, ವರಕೋಡು, ಮೋಸಂಬಾಯನಹಳ್ಳಿ, ಬಡಗಲಹುಂಡಿ, ಕೆಂಪೇಗೌಡನಹುಂಡಿ, ಈಗಲ್ ಬರ್ಗ್ ಬಡಾವಣೆ, ವಸಂತನಗರ, ಪ್ರಕೃತಿ ಬಡಾವಣೆ, ಲಾಲ್ ಬಹದ್ದೂರ್ ಶಾಸ್ತ್ರಿ ನಗರ, ಶಾಂತವೇರಿ ಗೋಪಾಲಗೌಡ ನಗರ, ಜೆ.ಎಸ್.ಎಸ್ ಬಡಾವಣೆ 2ನೇ ಹಂತ, ಪೊಲೀಸ್ ಬಡಾವಣೆ 3ನೇ ಹಂತ, ಬಿ.ವಿ.ಎಲ್ ಬಡಾವಣೆ, ಸಪ್ತಮಾತೃಕೆ ಬಡಾವಣೆ, ಹೋಟೆಲ್ ಯತಿನ್, ಮೈ–ಸೆಮ್ ಕಾಲೇಜು, ವಿ.ಟಿ.ಯು ರೀಜನಲ್ ಸೆಂಟರ್, ಲಲಿತಾದ್ರಿಪುರ, ಲಲಿತಾದ್ರಿನಗರ ಬಡಾವಣೆ ಹಾಗೂ ಸುತ್ತ–ಮುತ್ತ. ಮಂಡಕಳ್ಳಿ, ಗೆಜ್ಜಗಳ್ಳಿ ಐ.ಪಿ ಪ್ರದೇಶ, ಉತ್ತನಹಳ್ಳಿ, ಶ್ರೀನಗರ, ರೇಷ್ಮೆ ನಗರ, ಟೀಚರ್ಸ್ ಕಾಲೋನಿ, ಮಹಾಲಕ್ಷ್ಮಿ ಬಡಾವಣೆ, ಆರ್.ಕೆ ಬಡಾವಣೆ, ಭವಾನಿ ಬಡಾವಣೆ, ವಿನಾಯಕ ಬಡಾವಣೆ, ಮಹಾಲಕ್ಷ್ಮಿ ದೃಷ್ಟಿ ಬಡಾವಣೆ, ಕೊಪ್ಪಲೂರು ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ನಿಧನ

ಎಂ.ಎಲ್.ಶಿವಣ್ಣ



ಮೈಸೂರು,ಮೇ13–ಮೈಸೂರು ತಾಲೂಕು ಇಲವಾಲ ಹೋಬಳಿ ಮೇಗಳಾಪುರ ನಿವಾಸಿ ಎಂ.ಎಲ್.ಶಿವಣ್ಣ ಮಂಗಳವಾರ (ಮೇ 12) ನಿಧನರಾದರು. ಮೃತರು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಸ್ವಗ್ರಾಮದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಜ್ಯದಲ್ಲಿ ಅಶಾಂತಿ ಸೃಷ್ಟಿಸಲು ಕೆಪಿಸಿಸಿ ವಕ್ತಾರ ಲಕ್ಷ್ಮಣ್ ಯತ್ನ

● ಕೂಡಲೇ ಅವರ ವಿರುದ್ಧ ಕಾನೂನು ಕ್ರಮವಾಗಲಿ ● ರಾಜ್ಯ ಬಿಜೆಪಿ ವಕ್ತಾರ ಎಂ.ಜಿ.ಮಹೇಶ್ ಆಗ್ರಹ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಬುಧವಾರ ರಾಜ್ಯ ಬಿಜೆಪಿ ವಕ್ತಾರ ಎಂ.ಜಿ.ಮಹೇಶ್ ಮಾತನಾಡಿದರು.

ಮೈಸೂರು, ಮೇ 13(ಎಂಕೆ)– ಆಧಾರ ರಹಿತ ಮಾಹಿತಿ ನೀಡಿ ಜನರ ದಿಕ್ಕು ತಪ್ಪಿಸುತ್ತಿರುವ ಹಾಗೂ ನುಸುಳುಕೋರರಿಗೆ ರಕ್ಷಣೆಗೆ ನೀಡುವ ಮೂಲಕ ರಾಷ್ಟ್ರ ದ್ರೋಹದಲ್ಲಿ ತೊಡಗಿರುವ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಅವರನ್ನು ಕೂಡಲೇ ಬಂಧಿಸಿ, ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ರಾಜ್ಯ ಬಿಜೆಪಿ ವಕ್ತಾರ ಎಂ.ಜಿ.ಮಹೇಶ್ ಆಗ್ರಹಿಸಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಬುಧವಾರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಪಶ್ಚಿಮ ಬಂಗಾಳ, ಬಿಹಾರದಂತೆ ಕರ್ನಾಟಕದಲ್ಲಿ ಬಿಜೆಪಿ ಗೆಲುವು ಸಾಧಿಸಲು ಎಸ್‌ಐಆರ್ (ವಿಶೇಷ ತೀವ್ರ ಪರಿಷ್ಕರಣೆ) ಮೂಲಕ 86 ಲಕ್ಷ ಮತದಾರರನ್ನು ಮತದಾರರ ಪಟ್ಟಿಯಿಂದ ಕೈ ಬಿಡಲಾಗಿದೆ ಎಂದು ಲಕ್ಷ್ಮಣ್ ಹೇಳಿರುವುದು ಬೇಜವಾಬ್ದಾರಿತನದ ಪರಮಾವಧಿಯಾಗಿದೆ ಎಂದರು.

ಅಲ್ಲದೆ ನರಸಿಂಹರಾಜ ಕ್ಷೇತ್ರ ಒಂದರಲ್ಲೇ 43 ಸಾವಿರ ಮುಸ್ಲಿಂ ಮತದಾರರನ್ನು ಮತದಾರರ ಪಟ್ಟಿಯಿಂದ ಕೈ ಬಿಟ್ಟಿದ್ದಾರೆ ಎಂಬುದಕ್ಕೆ ಆಧಾರವಿಲ್ಲ. ಇವರೇನು ಚುನಾವಣಾ ಆಯೋಗವೇ. 2002 ರವರೆಗಿನ ಮತದಾರರ ಪಟ್ಟಿಯಲ್ಲಿ ಯಾರ ಹೆಸರಿತ್ತೋ ಅವರು ಯಾವುದೇ ಹೊಸ ದಾಖಲೆ ಕೊಡುವ ಅಗತ್ಯವಿಲ್ಲ. ಎಸ್‌ಐಆರ್ ಮಾಡುತ್ತಿರುವುದು ಕೂಡ ಸರ್ಕಾರಿ ಸಿಬ್ಬಂದಿಗಳೇ ಹೊರತು ರಾಜಕೀಯ ಪಕ್ಷದವರಲ್ಲ ಎಂದು ತಿಳಿಸಿದರು.

ಎನ್‌ಆರ್ ಕ್ಷೇತ್ರದಲ್ಲಿ ಲಕ್ಷ್ಮಣ್ ಹೇಳುವಂತೆ ಮತದಾರರ ಪಟ್ಟಿಯಿಂದ ಕೈಬಿಟ್ಟಿರುವ 43 ಸಾವಿರ ಮುಸಲ್ಮಾನರು ಎಲ್ಲಿಯವರು... ಯಾವ ದೇಶದವರು... ಹಾಗಾಗಿ ಸುಳ್ಳು ಹೇಳಿಕೆ ನೀಡಿ, ಜನರ ದಿಕ್ಕು ತಪ್ಪಿಸುತ್ತಿರುವುದಲ್ಲದೆ ನುಸುಳುಕೋರರಿಗೆ ರಕ್ಷಣೆ ನೀಡುವ ಮೂಲಕ ರಾಷ್ಟ್ರದ್ರೋಹದ ಕೆಲಸ ಮಾಡುತ್ತಿರುವ ಕೆಪಿಸಿಸಿ ವಕ್ತಾರನನ್ನು ಕೂಡಲೇ ಬಂಧಿಸಬೇಕು. ಆತನ ವಿರುದ್ಧ ರಾಜ್ಯ ಗೃಹ ಇಲಾಖೆ ತತ್‌ಕ್ಷಣ ಕ್ರಮ ಕೈಗೊಳ್ಳಬೇಕು. ಚುನಾವಣಾ ಆಯೋಗ ಕೂಡ ತ್ವರಿತವಾಗಿ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ರಾಜ್ಯದಲ್ಲಿ ಅಶಾಂತಿಯ ವಾತಾವರಣ ಸೃಷ್ಟಿಸಲು ಮುಂದಾಗಿರುವ ಕೆಪಿಸಿಸಿ ವಕ್ತಾರನ ವಿರುದ್ಧ ಬಿಜೆಪಿ ಅಧಿಕೃತವಾಗಿ ದೂರು ನೀಡಲಿದೆ. ಕೇರಳದಲ್ಲಿ ಕಾಂಗ್ರೆಸ್ ಗೆದ್ದಿದ್ದು ಸರಿ. ಸೋತ ಕಡೆ ಸರಿಯಿಲ್ಲ ಎಂದು ಹೇಳುವ ಮೂಲಕ ಅಪಪ್ರಚಾರ ಮಾಡುತ್ತಿರುವ ಕಾಂಗ್ರೆಸ್ ಅನ್ನು ತಿರಸ್ಕರಿಸಲು ರಾಜ್ಯದ ಜನತೆ ಕಾಯುತ್ತಿದ್ದಾರೆ ಎಂದು ಎಂ.ಜಿ.ಮಹೇಶ್ ಹರಿಹಾಯ್ದರು.

ತನಿಖೆಯಾಗಬೇಕು: ನೀಟ್ ಪರೀಕ್ಷೆಗೂ ಮುನ್ನ ಪ್ರಶ್ನೆ ಪತ್ರಿಕೆ ಬಹಿರಂಗ ಆಗಿರುವುದರ ಹಿಂದೆ ಸ್ಥಾಪಿತ ಹಿತಾಸಕ್ತಿಗಳ ಕೈವಾಡವಿದೆ. ಇದರಿಂದ ಪರೀಕ್ಷೆಗೆ ಸಿದ್ಧವಾಗಿದ್ದ ವಿದ್ಯಾರ್ಥಿಗಳಿಗೆ ತೊಂದರೆಯಾಗಿದ್ದು, ಕೇಂದ್ರ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಲಿದೆ. ಮುಂದಿನ ದಿನಗಳಲ್ಲಿ ಈ ರೀತಿ ಆಗದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಿದೆ. ಪ್ರಶ್ನೆ ಪತ್ರಿಕೆ ಸೋರಿಕೆ ಕುರಿತು ತನಿಖೆಯಾಗಬೇಕು ಎಂದರು.

ಅಪಪ್ರಚಾರ: ಇಂಧನ ಬಳಕೆ ಮಿತವ್ಯಯ ಹಾಗೂ ಚಿನ್ನ ಖರೀದಿ ಕಡಿಮೆ ಮಾಡುವಂತೆ ಪ್ರಧಾನಿ ಮೋದಿ ಸಂದೇಶ ನೀಡಿರುವ ವಿಚಾರದಲ್ಲಿ ಪ್ರತಿ ಪಕ್ಷಗಳು ಕೇಂದ್ರದ ವಿರುದ್ಧ ಅಪಪ್ರಚಾರ ಮಾಡುತ್ತಿವೆ. ಇಂಧನ ಮತ್ತು ಚಿನ್ನದ ಅತಿಯಾದ ಆಮದಿನಿಂದಾಗಿ ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿಯುತ್ತಿದೆ. ಇದನ್ನು ತಪ್ಪಿಸುವ ಸಲುವಾಗಿ ಪ್ರಧಾನಿ ಮೋದಿ ದೇಶದ ಜನರಿಗೆ ಸಂದೇಶ ನೀಡಿದ್ದಾರೆ ಎಂದರು.

ಪಾರಂಪರಿಕ ಕಟ್ಟಡಗಳಲ್ಲ...!

"ಮೈಸೂರಿನ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಪಾರಂಪರಿಕ ಕಟ್ಟಡಗಳಲ್ಲ ಎಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ಹೇಳಿದರು.

ಚಾಮುಂಡಿಬೆಟ್ಟದ ದೇಗುಲ ಮತ್ತು ಅರಮನೆ ಆವರಣದಲ್ಲಿರುವ ವರಾಹಸ್ವಾಮಿ ದೇಗುಲಗಳು ಮಾತ್ರ ಪಾರಂಪರಿಕ ಕಟ್ಟಡಗಳಾಗಿದ್ದು, ಅರಮನೆ, ಟೌನ್‌ಹಾಲ್ ಕೂಡ ಪಾರಂಪರಿಕ ಕಟ್ಟಡಗಳಲ್ಲ. ಅಂದಿನ ಅರಸರ ಕಾಲದಲ್ಲಿ ನಿರ್ಮಿಸಿರುವ ಕಟ್ಟಡಗಳನ್ನು ಪಾರಂಪರಿಕ ಕಟ್ಟಡಗಳೆಂದು ಘೋಷಿಸಬೇಕೆಂಬ ಒತ್ತಾಯ ಹಲವಾರು ವರ್ಷಗಳಿಂದ ಕೇಳಿ ಬರುತ್ತಿದೆ. ಆದರೆ ಅದು ಇನ್ನೂ ಅನುಷ್ಠಾನಕ್ಕೆ ಬಂದಿಲ್ಲ. ಅಧಿಕೃತ ದಾಖಲೆಗಳ ಪ್ರಕಾರ ಚಾಮುಂಡಿಬೆಟ್ಟದ ದೇಗುಲ ಮತ್ತು ವರಾಹ ಸ್ವಾಮಿ ದೇಗುಲ ಮಾತ್ರ ಪಾರಂಪರಿಕ ಕಟ್ಟಡಗಳಾಗಿವೆ. ದೇವರಾಜ ಮಾರುಕಟ್ಟೆಯ ಶೇ.15ರಷ್ಟು ಭಾಗ ಮಾತ್ರ ರಾಜರ ಕಾಲದಲ್ಲಿ ನಿರ್ಮಾಣವಾಗಿದೆ. ಇನ್ನುಳಿದ ಭಾಗ ಇತ್ತೀಚಿನ ವರ್ಷಗಳಲ್ಲಿ ನಿರ್ಮಾಣವಾಗಿದೆ ಎಂದು ತಿಳಿಸಿದರು.

ಮೈಸೂರು ಭಾಗದ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಮಹದುದ್ದೇಶದಿಂದ

ಜೂ.5ರಿಂದ ಮೈಸೂರಲ್ಲಿ ಮೈಸೂರು ಟ್ರಾವೆಲ್ ಮಾರ್ಟ್



ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್ ಅಧ್ಯಕ್ಷ ಬಿ.ಎಸ್.ಪ್ರಶಾಂತ್ ಮಾತನಾಡಿದರು.

ಮೈಸೂರು, ಮೇ.13 (ಜಿಎ)– ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್, ಕೇಂದ್ರ, ರಾಜ್ಯ ಪ್ರವಾಸೋದ್ಯಮ ಇಲಾಖೆ, ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳ ವತಿಯಿಂದ ವಿಜಯನಗರದಲ್ಲಿರುವ ಜಗನ್ನಾಥ ಸೆಂಟರ್ ಆರ್ಟ್ಸ್ ಅಂಡ್ ಕಲ್ಚರ್ ಸಭಾಂಗಣದಲ್ಲಿ ಜೂ.5ರಿಂದ 7ರವರೆಗೆ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಉತ್ತೇಜನ ದೃಷ್ಟಿಯಿಂದ 'ಮೈಸೂರು ಟ್ರಾವೆಲ್ ಮಾರ್ಟ್' ವಿಶಿಷ್ಟ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಟ್ರಾವೆಲ್ಸ್ ಅಸೋಸಿಯೇಷನ್ ಅಧ್ಯಕ್ಷ ಬಿ.ಎಸ್.ಪ್ರಶಾಂತ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೂ.5ರಂದು ಬೆಳಗ್ಗೆ 11 ಗಂಟೆಗೆ ಕೇಂದ್ರ ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಕಾವತ್, ರಾಜ್ಯ ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ 'ಮೈಸೂರು ಟ್ರಾವೆಲ್ ಮಾರ್ಟ್'ಗೆ ಚಾಲನೆ ನೀಡುವರು. ಮುಖ್ಯ ಅತಿಥಿಗಳಾಗಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಕೆ.ಹರೀಶ್‌ಗೌಡ ಭಾಗವಹಿಸಲಿದ್ದಾರೆ ಎಂದರು.

ಜೂ.6ರಂದು ಬೆಳಗ್ಗೆ ಮಾಧ್ಯಮ ಮತ್ತು ಪ್ರವಾಸೋದ್ಯಮ, ಮೈಸೂರಿನಲ್ಲಿ ಫಿಲಂ ಸಿಟಿ, ಪ್ರವಾಸೋದ್ಯಮ ಹಾಗೂ ಸುಸ್ಥಿರ ಅಭಿವೃದ್ಧಿ ವಿಷಯಗಳ ಬಗ್ಗೆ ಹಿರಿಯ ಪತ್ರಕರ್ತರು, ಮೈಸೂರಿನ ಖ್ಯಾತ ನಟ, ನಟಿಯರು ಚರ್ಚೆಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಪ್ರಮುಖವಾಗಿ ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್, ಚಲನಚಿತ್ರ ನಿರ್ದೇಶಕ ರಾಜೇಂದ್ರಸಿಂಗ್ ಬಾಬು, ಮಾಜಿ ಸಂಸದ ಪ್ರತಾಪ್ ಸಿಂಹ, ವಿಮಾನ ನಿಲ್ದಾಣ ಪ್ರಾಧಿಕಾರ ಮಾಜಿ ನಿರ್ದೇಶಕ ಮಂಜುನಾಥ್ ಸೇರಿದಂತೆ ವಿವಿಧ ಕ್ಷೇತ್ರದ ತಜ್ಞರು ಭಾಗವಹಿಸಲಿದ್ದಾರೆ.

ಬಳಿಕ ಅದೇ ದಿನ ಸಂಜೆ ಸ್ಕಾಲ್ ಇಂಟರ್ ನ್ಯಾಷನಲ್ ಮೈಸೂರು ಟೂರಿಸಂ ಅಂಡ್ ಹಾಸ್ಪಿಟಾಲಿಟಿ ನೈಟ್ ಎಂಬ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಜರುಗಲಿದೆ ಎಂದು ಹೇಳಿದರು.

ಜೂ.7ರಂದು ಸಮಾರೋಪ ಸಮಾರಂಭ ನಡೆಯಲಿದ್ದು, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮೈಸೂರು ವಿವಿ ಕುಲಸಚಿವೆ ಸವಿತಾ ಭಾಗ ವಹಿಸಲಿದ್ದಾರೆ. ಎಲ್ಲಾ ಕಾರ್ಯಕ್ರಮಗಳು ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ನಡೆಯಲಿವೆ. ಮೈಸೂರು ಮಾತ್ರವಲ್ಲದೆ, ಕೊಡಗು, ಜೈಪುರ, ರಾಜಸ್ಥಾನ, ಕೇರಳ, ಭುವನೇಶ್ವರ್, ಗುಜರಾತ್, ಜಮ್ಮು– ಕಾಶ್ಮೀರ ಸೇರಿದಂತೆ ವಿವಿಧೆಡೆಗಳಿಂದ ಆಗಮಿಸುವವರೂ ಈ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಅದರಲ್ಲಿಯೂ ದೇಶದ ವಿವಿಧ ಭಾಗದಿಂದ 450ಕ್ಕೂ ಹೆಚ್ಚು ಹೂಡಿಕೆದಾರರು ಆಗಮಿಸಲಿದ್ದಾರೆ. ಮೂರೂ ದಿನ ಸುಮಾರು 10 ಸಾವಿರ ಮಂದಿ ಭೇಟಿ ನೀಡುವ ನಿರೀಕ್ಷೆಯಿದೆ ಎಂದು ವಿವರಿಸಿದರು.

ಸ್ಕಾಲ್ ಇಂಟರ್ ನ್ಯಾಷನಲ್ ಮೈಸೂರು ಅಧ್ಯಕ್ಷ ಸಿ.ಎ.ಜಯಕುಮಾರ್, ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಸಮರ್ಥ ವೈದ್ಯ, ಮಂಜುನಾಥ್ ಉಪಸ್ಥಿತರಿದ್ದರು.

ಮಾರ್ಟ್‌ನಲ್ಲಿ 50ಕ್ಕೂ ಹೆಚ್ಚು ಹೂಡಿಕೆದಾರರು ಭಾಗವಹಿಸುವರು

ಅನುದಾನದ ಕೊರತೆ

"ಮೈಸೂರಿಗೆ ಎಲ್ಲವನ್ನು ಮಹಾರಾಜರು ನೀಡಿದ್ದಾರೆ. ಅದನ್ನು ನಾವು ಉಳಿಸಿಕೊಳ್ಳಬೇಕಿದೆ. ಆದರೆ, ಅವುಗಳಿಗೆ ಉತ್ತೇಜನ ನೀಡಲು ಪ್ರವಾಸೋದ್ಯಮ ಇಲಾಖೆಯಲ್ಲಿ ಅನುದಾನವೇ ಇಲ್ಲ. ಬೇರೆ ರಾಜ್ಯಗಳಲ್ಲಿ ಪ್ರವಾಸೋದ್ಯಮಕ್ಕೆ ಒತ್ತು ನೀಡಿರುವುದರಿಂದ ಅಲ್ಲಿ ಉತ್ತಮ ವಹಿವಾಟು ನಡೆಯುತ್ತಿದೆ. ಮೈಸೂರು ಪ್ರವಾಸೋದ್ಯಮ ಕೇವಲ ದಸರಾಗೆ ಸೀಮಿತವಾಗಿದೆ. ಪ್ರವಾಸಿಗರು ಬೆಳಗ್ಗೆ ಮೈಸೂರಿಗೆ ಬಂದು ನಂತರ ಸಂಜೆ ಆಗುತ್ತಿದ್ದಂತೆ ಕೇರಳ ಕಡೆ ಪ್ರಯಾಣಿಸುತ್ತಾರೆ. ಆದ್ದರಿಂದ ಸಂಜೆ ನಂತರ ನಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡು ಯಾವುದಾದರೂ ನಿರಂತರ ಕಾರ್ಯಕ್ರಮ ಆಯೋಜಿಸಬೇಕಿದೆ.

–ಬಿ.ಎಸ್.ಪ್ರಶಾಂತ್, ಅಧ್ಯಕ್ಷ, ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್

ಹೈಡ್ರೋವೀಡ್ ಗಾಂಜಾ ಮಾರಾಟ ಯತ್ನ; ಬಿಸಿಎ ವಿದ್ಯಾರ್ಥಿನಿ ಬಂಧನ

35 ಲಕ್ಷ ರೂ. ಗಾಂಜಾ ವಶಕ್ಕೆ

ಮಂಗಳೂರು: ಹೈಡ್ರೋವೀಡ್ ಗಾಂಜಾ ಮಾರಾಟಕ್ಕೆ ಯತ್ನಿಸುತ್ತಿದ್ದ ಬಿಸಿಎ ವಿದ್ಯಾರ್ಥಿನಿಯನ್ನು ಬಂಧಿಸಿ, 35ಲಕ್ಷ ರೂ. ಮೌಲ್ಯದ 1.42 ಕೆ.ಜಿ. ಗಾಂಜಾ ವಶಪಡಿಸಿಕೊಳ್ಳಲಾಗಿದೆ ಎಂದು ಮಂಗಳೂರು ನಗರ ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ.

ಶಿವಮೊಗ್ಗ ಜಿಲ್ಲೆಯ ಸಾಗರ ನಿವಾಸಿ, ಸದ್ಯ ಕುಂದಾಪುರ ಕಾಲೇಜೊಂದರಲ್ಲಿ ಅಂತಿಮ ವರ್ಷದ ಬಿಸಿಎ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿನಿ ಸುಹಾನ (21) ಬಂಧಿತ ಆರೋಪಿ. ಮೇ 12ರಂದು ಮಾರಾಟ ಮಾಡಲೆಂದು ಸುಹಾನ ಹೈಡ್ರೋವೀಡ್ ಗಾಂಜಾವನ್ನು ಸಾಗಿಸುತ್ತಿದ್ದಳು. ಖಚಿತ ಮಾಹಿತಿ ಮೇರೆಗೆ ಪಣಂಬೂರು ಎಸಿಪಿ ತಂಡ ಹಾಗೂ ಮುಲ್ಕಿ ಠಾಣೆಯ ಪೊಲೀಸರು ತಂಡ ಕಾರ್ಯಾಚರಣೆ ನಡೆಸಿ ಮಂಗಳೂರು ನಗರದ ಮುಲ್ಕಿ ರೈಲ್ವೇ ಸ್ಟೇಷನ್ ರಸ್ತೆಯಲ್ಲಿ ದಾಳಿ ನಡೆಸಿ ಆಕೆಯನ್ನು ವಶಕ್ಕೆ ಪಡೆದಿದ್ದಾರೆ. ಅವಳ ಬಳಿ ಇದ್ದ ಸುಮಾರು 35 ಲಕ್ಷ ರೂ. ಮೌಲ್ಯದ ಸುಮಾರು 1 ಕೆಜಿ 42 ಗ್ರಾಮ್ ಹೈಡ್ರೋವೀಡ್ ಗಾಂಜಾ ಮಾದಕ ದ್ರವ್ಯವನ್ನು ವಶಪಡಿಸಿಕೊಂಡಿದ್ದಾರೆ. ಜೊತೆಗೆ ಕೃತ್ಯಕ್ಕೆ ಬಳಸಿದ ಮೊಬೈಲ್ ಫೋನ್ ಮತ್ತು ಇತರ ಸೊತ್ತನ್ನು ವಶಪಡಿಸಿಕೊಳ್ಳಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.5.2026 ಗುರುವಾರ, ಮಳೆ ನಕ್ಷತ್ರ: ಕೃತ್ತಿಕ 11.05.2026ರಿಂದ 24.05.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ರೇವತಿ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11 ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.

■ **ಆರೋಗ್ಯ ಭಾರತಿ, ಮೈಸೂರು ಮತ್ತು ಮಣಿಪಾಲ್ ಆಸ್ಪತ್ರೆ, ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ, ಮೈಸೂರು ಜಿಲ್ಲಾ ಸಂಚಾರಿ ನೇತ್ರ ಚಿಕಿತ್ಸಾ ಘಟಕ ಮತ್ತು ಕೆ.ಆರ್. ಆಸ್ಪತ್ರೆ** : ಉಚಿತ ಕಣ್ಣಿನ ತಪಾಸಣೆ, ಶಸ್ತ್ರ ಚಿಕಿತ್ಸಾ ಶಿಬಿರ, ಸ್ಥಳ: #136, 2ನೇ ಮುಖ್ಯ ರಸ್ತೆ, 11ನೇ ಅಡ್ಡ ರಸ್ತೆ, ಜಯನಗರ, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಚರ್ಮ, ಬೆನ್ನುಮೂಳೆ ಮತ್ತು ಕೀಲು ನೋವು ಸಮಸ್ಯೆ, ಬೊಜ್ಜು, ಸಕ್ಕರೆ ಕಾಯಿಲೆ, ಬಿಪಿ, ಒತ್ತಡ, ಆತಂಕ, ಬಾಲನೆರೆ, ದೃಷ್ಟಿಮಾಂದ್ಯ, ತಲೆನೋವು, ಕೆಮ್ಮು, ಅಸ್ತಮಾ, ಪಿಸಿಓಡಿ, ಪುರುಷ ಹಾಗೂ ಸ್ತ್ರೀ ಬಂಜೆತನ, ಆರ್ಥರೈಟಿಸ್, ಸಂಧಿವಾತ, ಆಮವಾತ, ಗೌಟ್, ಕುತ್ತಿಗೆನೋವು ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ವೆರಿಕೋಸ್ ವೇನ್ಸ್ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಸೂತ್ರ ಆಯುರ್ಧಾಮ**: ವೆರಿಕೋಸ್ ವೇನ್ಸ್ ಉಚಿತ ತಪಾಸಣೆ ಮತ್ತು ಸಲಹಾ ಶಿಬಿರ, ಕಾಲಿನ ರಕ್ತನಾಳ ಊತ, ಕಾಲಿನ ನೋವು, ಉಬ್ಬರ, ಚರ್ಮದ ಬಣ್ಣ ಬದಲಾವಣೆ, ಕಾಲಿನಲ್ಲಿ ಜೋಮು ಹಿಡಿಯುವುದು, ವಾಸಿಯಾಗದ ಗಾಯಗಳ ತಪಾಸಣೆ ಮತ್ತು ಸಲಹಾ ಶಿಬಿರ, ಸ್ಥಳ: ಸೂತ್ರ ಆಯುರ್ಧಾಮ, ಜೆಎಲ್‌ಬಿ ರಸ್ತೆ, ಚಾಮುಂಡಿಪುರಂ. ಬೆಳಗ್ಗೆ 10 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಬಿ.ಎನ್. ಬಹದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಬ್ಯುಸಿನೆಸ್ ಅಡ್ಮಿನಿಸ್ಟ್ರೇಷನ್** : ಸಮತಾ ಉತ್ಸವ, ಉದ್ಘಾಟನೆ : ಪ್ರೊ. ಎಸ್.ಜೆ. ಮಂಜುನಾಥ್, ಪ್ರೊ.ಡಿ. ಆನಂದ್, ಪ್ರಾಸ್ತಾವಿಕ ಭಾಷಣ : ರಂಜಾನ್ ದರ್ಗಾ, ಅಧ್ಯಕ್ಷತೆ : ಬಿಮ್ಸ್ ಅಧ್ಯಕ್ಷ ಪ್ರೊ. ಆರ್. ಮಹೇಶ್, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಅಂತರ್ಗತ ಬೆಳವಣಿಗೆ ಮತ್ತು ಅಭಿವೃದ್ಧಿ ಸಂಶೋಧನಾ ಕೇಂದ್ರ** : ಡಾ. ಡಿ.ಸಿ. ನಂಜುಂಡ ಅವರ ಎರಡು ಕೃತಿಗಳ ಬಿಡುಗಡೆ ಸಮಾರಂಭ, ಕೃತಿ ಬಿಡುಗಡೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಉಪಸ್ಥಿತರು : ಶಾಸಕ ಟಿ.ಎಸ್. ಶ್ರೀವತ್ಸ, ವಕೀಲೆ ಶ್ರೀಮತಿ ಡಾ. ಬಿ.ಎಸ್. ಹೇಮಲತಾ, ಶಿಕ್ಷಣ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಮಂಟೇಲಿಂಗಾಚಾರ್, ಶ್ರೀಮತಿ ಮೀನಾಕ್ಷಿ ಶ್ರೀಷಾ, ಹೆಚ್.ಎಸ್. ನಂಜುಂಡಸ್ವಾಮಿ, ಸ್ಥಳ: ಜಿಲ್ಲಾ ಪತ್ರಕರ್ತರ ಭವನ, ಅಗ್ರಹಾರ, ಬೆಳಗ್ಗೆ 11 ರಿಂದ.

■ **ಜನರಿಗಾಗಿ ಸೇವಾ ಸಮಿತಿ** : ಅಗ್ರಹಾರ ವೃತ್ತದಲ್ಲಿರುವ ಬಸ್ ನಿಲ್ದಾಣದಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಉದ್ಘಾಟನಾ ಸಮಾರಂಭ, ಉದ್ಘಾಟನೆ : ವೆಂಕಟೇಶ್, ಮುಖ್ಯ ಅತಿಥಿಗಳು : ಸಮಿತಿ ಅಧ್ಯಕ್ಷ ಮಹೇಶ್ ಕುಮಾರ್, ವೀರಶೈವ ಲಿಂಗಾಯತ ಮುಖಂಡ ಮಾರ್ಬಳ್ಳಿ ಕುಮಾರ್, ಪಾಲಿಕೆ ಮಾಜಿ ಸದಸ್ಯರಾದ ಬಿ.ವಿ. ಮಂಜುನಾಥ್, ಪಾರ್ಥಸಾರಥಿ, ಕೆ.ಆರ್. ಬ್ಯಾಂಕ್ ಅಧ್ಯಕ್ಷ ಬಸಪ್ಪ, ಇನ್ಸ್‌ಪೆಕ್ಟರ್ ಧನರಾಜ್, ಮಹಿಳಾ ಸಬ್ ಇನ್ಸ್‌ಪೆಕ್ಟರ್ ಪೂಜಾ, ಆರಾಧ್ಯ ಮಹಾಸಭಾ ಅಧ್ಯಕ್ಷ ಕುಮಾರ್ ಆರಾಧ್ಯ, ಕನ್ನಡ ಕ್ರಾಂತಿದಳ ಅಧ್ಯಕ್ಷೆ ತೇಜಸ್ವಿ ನಾಗಲಿಂಗಸ್ವಾಮಿ, ಕಮಲ ನಟರಾಜ್, ಮಹದೇವಮ್ಮ, ನಂಜುಂಡಸ್ವಾಮಿ, ನಾಗರಾಜ್ ನಾಯಕ್, ಸ್ಥಳ: ಅಗ್ರಹಾರ, ಬೆಳಗ್ಗೆ 11ಕ್ಕೆ.

■ **ಶ್ರೀ ವಾಸುದೇವ ಮಹಾರಾಜ್ ಫೌಂಡೇಷನ್** : ವಿಶ್ವ ಅಮ್ಮನ ದಿನಾಚರಣೆ ಅಂಗವಾಗಿ ಮಾತಾ ವಿಜಯ ಕುಮಾರಿ ವಿ. ರಾವ್ ಪ್ರಶಸ್ತಿ ಪ್ರದಾನ ಸಮಾರಂಭ, ಮಾತೆಗೆ ಪುಷ್ಪಾರ್ಚನೆ : ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಪ್ರಶಸ್ತಿ ಪ್ರದಾನ : ಸಂಸ್ಕೃತ ವಿದುಷಿ ಡಾ. ಕೆ. ಲೀಲಾಪ್ರಕಾಶ್, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉಪಸ್ಥಿತರು : ಡಾ. ಎಸ್. ವೆಂಕಟೇಶ್, ಎನ್. ಶ್ರೀನಿವಾಸನ್, ಶ್ರೀಮತಿ ಎಂ.ವಿ. ಅನಿತಾ, ಕೆ.ಆರ್. ಯೋಗನರಸಿಂಹನ್, ಸ್ಥಳ: ಜಿಲ್ಲಾ ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಬೆಳಗ್ಗೆ 11.30ಕ್ಕೆ.

■ **ಭಾನವಿ ಕ್ಲಿನಿಕ್** : ಉದ್ಘಾಟನಾ ಸಮಾರಂಭ, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಜಿಲ್ಲಾ ಆರೋಗ್ಯಾಧಿಕಾರಿ ಡಾ. ಪಿ.ಸಿ. ಕುಮಾರಸ್ವಾಮಿ, ಸ್ಥಳ: ಭಾನವಿ ಕ್ಲಿನಿಕ್, 449, ಗ್ರೌಂಡ್ ಫ್ಲೋರ್, 10ನೇ ಕ್ರಾಸ್, ಇ ಬ್ಲಾಕ್, ಅಕ್ಕಮಹಾದೇವಿ ರಸ್ತೆ, ಸಂಜೆ 5ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ** : ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ವಿದ್ಯಾವರ್ಧಕ ಕಾನೂನು ಕಾಲೇಜು**: ವಿದ್ಯೋತ್ಸವ, ಉದ್ಘಾಟನೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು : ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣನವರ್, ಅಧ್ಯಕ್ಷ ಎಸ್. ಶಿವಲಿಂಗಯ್ಯ, ಸ್ಥಳ: ಕಾಲೇಜು ಆವರಣ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ದೈಹಿಕ ದೀಕ್ಷೆ ಅರಿವಿನಿಂದ ಆರೋಗ್ಯದತ್ತ ಬಾನುಲಿ ಸರಣಿ ಕಾರ್ಯಕ್ರಮ, ಪ್ರಸ್ತುತಿ–ಡಾ.ಕುಲದೀಪ್.ಎನ್, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಮತ್ತು ಸಂಜೆ 5.30–ಚೂಟಿ ಚೂಟಿ ಚುಟುಕ್ ಗುಳುಂ ಗುಟುಕ್–ಶಿಶು ಗೀತೆಗಳ ಕಾರ್ಯಕ್ರಮ, 8.35 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಹೈದರಾಬಾದ್ ಸಹೋದರರ ಯುಗಳ ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಸುತ್ತಮುತ್ತ: ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳ ಪ್ರಮುಖ ಸಭೆ ಸಮಾರಂಭಗಳ ಪರಿಚಯಾತ್ಮಕ ಕಾರ್ಯಕ್ರಮ. ಪ್ರಸ್ತುತಿ–ಚಂದನಾ ಸಿ ಹಾಗೂ ಅರ್ಚನಾ. ಪಿ ಆರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ಸಂಧ್ಯಾರಾಗ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. 'ಹಣ್ಣು ಹೊನ್ನು'–ತೋಟಗಾರಿಕಾ ಬೆಳೆಗಳ ಸುಸ್ಥಿರ ಬೇಸಾಯ ಕುರಿತ ಬಾನುಲಿ ಸರಣಿ. ತಾಳೆ ಬೆಳೆ ವಿಸ್ತರಣೆ, ಅವಕಾಶಗಳು ಮತ್ತು ಇಲಾಖೆ ಸವಲತ್ತುಗಳನ್ನ ಕುರಿತು ಸಂವಾದ. ಭಾಗವಹಿಸುತ್ತಾರೆ–ಟಿ.ನರಸೀಪುರ ತಾಲ್ಲೂಕು, ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರಾದ ಎಂ.ಶಾಂತಾ ಮತ್ತು ಟಿ.ನರಸೀಪುರ ತಾಲೂಕು, ಸೋಸಲೆ ಹೋಬಳಿ ಕಳ್ಳಿಪುರ ಗ್ರಾಮದ ಮಹದೇವಸ್ವಾಮಿ ಕೆ.ಎಸ್., ಪ್ರಸ್ತುತಿ–ಎನ್.ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ಯುವವಾಣಿ–ಹಲೋ ಯುವವಾಣಿ–ನೇರ ಫೋನ್–ಇನ್ ಕಾರ್ಯಕ್ರಮ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಕುರಿತ ರಸಪ್ರಶ್ನೆ ಕಾರ್ಯಕ್ರಮ.ನಡೆಸಿಕೊಡುತ್ತಾರೆ–ನಿವೇದಿತಾ .ಎಚ್., 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಕೃಷ್ಣನ್ .ವಿ. –ಹಾಡುಗಾರಿಕೆ, 10.00 ನಾಟಕ–ತಪ್ಪಿಸಿಕೊಂಡವರು, ರಚನೆ–ಹೆಚ್.ಎನ್.ದ್ವಾರಕಾನಾಥ್, ನಿರ್ಮಾಣ–ಶಿವಶಂಕರ್ ಕಾಣಜನಾವರ, 10.30 ಸವಿನೆನಪು

ಮೈಸೂರಿನ ಯಾದವಗಿರಿ ರೈಲ್ವೆ ನ್ಯೂ ಗೂಡ್ಸ್ ಶೆಡ್ ಸಂಪರ್ಕ ರಸ್ತೆ ವಾಹನ ಸಂಚಾರಕ್ಕೆ ಮುಕ್ತ

- ರೈಲ್ವೆ ಇಲಾಖೆ ನಿರ್ಮಿಸಿದ್ದ ಕಬ್ಬಿಣದ ಗ್ರಿಲ್ ತಡೆಗೋಡೆ ತೆರವು
- ಸಂಸದ ಯದುವೀರ್, ರೈಲ್ವೆ ಇಲಾಖೆ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ವಾಹನ ಸಂಚಾರಕ್ಕೆ ಅವಕಾಶ
- ಗೂಡ್ಸ್ ಲಾರಿಗಳು ರಿಂಗ್ ರಸ್ತೆಗೆ ನೇರವಾಗಿ ಸಾಗಲು ಈಗ ಅವಕಾಶ
- ಹಲವು ವರ್ಷದ ಸಮಸ್ಯೆಗೆ ಕೊನೆಗೂ ಪರಿಹಾರ
- ಡೀಸೆಲ್, ಸಮಯ ಉಳಿತಾಯ; ಟ್ರಾಫಿಕ್ ಜಾಮ್ ಸಮಸ್ಯೆ ಪರಿಹಾರ
- ಗೂಡ್ಸ್ ಶೆಡ್‌ನಲ್ಲಿ ಕ್ಯಾಂಟೀನ್ ಸೇರಿ ಮೂಲ ಸೌಕರ್ಯ ಕಲ್ಪಿಸುವ ಭರವಸೆ

ಮೈಸೂರು, ಮೇ13(ಬಿಎಲ್‌ಯು)– ಮೈಸೂರಿನ ಯಾದವಗಿರಿ ನ್ಯೂ ಗೂಡ್ಸ್ ಶೆಡ್ ಬಳಿ ರಿಂಗ್ ರೋಡ್‌ಗೆ ಸಂಪರ್ಕ ಕಲ್ಪಿಸುವ ರಸ್ತೆಗೆ ಅಡ್ಡಲಾಗಿ ರೈಲ್ವೆ ಇಲಾಖೆಯವರು ನಿರ್ಮಿಸಿದ್ದ ಕಬ್ಬಿಣದ ತಡೆಗೋಡೆಯ ತೆರವುಗೊಳಿಸುವ ಮೂಲಕ ಗೂಡ್ಸ್ ಲಾರಿ ಸೇರಿದಂತೆ ಇತರೆ ವಾಹನಗಳ ಸಂಚಾರಕ್ಕೆ ಇಂದು ಮುಕ್ತಗೊಳಿಸಲಾಯಿತು.

ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಒಡೆಯರ್, ನೈರುತ್ಯ ರೈಲ್ವೆಯ ಮೈಸೂರು ವಿಭಾಗದ ಸಹಾಯಕ ವಿಭಾಗೀಯ ವ್ಯವಸ್ಥಾಪಕ ಶಮಾಸ್ ಅಮೀದ್, ಸೀನಿಯರ್ ಡಿವಿಷನಲ್ ಚೀಫ್ ಇಂಜಿನಿಯರ್ ರೋಹನ್ ಡಾಂಗ್ರೆ ಅವರ ಸಮ್ಮುಖದಲ್ಲಿ ಕಬ್ಬಿಣದ ತಡೆಗೋಡೆ ತೆರವು ಮಾಡಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು.

ರೈಲ್ವೆ ವ್ಯಾಗನ್‌ಗಳಿಂದ ಬರುವ ಅಕ್ಕಿ, ಸಿಮೆಂಟ್, ಗೊಬ್ಬರ ಸೇರಿದಂತೆ ಇತರೆ ವಸ್ತುಗಳನ್ನು ಅನ್ ಲೋಡ್ ಮಾಡಿ ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಸೇರಿದಂತೆ ಇತರೆ ಜಿಲ್ಲೆಗಳಿಗೆ ಸಾಗಾಣಿಕೆ ಮಾಡಲಾಗುತ್ತದೆ. ಪ್ರತಿ ದಿನ ಕನಿಷ್ಠ 700 ಗೂಡ್ಸ್ ಲಾರಿಗಳು ನ್ಯೂ ಗೂಡ್ಸ್ ಶೆಡ್‌ನಿಂದ ವಿವಿಧ ವಸ್ತುಗಳನ್ನು ಸಾಗಣೆ ಮಾಡುತ್ತವೆ.

ಆದರೆ ಗೂಡ್ಸ್ ಶೆಡ್‌ನಿಂದ ರಿಂಗ್ ರೋಡ್‌ಗೆ ಸಂಪರ್ಕ ಕಲ್ಪಿಸುವ ರಸ್ತೆಗೆ ರೈಲ್ವೆ ಇಲಾಖೆಯವರು ಕೆಲ ವರ್ಷಗಳ ಹಿಂದೆ ಕಬ್ಬಿಣದ ಗ್ರಿಲ್‌ನ ತಡೆಗೋಡೆ ನಿರ್ಮಿಸಿ ರಸ್ತೆ ಸಂಪರ್ಕವನ್ನು ಸಂಪೂರ್ಣ ಮುಚ್ಚಿದ್ದರು. ಇದರಿಂದ ರೈಲ್ವೆ ವ್ಯಾಗನ್‌ಗಳಲ್ಲಿ ಬರುವ ವಸ್ತುಗಳನ್ನು ಸಾಗಾಣಿಕೆ ಮಾಡುವ ಗೂಡ್ಸ್ ಲಾರಿಗಳು ಅನಿವಾರ್ಯವಾಗಿ ಬನ್ನಿಮಂಟಪದ ಶ್ರೀನಿವಾಸ ಥಿಯೇಟರ್ ರಸ್ತೆಯಿಂದ ರಿಂಗ್ ರಸ್ತೆ ಮಾರ್ಗವಾಗಿ ಸಂಚರಿಸುತ್ತಿದ್ದವು. ಆದರೆ 700ಕ್ಕೂ ಹೆಚ್ಚು ಲಾರಿಗಳು ಸಂಚರಿಸುತ್ತಿದ್ದ ಕಾರಣ ವಾಹನ ದಟ್ಟಣೆ ಹೆಚ್ಚಾಗಿ ಸ್ಥಳೀಯರು ತೀವ್ರ ವಿರೋಧ ವ್ಯಕ್ತಪಡಿಸಿದರು.

ಇದರಿಂದ ಪರ್ಯಾಯ ಮಾರ್ಗವಾಗಿ ಗೂಡ್ಸ್ ಶೆಡ್‌ನಿಂದ ಹೊರಡುತ್ತಿದ್ದ ಲಾರಿಗಳು ಜೋಡಿ ತೆಂಗಿನಮರ ಸ್ಮಶಾನ ರಸ್ತೆ, ಬನ್ನಿಮಂಟಪ ರಸ್ತೆ, ಮಿಲೇನಿಯಂ ಸರ್ಕಲ್ ಮೂಲಕ ರಿಂಗ್ ರಸ್ತೆ ಸೇರಿದಂತೆ ಇತರೆಡೆ ಸಂಚರಿಸುತ್ತಿದ್ದವು. ಲಾರಿಗಳು ಸುತ್ತು ಹಾಕಿಕೊಂಡು ಹೆಚ್ಚುವರಿಯಾಗಿ ಸುಮಾರು 6 ಕಿಲೋಮೀಟರ್ ದೂರ ಸಾಗಬೇಕಾಗಿತ್ತು ಇದರಿಂದ ಅಧಿಕ ಡೀಸೆಲ್ ಖರ್ಚಾಗುತ್ತಿತ್ತು, ಸಮಯವೂ ವ್ಯರ್ಥವಾಗುತ್ತಿತ್ತು, ಬನ್ನಿಮಂಟಪದ ಜೋಡಿ ತೆಂಗಿನ ಮರ ಸ್ಮಶಾನ ರಸ್ತೆಯಲ್ಲಿ ಟ್ರಾಫಿಕ್ ಜಾಮ್ ಆಗುತ್ತಿತ್ತು. ಇಲ್ಲಿ ಹಲವು ಅಪಘಾತ ಸಂಭವಿಸಿ ಸಾವು–ನೋವು ಸಂಭವಿಸಿದ್ದವು.

ಈ ಹಿನ್ನೆಲೆಯಲ್ಲಿ ಗೂಡ್ಸ್ ಶೆಡ್ ಲಾರಿ ಮಾಲೀಕರ ಸಂಘದವರು ಕಳೆದ 15 ದಿನದ ಹಿಂದೆ ಮೈಸೂರಿಗೆ ಭೇಟಿ ನೀಡಿದ್ದ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರಿಗೆ ಸಂಸದ ಯದುವೀರ್ ಸಮ್ಮುಖದಲ್ಲಿ ಮನವಿ ಸಲ್ಲಿಸಿ ಗೂಡ್ಸ್ ಶೆಡ್ ರಸ್ತೆಗೆ ಅಡ್ಡಲಾಗಿ ಅಳವಡಿಸಿರುವ ಕಬ್ಬಿಣದ ಗ್ರಿಲ್ ತಡೆಗೋಡೆ ತೆರವು ಮಾಡಿ ಗೂಡ್ಸ್ ಲಾರಿಗಳ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಮನವಿ ಮಾಡಿದ್ದರು.

ಈ ಸಂಬಂಧ ಯದುವೀರ್ ಅವರು ರೈಲ್ವೆ ಸಚಿವ ಸೋಮಣ್ಣ ಅವರ ಮೇಲೆ ಒತ್ತಡ ಹೇರಿದ್ದರು. ಇದರ ಫಲವಾಗಿ ಇಂದು ಗೂಡ್ಸ್ ಶೆಡ್ ರಸ್ತೆಗೆ ಅಡ್ಡಲಾಗಿ ನಿರ್ಮಿಸಲಾಗಿದ್ದ ಕಬ್ಬಿಣದ ಗ್ರಿಲ್ ತಡೆಗೋಡೆ ತೆರವು ಮಾಡಿ ರಸ್ತೆಯನ್ನು ವಾಹನ ಸಂಚಾರಕ್ಕೆ ಮುಕ್ತಗೊಳಿಸಲಾಯಿತು.

ಈ ವೇಳೆ ಗೂಡ್ಸ್ ಶೆಡ್ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಅಬ್ದುಲ್ ಖಾದರ್ ಶಾಯಿದ್, ಲಾರಿ ಮಾಲೀಕರ ಸಂಘದ ಅಧ್ಯಕ್ಷ ಕೋದಂಡರಾಮು, ಯಾದವಗಿರಿ ನಿವಾಸಿಗಳ ಸಂಘದ ಸಂಚಾಲಕ ಎಸ್.ಕೆ.ದಿನೇಶ್ ಅವರು ಯದುವೀರ್ ಹಾಗೂ ರೈಲ್ವೆ ಇಲಾಖೆಯ ಅಧಿಕಾರಿಗಳನ್ನು ಅಭಿನಂದಿಸಿದರು.

ತರುವಾಯ ಮಾತನಾಡಿದ ಯದುವೀರ್, ಭಾರತದ ಹಲವು ಭಾಗಗಳಿಂದ ಬರುವ ವಿವಿಧ ರೀತಿಯ ವಸ್ತುಗಳನ್ನು ಸಾಗಾಣಿಕೆ ಮಾಡುವ ಗೂಡ್ಸ್ ಲಾರಿ ಮಾಲೀಕರ ಕಾರ್ಯ ಶ್ಲಾಘನೀಯ. ಅಮೆರಿಕದಲ್ಲಿ ಟ್ರಕ್ ಚಾಲಕರಿಗೆ ಬಹಳ ಗೌರವವಿದೆ. ಅದರಂತೆ ಇಲ್ಲಿನ ಜನರು ಕೂಡ ಟ್ರಕ್ ಚಾಲಕರನ್ನು ಗೌರವದಿಂದ ಕಾಣುತ್ತಾರೆ ಎಂದರು.

ಗೂಡ್ಸ್ ಶೆಡ್‌ನಲ್ಲಿ ನಿಯಮದಂತೆ ಕ್ಯಾಂಟೀನ್ ಸೇರಿದಂತೆ ಹಲವು ಮೂಲಭೂತ ಸೌಕರ್ಯಗಳಿಲ್ಲ. ಈ ನಿಟ್ಟಿನಲ್ಲಿ ಆದಷ್ಟು ಬೇಗ ನಿಮ್ಮ ಬೇಡಿಕೆ ಈಡೇರಿಸಲಾಗುವುದು ಎಂದು ಭರವಸೆ ನೀಡಿದರು.

ಯಾದವಗಿರಿಯ ಗೂಡ್ಸ್ ಶೆಡ್ ಅನ್ನು ಸ್ಥಳಾಂತರ ಮಾಡಲಾಗುತ್ತದೆ ಎಂದು ಅಪಪ್ರಚಾರ ಮಾಡಲಾಗುತ್ತಿದೆ. ಆದರೆ, ಇಲ್ಲಿ ವಂದೇ ಭಾರತ್ ರೈಲುಗಳ ಕೋಚ್ ಸರ್ವಿಸ್ ಸೆಂಟರ್ ಸ್ಥಾಪಿಸುವ ಬಗ್ಗೆ ಚಿಂತನೆ ನಡೆಯುತ್ತಿದೆ. ಯಾವುದೇ ಕಾರಣಕ್ಕೂ ಇಲ್ಲಿನ ಗೂಡ್ಸ್ ಶೆಡ್ ಅನ್ನು ಸ್ಥಳಾಂತರ ಮಾಡುವುದಿಲ್ಲ. ಈ ಹಿನ್ನೆಲೆಯಲ್ಲಿ ಯಾರೂ ಕೂಡ ಅಪಪ್ರಚಾರಕ್ಕೆ ಕಿವಿಗೊಡಬೇಡಿ ಎಂದು ಯದುವೀರ್ ಸಲಹೆ ನೀಡಿದರು.




ಮೈಸೂರಿನ ಯಾದವಗಿರಿ ರೈಲ್ವೆ ನ್ಯೂ ಗೂಡ್ಸ್ ಶೆಡ್ ಬಳಿ ಬುಧವಾರ ಸಂಸದ ಯದುವೀರ್ ಹಾಗೂ ರೈಲ್ವೆ ಇಲಾಖೆಯವರ ಸಮ್ಮುಖದಲ್ಲಿ ರಸ್ತೆಗೆ ಅಡ್ಡಲಾಗಿ ನಿರ್ಮಿಸಿದ್ದ ಕಬ್ಬಿಣದ ಗ್ರಿಲ್ ತಡೆಗೋಡೆಯನ್ನ ತೆರವುಗೊಳಿಸಿ ಗೂಡ್ಸ್ ಲಾರಿಗಳ ಸಂಚಾರಕ್ಕೆ ಅವಕಾಶ ಕಲ್ಪಿಸಲಾಯಿತು.

> ರೈಲ್ವೆ ಇಲಾಖೆ, ನ್ಯೂ ಗೂಡ್ಸ್ ಶೆಡ್‌ನಿಂದ ಲಾರಿಗಳು ನೇರವಾಗಿ ರಿಂಗ್ ರಸ್ತೆ ಸಂಪರ್ಕಿಸುವ ರಸ್ತೆಗೆ ತಡೆ ನೀಡಿದ್ದರಿಂದ ಉಂಟಾದ ತೀವ್ರ ಸಮಸ್ಯೆ ಬಗ್ಗೆ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಮಗ್ರ ವರದಿ ಪ್ರಕಟಿಸಿ, ಅಧಿಕಾರಿಗಳ ಕಣ್ತೆರೆಸುವಲ್ಲಿ ಯಶಸ್ವಿಯಾದವು. ಇಂದು ರಸ್ತೆ ವಾಹನ ಸಂಚಾರಕ್ಕೆ ಮುಕ್ತವಾಗಿರುವುದರಲ್ಲಿ ಈ ಎರಡು ಪತ್ರಿಕೆಗಳ ಪಾತ್ರ ಅಪಾರವಾಗಿದೆ.
>
> -ಅಬ್ದುಲ್ ಖಾದರ್ ಶಾಯಿದ್, ರೈಲ್ವೆ ನ್ಯೂ ಗೂಡ್ಸ್ ಶೆಡ್ ಲಾರಿ ಮಾಲೀಕರ ಸಂಘದ ಅಧ್ಯಕ್ಷ

ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಬಿಲ್ಡಿಂಗ್ ನವೀಕರಣವನ್ನ ಪಿಡಬ್ಲ್ಯೂಡಿಗೆ ವಹಿಸಬೇಡಿ!

- ಪರಂಪರೆ ಸಂರಕ್ಷಣೆಯ ಪರಿಣಿತ ಸಂಸ್ಥೆಗೆ ವಹಿಸಿ; 5 ವರ್ಷದ ನಿರ್ವಹಣೆಯ ಷರತ್ತು ವಿಧಿಸಿ
- ರಾಜ್ಯ ಸರ್ಕಾರಕ್ಕೆ ಮೈಸೂರು ರಾಜವಂಶಸ್ಥೆ ಪ್ರಮೋದಾ ದೇವಿ ಒಡೆಯರ್ ಆಗ್ರಹ



ಮೈಸೂರು, ಮೇ 13(ಬಿಎಲ್‌ಯು)– ಸಾಂಸ್ಕೃತಿಕ ನಗರಿ ಮೈಸೂರಿನ ಹೆಸರಾಂತ ಪಾರಂಪರಿಕ ಕಟ್ಟಡಗಳಾದ ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್ ಡೌನ್ ಬಿಲ್ಡಿಂಗ್ ನವೀಕರಣವನ್ನು ಲೋಕೋಪಯೋಗಿ ಇಲಾಖೆಗೆ ವಹಿಸದೆ, ಪರಂಪರೆ ಸಂರಕ್ಷಣೆಯಲ್ಲಿ ಯಶಸ್ವಿಯಾಗಿರುವ, ಪರಿಣತಿ ಹೊಂದಿರುವ ಸಂಸ್ಥೆಗೆ ವಹಿಸುವಂತೆ ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರು ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಪರಂಪರೆ ಸಂರಕ್ಷಣೆಯನ್ನು ಸಾಬೀತು ಮಾಡಿರುವ ಪರಿಣಿತಿ ಹೊಂದಿರುವ ವಿಶೇಷ ಸಂಸ್ಥೆಗೆ ವಹಿಸಿ, ಐದು ವರ್ಷಗಳ ಕಾಲ ಅದನ್ನು ನಿರ್ವಹಣೆ ಮಾಡುವ ಹೊಣೆಗಾರಿಕೆಯನ್ನು ಕೂಡ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಇದರಿಂದ ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್ ಡೌನ್ ಬಿಲ್ಡಿಂಗ್ ಹೊಣೆಗಾರಿಕೆ ಹಾಗೂ ದೀರ್ಘಕಾಲಿನ ಸಂರಕ್ಷಣೆಯನ್ನು ಖಚಿತಪಡಿಸಲಾಗುತ್ತದೆ ಎಂದು ಪ್ರಮೋದಾ ದೇವಿ ಒಡೆಯರ್ ಅಭಿಪ್ರಾಯಪಟ್ಟಿದ್ದಾರೆ. ಲ್ಯಾನ್ಸ್ ಡೌನ್ ಬಿಲ್ಡಿಂಗ್ ಅಪಾರ ವಾಣಿಜ್ಯ ಸಾಮರ್ಥ್ಯ ಹೊಂದಿದೆ. ಅತ್ತ ದೇವರಾಜ ಮಾರುಕಟ್ಟೆಯು ಆಧುನಿಕ ಮಾಲ್ ಪರಿಕಲ್ಪನೆಯಲ್ಲಿ ಗುರುತಿಸುವಂತಹ ಮಾದರಿಯಲ್ಲಿದೆ ಎಂದು ತಿಳಿಸಿದ್ದಾರೆ.

ಹಾಲಿ ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ ಅವರು ಮೈಸೂರು ನಗರ ಪಾಲಿಕೆ ಆಯುಕ್ತರಾಗಿದ್ದ ಸಂದರ್ಭದಲ್ಲಿ ದೇವರಾಜ ಮಾರುಕಟ್ಟೆಯ ಒಂದು ಭಾಗವನ್ನು ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಫೌಂಡೇಷನ್ ವತಿಯಿಂದ ನವೀಕರಣ ಮಾಡಲು ಆಸಕ್ತಿ ವಹಿಸಿದ್ದೆವು. ಈ ಮಾರುಕಟ್ಟೆಯ ಕಟ್ಟಡ ನಿರ್ಮಾಣದಲ್ಲಿ ಬಳಸಲಾಗುವ ಸಾಂಪ್ರದಾಯಿಕ ವಸ್ತುಗಳು, ಪರಿಕರಗಳು ಹಾಗೂ ವಿಧಾನಗಳ ಬಳಸಿ ಪುನರ್ ಸ್ಥಾಪಿಸಲು ಸ್ವಯಂ ಪ್ರೇರಣೆಯಿಂದ ಕೆಲಸ ಮಾಡಲು ಮುಂದಾಗಿದ್ದೆ. ಆದರೆ, ನ್ಯಾಯಾಲಯದಲ್ಲಿ ಈ ಪ್ರಕರಣದ ವಿಚಾರಣೆ ನಡೆಯುತ್ತಿದ್ದ ಕಾರಣ ನಾನು ಸಲ್ಲಿಸಿದ್ದ ಪ್ರಸ್ತಾವನೆಯನ್ನು ತಡೆ ಹಿಡಿಯಲಾಗಿತ್ತು ಎಂದು ತಿಳಿಸಿದ್ದಾರೆ.



ಪ್ರಮೋದಾದೇವಿ ಒಡೆಯರ್

ದೀರ್ಘಕಾಲದಿಂದ ತಡೆ ಹಿಡಿಯಲಾಗಿದ್ದ ಈ ಎರಡು ಕಟ್ಟಡಗಳ ಪುನರ್ ಸ್ಥಾಪನೆ ಹಾಗೂ ನವೀಕರಣಕ್ಕೆ ಸುಪ್ರೀಂ ಕೋರ್ಟ್ ತೀರ್ಪು ಸ್ವಾಗತಾರ್ಹ ಎಂದು ಅಭಿಪ್ರಾಯಪಟ್ಟಿದ್ದಾರೆ.

ಈ ಎರಡು ಐತಿಹಾಸಿಕ ಹಾಗೂ ಸಾಂಸ್ಕೃತಿಕ ಮಹತ್ವ ಹೊಂದಿರುವ ಕಟ್ಟಡಗಳನ್ನು ಭವಿಷ್ಯದ ಪೀಳಿಗೆಗೆ ಸಂರಕ್ಷಣೆ ಮಾಡಲು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗಿತ್ತು. ಈಗ ಸುಪ್ರೀಂಕೋರ್ಟ್ ನೀಡಿರುವ ತೀರ್ಪಿನಿಂದ ಮೈಸೂರಿನ ಜನತೆಗೆ ಅಪಾರ ಸಂತೋಷವಾಗಿದೆ ಎಂದು ಪ್ರಮೋದಾ ದೇವಿ ಒಡೆಯರ್ ತಿಳಿಸಿದ್ದಾರೆ.



ಐಐಟಿ ರೂರ್ಕಿ ಸಮಿತಿ ಸಲ್ಲಿಸಿದ್ದ ವರದಿಯನ್ನು ಪರಾಮರ್ಶಿಸಿದ ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದಿವಾಲಾ ಮತ್ತು ವಿಜಯ್ ಬಿಷ್ಣೋಯ್ ಅವರನ್ನೊಳಗೊಂಡ ದ್ವಿಸದಸ್ಯ ಪೀಠ, ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್ ಡೌನ್ ಬಿಲ್ಡಿಂಗ್ ಕಟ್ಟಡಗಳ ಪಾರಂಪರಿಕ ರಚನೆಯನ್ನು ಸಂರಕ್ಷಿಸಬೇಕು. ಈ ನಿಟ್ಟಿನಲ್ಲಿ ನವೀಕರಣ ಹಾಗೂ ಪುನಃಸ್ಥಾಪನೆ ಕಾರ್ಯ ಕೈಗೊಳ್ಳಬೇಕು ಎಂದು ತೀರ್ಪು ನೀಡಿದೆ.

ಬೆಂಗಳೂರಿನಲ್ಲಿ 7ಲಕ್ಷ ಅಕ್ರಮ ಮನೆಗಳ ಸಕ್ರಮ; 100 ದಿನ ಕಾಲಾವಕಾಶ

- ಮಾರ್ಗಸೂಚಿ ದರಗಳಲ್ಲಿ ಭಾರೀ ರಿಯಾಯಿತಿ ಘೋಷಿಸಿದ ಬೆಂಗಳೂರು ಉಸ್ತುವಾರಿ ಹೊಣೆಹೊತ್ತಿರುವ ಡಿ.ಕೆ.ಶಿವಕುಮಾರ್
- ಈ ಅಭಿಯಾನ ರಾಜ್ಯದೆಲ್ಲೆಡೆ ವಿಸ್ತರಣೆ ಉದ್ದೇಶ

ಬೆಂಗಳೂರು, ಮೇ 13(ಕೆಎಂಶಿ)– ರಾಜಧಾನಿ ಬೆಂಗಳೂರಲ್ಲಿ ನಿಯಮ ಉಲ್ಲಂಘಿಸಿ ನಿರ್ಮಿಸಿರುವ 7 ಲಕ್ಷ ಮನೆಗಳಿಗೆ ಒಂದು ಬಾರಿಯ ಪರಿಹಾರವಾಗಿ ಸಕ್ರಮಗೊಳಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ.



ಮನೆ ಮತ್ತು ನಿವೇಶನಗಳನ್ನು 'ಬಿ' ಖಾತೆಯಿಂದ 'ಎ'ಖಾತೆಗೆ ಪರಿವರ್ತಿಸಿಕೊಳ್ಳಲು 100 ದಿನಗಳ ಕಾಲಾವಕಾಶ ನೀಡಿದ್ದು, ಮಾರ್ಗಸೂಚಿ ದರಗಳಲ್ಲಿ ಭಾರೀ ರಿಯಾಯಿತಿ ಘೋಷಿಸಿದೆ. ಬೆಂಗಳೂರಿಗೆ ಸೀಮಿತವಾಗಿ ಕೈಗೊಂಡಿರುವ ತೀರ್ಮಾನ ಉಳಿದ ನಗರ ಹಾಗೂ ಗ್ರಾಮೀಣ ಪ್ರದೇಶಕ್ಕೂ ವಿಸ್ತರಿಸುವ ಬಗ್ಗೆ ಚಿಂತನೆ ನಡೆದಿದೆ. ರಿಯಾಯಿತಿ ಸಂಬಂಧ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಮಹತ್ವದ ತೀರ್ಮಾನ ಕೈಗೊಳ್ಳುವ ನಿರೀಕ್ಷೆ ಇದೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಬೆಂಗಳೂರು ಉಸ್ತುವಾರಿ ಹೊಣೆ ಹೊತ್ತ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, 'ನಮ್ಮ ಖಾತೆ–ನಮ್ಮ ಹಕ್ಕು' ಅಭಿಯಾನದ ಮೂಲಕ ಆಸ್ತಿ ದಾಖಲೆಗಳನ್ನು ಮನೆ ಬಾಗಿಲಿಗೆ ತಲುಪಿಸುವ ಬೃಹತ್ ಯೋಜನೆಗೆ ಚಾಲನೆ ನೀಡಲಾಗಿದೆ ಎಂದರು. ನಗರದಲ್ಲಿ 23 ಲಕ್ಷ ಆಸ್ತಿಗಳಿದ್ದು ಇವುಗಳ ದಾಖಲೆಗಳನ್ನು ಸಂಪೂರ್ಣ ಡಿಜಿಟಲೀಕರಣಗೊಳಿಸಿ ಪಾರದರ್ಶಕತೆ ತರಲು ಸರ್ಕಾರ ಮುಂದಾಗಿದೆ ಪ್ರತಿಯೊಂದು ಆಸ್ತಿಯನ್ನು ಜಿಪಿಎಸ್ ಮೂಲಕ ಮ್ಯಾಪಿಂಗ್ ಮಾಡಿ, ನಿವೇಶನದ ನಿರ್ದಿಷ್ಟ ಜಾಗ ಮತ್ತು ಮಾಲೀಕರ ಛಾಯಾಚಿತ್ರ ಇರುವ ದಾಖಲೆಗಳನ್ನು ಸಿದ್ಧಪಡಿಸಲಾಗುವುದು.

ನಕಲಿ ದಾಖಲೆ ಸೃಷ್ಟಿ ತಡೆಯಲು ಈ ವ್ಯವಸ್ಥೆ ಜಾರಿಗೆ ತರಲಾಗಿದ್ದು, ಇದೇ 16ರಿಂದ ಅಭಿಯಾನ ಆರಂಭಿಸಿ, ಅಧಿಕಾರಿಗಳು ಮನೆ–ಮನೆಗೆ ಭೇಟಿ ನೀಡಿ ಸಂಬಂಧಪಟ್ಟ ಕಡತಗಳನ್ನು ತಲುಪಿಸಲಿದ್ದಾರೆ ಎಂದರು. 'ಬಿ' ಖಾತೆಯಿಂದ 'ಎ' ಖಾತೆಗೆ ಪರಿವರ್ತಿಸಲು ಈ ಹಿಂದೆ ಶೇ.5ರಷ್ಟು ಮಾರ್ಗಸೂಚಿ ದರ ಪಾವತಿಸಬೇಕಿತ್ತು, ಈಗ, ಆ ಶುಲ್ಕವನ್ನು ಶೇ.2ಕ್ಕೆ ಇಳಿಸಲಾಗಿದೆ.

ಉದಾಹರಣೆಗೆ 5 ಲಕ್ಷ ರೂ.ಗೆ ಬದಲಾಗಿ 2 ಲಕ್ಷ ರೂ. ಪಾವತಿಸಿದರೆ ಸಾಕು, ಈ ರಿಯಾಯಿತಿ ಸೌಲಭ್ಯ 100 ದಿನಗಳವರೆಗೆ ಮಾತ್ರ ಇರಲಿದೆ ಎಂದರು. ನಗರ ಯೋಜನೆ ಕಾನೂನು ಉಲ್ಲಂಘನೆ ಪ್ರಕರಣಗಳಲ್ಲಿ ಶೇಕಡಾ 5ರಷ್ಟು ರಿಯಾಯಿತಿ ನೀಡಲಾಗುತ್ತಿತ್ತು, ಈಗ ಇದನ್ನು ಶೇ.15ಕ್ಕೆ ವಿಸ್ತರಿಸಲಾಗಿದೆ.

ಹದಿನೈದು ವರ್ಷಗಳ ಹಿಂದೆ ಮನೆ ಕಟ್ಟಿದವರಿಗೆ ಮಾರ್ಗಸೂಚಿ ದರಗಳಲ್ಲಿ ಭಾರೀ ರಿಯಾಯಿತಿ ನೀಡಲಾಗಿದೆ, ಆಸ್ತಿ ವಿಸ್ತೀರ್ಣಕ್ಕೆ ಅನುಗುಣವಾಗಿ ಶೇ.10ರಿಂದ ಶೇ.50ರವರೆಗೆ ಇದ್ದ ಶುಲ್ಕಗಳಲ್ಲಿ ಗಮನಾರ್ಹ ಕಡಿತ ಮಾಡಲಾಗಿದೆ ಎಂದರು.

ಮುಲಾಯಂ ಸಿಂಗ್ ಯಾದವ್ ಪುತ್ರ ಪ್ರತೀಕ್ ನಿಧನ

ಲಕ್ನೋ: ಸಮಾಜವಾದಿ ಪಕ್ಷದ ಸಂಸ್ಥಾಪಕ ಮುಲಾಯಂ ಸಿಂಗ್ ಯಾದವ್ ಅವರ ಪುತ್ರ, ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಅಖಿಲೇಶ್ ಯಾದವ್ ಅವರ ಮಲಸಹೋದರ ಪ್ರತೀಕ್ ಯಾದವ್(38) ಲಖ್ನೋದ ಸಿವಿಲ್ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ.

ಫಿಟ್ನೆಸ್ ಬಗ್ಗೆ ಅಪಾರ ಆಸಕ್ತಿ ಹೊಂದಿದ್ದ ಪ್ರತೀಕ್, ಸಕ್ರಿಯ ರಾಜಕಾರಣದಿಂದ ದೂರ ಉಳಿದಿದ್ದರು. ಅವರ ಪತ್ನಿ ಅಪರ್ಣಾ ಯಾದವ್ ಬಿಜೆಪಿ ನಾಯಕಿಯಾಗಿದ್ದಾರೆ.

ಪ್ರತೀಕ್ ಅವರ ನಿಧನಕ್ಕೆ ಸಂತಾಪ ಸೂಚಿಸಿರುವ ಸಮಾಜವಾದಿ ಪಕ್ಷ ಈ ಬಗ್ಗೆ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿದೆ. ಪ್ರತೀಕ್ ಯಾದವ್ ಅವರ ನಿಧನವು ತೀವ್ರ ದುಃಖ ತಂದಿದೆ. ಭಗವಂತನು ಅಗಲಿದ ಆತ್ಮಕ್ಕೆ ಶಾಂತಿ ನೀಡಲಿ ಎಂದು ಬರೆದುಕೊಂಡಿದೆ.



ಪ್ರತೀಕ್ ಯಾದವ್ ಅವರ ಸಾವಿಗೆ ನಿಖರವಾದ ಕಾರಣ ಮರಣೋತ್ತರ ಪರೀಕ್ಷೆಯ ವರದಿ ಬಿಡುಗಡೆಯಾದ ನಂತರವೇ ತಿಳಿದುಬರಲಿದೆ. ಆದಾಗ್ಯೂ, ಪ್ರಕರಣವು ಅತ್ಯಂತ ಅನುಮಾನಾಸ್ಪದವಾಗಿದೆ. ವೈದ್ಯರ ತಂಡವು ಪ್ರತೀಕ್ ಯಾದವ್ ಅವರ ಆರಂಭಿಕ ಮರಣೋತ್ತರ ಪರೀಕ್ಷೆಯನ್ನು ನಡೆಸುತ್ತಿದೆ. ಮರಣೋತ್ತರ ಪರೀಕ್ಷೆಯನ್ನು ವೀಡಿಯೊ ಚಿತ್ರೀಕರಣ ಮಾಡಲಾಗುತ್ತಿದೆ.

2028ಕ್ಕೆ ಕುಮಾರಸ್ವಾಮಿ ಮುಖ್ಯಮಂತ್ರಿ ಆಗುವುದು ಶತಸಿದ್ಧ: ಸಾರಾ ಮಹೇಶ್

ಇದೊಂದು ಬರೀ ಗ್ಯಾರಂಟಿ ಸರ್ಕಾರ; ಭ್ರಷ್ಟಾಚಾರದಿಂದ ಜನ ಬೇಸತ್ತಿದ್ದಾರೆ

ಮೈಸೂರು, ಮೇ 13(ಎಂಟಿವೈ)– ನಾಡಿನ ಜನ ಪ್ರಾದೇಶಿಕ ಪಕ್ಷವನ್ನು ಬಯಸುತ್ತಿದ್ದು, 2028ರಲ್ಲಿ ಎನ್‌ಡಿಎ ಮೈತ್ರಿಕೂಟದ ಸರ್ಕಾರದಲ್ಲಿ ಸಚಿವರಾಗಿರುವ ಹೆಚ್.ಡಿ.ಕುಮಾರಸ್ವಾಮಿ ಅವರು ಮತ್ತೊಮ್ಮೆ ರಾಜ್ಯದ ಮುಖ್ಯಮಂತ್ರಿಯಾಗುವುದು ಖಚಿತ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಭವಿಷ್ಯ ನುಡಿದಿದ್ದಾರೆ.



ವರುಣದಲ್ಲಿ ಏರ್ಪಡಿಸಿದ್ದ ಜನರೊಂದಿಗೆ ಜನತಾದಳ ಸಮಾವೇಶದಲ್ಲಿ ಸಚಿವ ಸಾ.ರಾ.ಮಹೇಶ್ ಮಾತನಾಡಿದರು.

ಮೈಸೂರು ತಾಲೂಕಿನ ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮೆಲ್ಲಹಳ್ಳಿ ಬಳಿ ಬುಧವಾರ ಆಯೋಜಿಸಿದ್ದ 'ಜನರೊಂದಿಗೆ ಜನತಾದಳ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವರುಣ ಕ್ಷೇತ್ರದಿಂದ ಆಯ್ಕೆಯಾಗಿರುವ ಸಿದ್ದರಾಮಯ್ಯ ಅವರು ಎರಡು ಬಾರಿ ಮುಖ್ಯಮಂತ್ರಿಯಾಗಿರುವುದು ನಮಗೂ ಸಂತೋಷವಿದೆ. ಆದರೆ, ಅವರ ಆಡಳಿತಾವಧಿಯಲ್ಲಿ ಬಡವರಿಗೆ, ರೈತರಿಗೆ ಯಾವುದೇ ಯೋಜನೆ ನೀಡಿಲ್ಲ. 2013ರಿಂದ 2018ರವರೆಗೆ ನೀಡಿದ ಆಡಳಿತ ಮೆಚ್ಚಬಹುದಾಗಿತ್ತು. ಆ ಅವಧಿಯಲ್ಲಿ ನಾನು ಶಾಸಕನಾಗಿದ್ದೆ. ಆದರೆ, ಎರಡನೇ ಅವಧಿಯಲ್ಲಿ ಸಿಎಂ ಆಗಿರುವಾಗ ಎಲ್ಲೆಡೆ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಈ ಅವಧಿಯ ಆಡಳಿತವನ್ನು ಮುಖ್ಯಮಂತ್ರಿಗಳೇ ಮೆಚ್ಚುವಂತಿಲ್ಲ ಎಂದು ಟೀಕಿಸಿದರು.

ಜೆಡಿಎಸ್ ಅನ್ನು ಅಪ್ಪ–ಮಕ್ಕಳ ಪಕ್ಷ ಎನ್ನುವ ಮುಖ್ಯಮಂತ್ರಿಗಳು ತಮ್ಮ ಮಗ ಡಾ.ಯತೀಂದ್ರ ಅವರನ್ನು ಎಂಎಲ್‌ಸಿ ಮಾಡಿದ್ದಾರೆ. ಜೊತೆಗೆ ಅಧಿಕಾರದ ಲಾಲಸೆಯಿಂದ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಸದಸ್ಯರನ್ನಾಗಿ ಮಾಡುವುದಕ್ಕಾಗಿ ಯತೀಂದ್ರ ಅವರ ಮತದಾನದ ಹಕ್ಕನ್ನು ಬೆಂಗಳೂರಿಗೆ ವರ್ಗಾಯಿಸಿಕೊಂಡಿದ್ದಾರೆ. ಈಗ ಸಿಎಂ ಇರುವ ಪಕ್ಷವನ್ನು ಏನನ್ನಬೇಕು? ಜೆಡಿಎಸ್ ಅಪ್ಪ–ಮಕ್ಕಳ ಪಕ್ಷವಾದರೆ ನೀವು, ನಿಮ್ಮ ಮಗ ಇರುವ ಪಕ್ಷಕ್ಕೆ ಏನಂತ ಕರೆಯಬೇಕು ಎಂದು ಪ್ರಶ್ನಿಸಿದರು.

ಗ್ಯಾರಂಟಿ ಗೆಲುವಿದು: ಕಳೆದ ವಿಧಾನಸಭಾ ಚುನಾವಣೆ ವೇಳೆ ಗ್ಯಾರಂಟಿ ಯೋಜನೆಯಿಂದ ಜನ ಕಾಂಗ್ರೆಸ್‌ಗೆ ಓಟ್ ಹಾಕಿದ್ದಾರೆ. ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದು 36 ತಿಂಗಳಾಗಿದ್ದು, ಮಹಿಳೆಯರಿಗೆ ಮಾಸಿಕ 2 ಸಾವಿರ ರೂ. ನೀಡುವ ಗೃಹಲಕ್ಷ್ಮಿ ಯೋಜನೆಯಿಂದ ಇದುವರೆಗೆ ಓರ್ವ ಮಹಿಳೆಗೆ 72 ಸಾವಿರ ರೂ. ಸರ್ಕಾರ ನೀಡಿದೆ. ಒಂದೊಂದು ಮನೆಯಲ್ಲಿ ಇಬ್ಬರು ಅಥವಾ ಮೂವರು ಮಹಿಳೆಯರು ಈ ಸೌಲಭ್ಯ ಪಡೆದುಕೊಂಡಿರಬಹುದು. ಆದರೆ, ಸಿದ್ದರಾಮಯ್ಯ ಅವರು ರಾಜ್ಯದ ಜನರ ತಲೆ ಮೇಲೆ ತಲಾ 1.17 ಲಕ್ಷ ರೂ. ಸಾಲ ಹೊರಿಸಿದ್ದಾರೆ. ಇದನ್ನು ಜನ ಮನಗಾಣಬೇಕು. ಈ ಹಿನ್ನೆಲೆಯಲ್ಲಿ ಮುಂಬರುವ 2028ರ ಚುನಾವಣೆಯಲ್ಲಿ ಗ್ಯಾರಂಟಿ ಯೋಜನೆಗಳಿಗೆ ಮನ್ನಣೆ ನೀಡದೆ ಜನರ ಹಿತ ಕಾಯುವ ಪ್ರಾದೇಶಿಕ ಪಕ್ಷಕ್ಕೆ ಬೆಂಬಲ ನೀಡಬೇಕು ಎಂದು ಮನವಿ ಮಾಡಿದರು.

> **ವರುಣ ಕ್ಷೇತ್ರದಲ್ಲಿ ಯುವ ಮುಖಂಡ ಅಭಿಷೇಕ್‌ಗೆ ಶಕ್ತಿ ತುಂಬಬೇಕು**
>
> ವರುಣ ವಿಧಾನಸಭಾ ಕ್ಷೇತ್ರದಲ್ಲಿ 2018ರಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ಅಭಿಷೇಕ್ ಮಣೆಗಾರ್ 28 ಸಾವಿರ ಮತ ಪಡೆದಿದ್ದರು. ಕ್ಷೇತ್ರಕ್ಕೆ ಹೊಸ ಮುಖವಾಗಿದ್ದರೂ, ದೊಡ್ಡ ಪ್ರಮಾಣದ ಮತ ಗಳಿಸಿದ್ದರು. ಬದಲಾದ ರಾಜಕೀಯದಲ್ಲಿ 2023ರ ಚುನಾವಣೆಯಲ್ಲಿ ಬೇರೆ ಅಭ್ಯರ್ಥಿಯನ್ನು ಕಣಕ್ಕಿಳಿಸಬೇಕಾದ ಪರಿಸ್ಥಿತಿ ಒದಗಿ ಬಂತು. ಆದರೆ, ಇದೀಗ ಮತ್ತೆ ವರುಣ ಕ್ಷೇತ್ರದಲ್ಲಿ ಜೆಡಿಎಸ್ ಸಂಘಟಿಸಲು ಬಯಸಿದ್ದಾರೆ. ಅವರು ವಿದೇಶದಲ್ಲಿದ್ದು, ಇದೀಗ ವರುಣ ಕ್ಷೇತ್ರದ ಜನರ ಸೇವೆ ಮಾಡಲು ಇಚ್ಛಿಸಿದ್ದಾರೆ. ಇದಕ್ಕೆ ಪಕ್ಷದ ಕಾರ್ಯಕರ್ತರು, ಮುಖಂಡರು ಬೆಂಬಲ ನೀಡಬೇಕು. ಮಿತ ಭಾಷಿಯಾಗಿರುವ ಅಭಿಷೇಕ್ ಜನರ ಕಷ್ಟಕ್ಕೆ ಸ್ಪಂದಿಸುವ ಮನೋಭಾವ ಹೊಂದಿದ್ದಾರೆ. ಅಲ್ಲದೆ, ಸಜ್ಜನರೂ ಆಗಿದ್ದಾರೆ. ಈ ಹಿನ್ನೆಲೆಯಲ್ಲಿ ಪಕ್ಷದ ಕಾರ್ಯಕರ್ತರು ಅಭಿಷೇಕ್ ಅವರ ಕೈ ಬಲಪಡಿಸಿ, ಮುಂದಿನ ಚುನಾವಣೆಯಲ್ಲಿ ಅವರನ್ನು ಗೆಲ್ಲಿಸಬೇಕು.
>
> - ಸಾ.ರಾ.ಮಹೇಶ್, ಮಾಜಿ ಸಚಿವರು

ಜನ ಬೇಸತ್ತಿದ್ದಾರೆ: ಕಾಂಗ್ರೆಸ್ ಪಕ್ಷದ ದುರಾಡಳಿತ, ಭ್ರಷ್ಟಾಚಾರದಿಂದ ರಾಜ್ಯದ ಜನತೆ ಬೇಸತ್ತಿದ್ದಾರೆ. ಪ್ರಾದೇಶಿಕ ಪಕ್ಷದ ಮೇಲೆ ಒಲವು ವ್ಯಕ್ತಪಡಿಸಿದ್ದಾರೆ. ಪ್ರಾದೇಶಿಕ ಪಕ್ಷದ ಸರ್ಕಾರವನ್ನು ಬಯಸುತ್ತಿದ್ದಾರೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಜೆಡಿಎಸ್–ಬಿಜೆಪಿ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬರುವುದು ಖಚಿತ. ಹೆಚ್.ಡಿ.ಕುಮಾರಸ್ವಾಮಿ ಅವರು ಮತ್ತೆ ರಾಜ್ಯದ ಮುಖ್ಯಮಂತ್ರಿಯಾಗುವುದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ ಎಂದು ಪ್ರತಿಪಾದಿಸಿದರು.

ಕುಮಾರಸ್ವಾಮಿ ಮುಖ್ಯಮಂತ್ರಿ ಆಗದೆ ನಮಗೆ ಉಳಿಗಾಲವಿಲ್ಲ ಎಂದು ರೈತರಿಗೆ ಮನವರಿಕೆ ಆಗಿದೆ

- ಶಾಸಕ ಜಿ.ಡಿ.ಹರೀಶ್‌ಗೌಡ ಅಭಿಮತ
- ವರುಣದಲ್ಲಿ ಜೆಡಿಎಸ್ ಸಮಾವೇಶ ಐತಿಹಾಸಿಕ

ಮೈಸೂರು, ಮೇ 13(ಎಂಟಿವೈ)– ರಾಜ್ಯದಲ್ಲಿ 2028ರಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗದಿದ್ದರೆ ರೈತರಿಗೆ ಉಳಿಗಾಲವಿಲ್ಲ ಎಂದು ಜನರಿಗೆ ಮನವರಿಕೆಯಾಗಿರುವುದರಿಂದ ಜೆಡಿಎಸ್–ಬಿಜೆಪಿ ಸಮ್ಮಿಶ್ರ ಸರ್ಕಾರವನ್ನು ತರಲು ನಾಡಿನ ಜನ ತೀರ್ಮಾನಿಸಿದ್ದಾರೆ ಎಂದು ಶಾಸಕ ಜಿ.ಡಿ.ಹರೀಶ್ ಗೌಡ ಅಭಿಪ್ರಾಯಪಟ್ಟಿದ್ದಾರೆ.



ಜನರೊಂದಿಗೆ ಜನತಾದಳ ಸಮಾವೇಶದಲ್ಲಿ ಶಾಸಕ ಜಿ.ಡಿ. ಹರೀಶ್‌ಗೌಡ ಮಾತನಾಡಿದರು.

ವರುಣ ಕ್ಷೇತ್ರದ ಮೆಲ್ಲಹಳ್ಳಿಯಲ್ಲಿ ನಡೆದ 'ಜನರೊಂದಿಗೆ ಜನತಾದಳ' ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸದನದಲ್ಲಿ ಮಾತನಾಡುವಾಗ ಜೆಡಿಎಸ್ ಎಲ್ಲಿದೆ ಎಂದು ಪ್ರಶ್ನಿಸಿದ್ದಾರೆ. ಮುಂದಿನ ಚುನಾವಣೆಯಲ್ಲಿ ಜೆಡಿಎಸ್ 2ರಿಂದ 3 ಸ್ಥಾನ ಪಡೆಯಬಹುದು ಎಂದಿದ್ದಾರೆ. ಆದರೆ ಜೆಡಿಎಸ್ ಎಲ್ಲಿದೆ, ಎಷ್ಟು ಸ್ಥಾನ ಗಳಿಸುತ್ತದೆ ಎಂದು ಪಕ್ಷದ ಕಾರ್ಯಕರ್ತರು 2028ರ ಚುನಾವಣೆಯಲ್ಲಿ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿಯಾಗಿ ಮಾಡುವ ಮೂಲಕ ಉತ್ತರಿಸಲಿದ್ದಾರೆ ಎಂದರು.

ಮುಖ್ಯಮಂತ್ರಿಗಳ ತವರು ಕ್ಷೇತ್ರ ವರುಣ ಕ್ಷೇತ್ರದ ಜನರೊಂದಿಗೆ ಜನತಾದಳ ಸಮಾವೇಶ ಅತ್ಯಂತ ಯಶಸ್ವಿಯಾಗಿ ನಡೆದಿದ್ದು, ಇದೊಂದು ಐತಿಹಾಸಿಕ ಕಾರ್ಯಕ್ರಮವಾಗಿದೆ. ಈ ಕಾರ್ಯಕ್ರಮ ಮುಂದಿನ ಚುನಾವಣೆಯಲ್ಲಿ ಜೆಡಿಎಸ್ ಶಕ್ತಿ ಏನೆಂದು ತೋರಿಸುವ ಸಂದೇಶ ನೀಡಿದೆ. ಈಗಾಗಲೇ ಪಕ್ಷದ ಯುವ ನೇತಾರರು, ಭವಿಷ್ಯದ ಮುಖ್ಯಮಂತ್ರಿಯೂ ಆಗಿರುವ ನಿಖಿಲ್ ಕುಮಾರಸ್ವಾಮಿ ಅವರು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಆಶೀರ್ವಾದದಿಂದ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಮಾರ್ಗದರ್ಶನದಲ್ಲಿ ಜೆಡಿಎಸ್ ಸಂಘಟನೆಯಲ್ಲಿ ತೊಡಗಿದ್ದಾರೆ. ಇದುವರೆಗೆ 71 ವಿಧಾನಸಭಾ ಕ್ಷೇತ್ರದಲ್ಲಿ ಜನರೊಂದಿಗೆ ಜನತಾದಳ ಸಮಾವೇಶ ಮಾಡಿದ್ದಾರೆ. ಉಳಿದ ಕ್ಷೇತ್ರದಲ್ಲೂ ಪಕ್ಷದ ಮುಖಂಡರು ಸಮಾವೇಶಕ್ಕೆ ಬರುವಂತೆ ಆಹ್ವಾನ ನೀಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ 2028ರಲ್ಲಿ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬರುವುದು ನೂರಕ್ಕೆ ನೂರು ಸತ್ಯ. ಸಮ್ಮಿಶ್ರ ಸರ್ಕಾರದಲ್ಲಿ ಕುಮಾರಣ್ಣ ಮುಖ್ಯಮಂತ್ರಿಯಾಗಿ ರೈತರು, ಬಡವರು, ಕೂಲಿ ಕಾರ್ಮಿಕ ವರ್ಗ ಸೇರಿದಂತೆ ನಾಡಿನ ಜನರ ಹಿತಕಾಪಾಡಲಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಗ್ಯಾರಂಟಿ ಯೋಜನೆಗಳನ್ನು ಮುಂದಿಟ್ಟುಕೊಂಡು ಸರ್ಕಾರ ರಾಜ್ಯದ ಜನರನ್ನು ದಿಕ್ಕು ತಪ್ಪಿಸುತ್ತಿದೆ. ಈಗಾಗಲೇ ಅತಿ ಹೆಚ್ಚು ಸಾಲ ಮಾಡಿರುವ ಮುಖ್ಯಮಂತ್ರಿ ಎಂಬ ಕೀರ್ತಿ ಸಿಎಂ ಸಿದ್ದರಾಮಯ್ಯ ಅವರದ್ದಾಗಿದೆ. ಸಾಲದ ಜೊತೆಗೆ ವಿದ್ಯುತ್ ದರ, ಅಗತ್ಯ ವಸ್ತುಗಳ ಬೆಲೆಯೂ ಗಗನಕ್ಕೇರಿದೆ. ಗ್ಯಾರಂಟಿ ಯೋಜನೆಗಳಿಗೆ ಹಣ ಸರಿದೂಗಿಸಲು ಬೆಲೆ ಏರಿಕೆ ಮಾಡಲಾಗಿದೆ. ಈ ಹಿಂದೆ ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಸಂಪರ್ಕ ನೀಡಲಾಗುತ್ತಿತ್ತು. ಆದರೆ, ಈಗ 2ರಿಂದ 3 ಲಕ್ಷ ರೂ. ಪಾವತಿಸಬೇಕು. ಒಂದೆಡೆ ಸಾಲ ಮಾಡುತ್ತಿದ್ದಾರೆ. ಮತ್ತೊಂದೆಡೆ ಬೆಲೆ ಏರಿಕೆ ಮಾಡಲಾಗಿದೆ. ಆದರೂ, ಹಣ ಎಲ್ಲಿಗೆ ಹೋಗುತ್ತಿದೆ ಎಂದು ತಿಳಿಯುತ್ತಿಲ್ಲ ಎಂದರು. ಇದಕ್ಕೆ ಕಾರ್ಯಕರ್ತರೊಬ್ಬರು ಕೇರಳಕ್ಕೆ ಹೋಗಿರಬಹುದು ಎಂದು ಪ್ರತಿಕ್ರಿಯಿಸಿದರು.

> **ಕುಮಾರಣ್ಣನ ಬಳಿ ಚರ್ಚಿಸಿಲ್ಲ**
>
> ಬೃಹತ್ ಕೈಗಾರಿಕಾ ಸಚಿವರಾಗಿರುವ ಹೆಚ್.ಡಿ.ಕುಮಾರಸ್ವಾಮಿ ಅವರು ದೇಶದುದ್ದಗಲಕ್ಕೂ ಓಡಾಡಿ ಕೈಗಾರಿಕೆಗಳ ಸ್ಥಾಪನೆಗೆ ಶ್ರಮಿಸುತ್ತಿದ್ದಾರೆ. ಸ್ಥಗಿತಗೊಂಡಿರುವ ಕಾರ್ಖಾನೆ ಪುನರಾರಂಭಿಸಲು ಪ್ರಯತ್ನಿಸುತ್ತಿದ್ದಾರೆ. ಆ ಮೂಲಕ ದುಡಿಯುವ ಕೈಗಳಿಗೆ ಕೆಲಸ ನೀಡಲು ಮುಂದಾಗಿದ್ದಾರೆ. ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರ ಮಗ, ಸಚಿವ ನಾರಾ ಲೋಕೇಶ್ ಅವರು ದಕ್ಷಿಣ ಭಾರತದಿಂದ ಹೆಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರ ಸಚಿವರಾಗಿರುವುದು ನಮ್ಮ ಸೌಭಾಗ್ಯ ಎಂದಿದ್ದಾರೆ. ಅಲ್ಲದೆ, ಬೇರೆ ಬೇರೆ ರಾಜ್ಯಗಳ ಮುಖ್ಯಮಂತ್ರಿಗಳು ಹೆಚ್.ಡಿ. ಕುಮಾರಸ್ವಾಮಿ ಅವರೊಂದಿಗೆ ಚರ್ಚಿಸಿ ತಮ್ಮ ರಾಜ್ಯಗಳಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಮನವಿ ಮಾಡುತ್ತಿದ್ದಾರೆ. ಆದರೆ, ನಮ್ಮ ರಾಜ್ಯ ಸರ್ಕಾರ ಅಭಿವೃದ್ಧಿ ವಿಚಾರವನ್ನು ಕುಮಾರಸ್ವಾಮಿ ಅವರೊಂದಿಗೆ ಚರ್ಚಿಸಲು ಮುಂದಾಗುತ್ತಿಲ್ಲ. ಆದರೂ, ಕುಮಾರಸ್ವಾಮಿ ಅವರು ಮಂಡ್ಯದಲ್ಲಿ ಕೈಗಾರಿಕೆ ಸ್ಥಾಪನೆಗೆ ಮುಂದಾಗಿದ್ದಾರೆ.
>
> - ಜಿ.ಡಿ. ಹರೀಶ್‌ಗೌಡ, ಶಾಸಕರು

ನಕ್ಕರೆ ಅದೇ ಸ್ವರ್ಗ

ಜಡ್ಜ್ : ಹೆಂಡತಿ ಕೆನ್ನೆಗೆ ಹೊಡೆದಿದ್ದಕ್ಕೆ ನಿಂಗೆ ಒಂದು ಸಾವಿರ ರೂ. ಫೈನ್ ಶಿಕ್ಷೆ

ಗುಂಡ : ವಿಟ್ನೆಸ್ ಬಾಕ್ಸ್‌ನಿಂದ ಇಳಿದು ಎದುರುಗಡೆ ವಿಟ್ನೆಸ್ ಬಾಕ್ಸ್‌ನಲ್ಲಿ ನಿಂತಿದ್ದ ತನ್ನ ಹೆಂಡತಿ ಇನ್ನೊಂದು ಕೆನ್ನೆಗೆ ಹೊಡೆದ.

ಗುಂಡ : ಚಿಲ್ಲರೆ ಇಲ್ಲ ಸಾರ್... 2000 ರೂ. ಹೊಸ ನೋಟು ಕೊಡ್ತೀನಿ ಸಾರ್ !

ಮೈಸೂರು ಮಿತ್ರ

ಗುರುವಾರ, ಮೇ 14, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ನೀವು ಮಾಡುತ್ತಿರುವ ಕೆಲಸ ನಿಮ್ಮ ಅಂತರಂಗದ ಆನಂದಕ್ಕೆ ಕಾರಣವಾದರೆ ಸಾಕು. ಬೇರೆಯವರನ್ನು ತೃಪ್ತಿಪಡಿಸುತ್ತಾ ಕೂರುವ ಅಗತ್ಯವಿಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಭಾಷೆ ತಿಳಿಯದಿದ್ದರೂ ಹಾಸ್ಯಕ್ಕೆ ಕಡಿಮೆಯಿಲ್ಲ.

ನಿಮ್ಮ ಪತ್ರಗಳು

ತೆಗೆದ ಗುಂಡಿ ಪೂರ್ಣ ಮುಚ್ಚಬೇಕೆಂಬ ಜ್ಞಾನ ಬೇಡವೇ?

ಮಾನ್ಯರೆ,



ಮೈಸೂರು ನಗರದಲ್ಲಿ ಸೆಸ್ಕ್‌ನಿಂದ ಅಂಡರ್ ಗ್ರೌಂಡ್ ಕೇಬಲ್‌ಗಳನ್ನು ಅಳವಡಿಸುವ ಕಾಮಗಾರಿ ಅರ್ಧಂಬರ್ಧಕ್ಕೆ ಸ್ಥಗಿತಗೊಳಿಸಿದಂತಿದೆ. ಕೆಲ ಮುಖ್ಯ ರಸ್ತೆಗಳ ಪಕ್ಕದಲ್ಲಿ ಗುಂಡಿಗಳನ್ನು ತೆಗೆದು ಕೇಬಲ್‌ಗಳನ್ನು ಹಾಕಿದ್ದು, ಆ ಬಳಿಕ ಗುಂಡಿಗಳನ್ನು ಸಮರ್ಪಕ ರೀತಿಯಲ್ಲಿ ಮುಚ್ಚದೇ ಕೈತೊಳೆದುಕೊಂಡಿದ್ದಾರೆ.

ಅಂತೆಯೇ ಕುವೆಂಪುನಗರದ ಎನ್ ಬ್ಲಾಕ್‌ನ ಮುಖ್ಯ ರಸ್ತೆಯಲ್ಲಿರುವ 'ಹೋರಿ ಸುಬ್ಬೇಗೌಡ ಬಸ್ ಪ್ರಯಾಣಿಕರ ತಂಗುದಾಣ'ದ ಪಕ್ಕದಲ್ಲಿ ಬೇಕಾಬಿಟ್ಟಿಯಾಗಿ ಗುಂಡಿಗಳನ್ನು ಮುಚ್ಚಲಾಗಿದೆ. ಇದರ ಪರಿಣಾಮ ಕಳೆದ 3 ದಿನಗಳ ಹಿಂದೆ ಇಲ್ಲಿ ಹಸುವೊಂದು ಬಿದ್ದು ಕಾಲು ಮುರಿದುಕೊಂಡಿದ್ದು, ಇದಕ್ಕೆ ಹೊಣೆ ಯಾರು?

ತೆಗೆದ ಗುಂಡಿಗಳನ್ನು ಪೂರ್ಣವಾಗಿ ಮುಚ್ಚಿಸಬೇಕೆಂಬ ಕನಿಷ್ಠ ಜ್ಞಾನವೂ ಅಧಿಕಾರಿಗಳಿಗೆ ಇಲ್ಲವೇ? ಮೈಸೂರು ನಗರದ ಅನೇಕ ಕಡೆಗಳಲ್ಲಿ ಇದೇ ಪರಿಸ್ಥಿತಿ ಇದೆ. ಇನ್ನೇನು ಮುಂಗಾರು ಮಳೆ ಪ್ರಾರಂಭವಾಗಲಿದ್ದು, ಶೀಘ್ರ ಸೂಕ್ತ ಕ್ರಮ ಕೈಗೊಳ್ಳದೇ ಹೋದಲ್ಲಿ ಅದೆಷ್ಟು ಜನ ಈ ಗುಂಡಿಗಳಿಂದ ಕೈಕಾಲು ಮುರಿದುಕೊಳ್ಳುತ್ತಾರೋ ಗೊತ್ತಿಲ್ಲ. ಒಂದು ವೇಳೆ ಯಾರಾದರೂ ಈ ಗುಂಡಿಗಳಿಂದ ಪ್ರಾಣ ಕಳೆದುಕೊಂಡರೆ ಅದಕ್ಕೆ ಸೆಸ್ಕ್ ಅಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

ಸರ್ಕಾರಿ ಬ್ಯಾಂಕ್‌ಗಳ ಎಟಿಎಂಗಳ ಕತೆ–ವ್ಯಥೆ!

ಮಾನ್ಯರೆ,

ಮೇ 9, 10 ರಂದು ಎರಡನೇ ಶನಿವಾರ ಹಾಗೂ ಭಾನುವಾರದ ಕಾರಣ ಬ್ಯಾಂಕ್‌ಗಳಿಗೆ ರಜೆ ಇತ್ತು. ಶನಿವಾರ ಬೆಳಗ್ಗೆ 11 ಗಂಟೆಗೆ ರಾಮಕೃಷ್ಣನಗರದ ರಾಮಕೃಷ್ಣ ವೃತ್ತದ ಬಳಿಯ ಕೆನರಾ ಬ್ಯಾಂಕ್ ಶಾಖೆಯ ಎಟಿಎಂನಲ್ಲಿ ಹಣ ಡ್ರಾ ಮಾಡಲು ಹೋಗಿದ್ದೆ. ಆದರೆ ಎಟಿಎಂನಲ್ಲಿ ಹಣ ಇಲ್ಲದ ಕಾರಣ ಡ್ರಾ ಮಾಡಲು ಸಾಧ್ಯವಾಗಲಿಲ್ಲ. ಸೆಕ್ಯೂರಿಟಿ ಗಾರ್ಡ್ ಕೂಡ ಅಲ್ಲೇ ಇದ್ದ. ಹಣ ಬರಲಿಲ್ಲವೆ? ಎಂದು ಕೇಳಿದ. ನಾನು ಇಲ್ಲ ಎಂದು ಹೇಳಿದೆ. ಮತ್ತೆ ಯಾವಾಗ ಹಣ ಹಾಕುತ್ತಾರೆ ಎಂದು ನಾನು ಕೇಳಿದೆ. ಅದಕ್ಕೆ ಸೆಕ್ಯೂರಿಟಿ ಗಾರ್ಡ್, ಇವತ್ತು ಮತ್ತು ನಾಳೆ ಬ್ಯಾಂಕ್‌ಗೆ ರಜೆ. ಇನ್ನೇನಿದ್ದರೂ ಸೋಮವಾರವೇ ಎಂದು ಹೇಳಿ ಎಟಿಎಂನ ಬಾಗಿಲು ಮುಚ್ಚಿದ.

ಮೇ 11 ರ ಸೋಮವಾರ ಬೆಳಗ್ಗೆ 11 ಗಂಟೆಗೆ ಅದೇ ಎಟಿಎಂ ಬಳಿಗೆ ಹೋದಾಗಲೂ ಎಟಿಎಂ ಬಾಗಿಲು ಮುಚ್ಚಿತ್ತು. ನಂತರ ನಾನು ವಿಶ್ವಮಾನವ ಜೋಡಿ ರಸ್ತೆಯ ರಾಮಕೃಷ್ಣನಗರ ಎಸ್‌ಬಿಐ ಶಾಖೆಯ ಎಟಿಎಂಗೆ ಹೋದೆ. ಅಲ್ಲಿ ಹಣ ಇಲ್ಲ ಎಂದು ಬರೆದು ಹಾಕಿದ್ದರು. ಈ ಎಟಿಎಂನಲ್ಲಿ ಯಾವಾಗಲೂ ಇದೇ ರೀತಿ ಇರುತ್ತದೆ. ಯಾವಾಗಲೂ ಹಣವನ್ನೇ ಹಾಕುವುದಿಲ್ಲ. ನಾನು ಬ್ಯಾಂಕ್ ಒಳಗೆ ಹೋಗಿ ಅಲ್ಲಿನ ಸಿಬ್ಬಂದಿಯನ್ನು ಈ ಬಗ್ಗೆ ವಿಚಾರಿಸಿದೆ. ಅವರು ನನಗೆ ಕೊಟ್ಟ ಮಾಹಿತಿ ವಿಚಿತ್ರವಾಗಿತ್ತು. ಆರ್‌ಬಿಐ ನವರು 500 ರೂ.ಮುಖ ಬೆಲೆಯ ನೋಟುಗಳನ್ನು ನೀಡುತ್ತಿಲ್ಲ. ಇದರಿಂದಾಗಿ ನಾವು ಎಟಿಎಂಗೆ ಹಣ ತುಂಬುತ್ತಿಲ್ಲ. ಎಟಿಎಂಗೆ 35 ಲಕ್ಷ ರೂಪಾಯಿಗಳನ್ನು ತುಂಬಬೇಕು. 100, 200 ಮುಖಬೆಲೆಯ ನೋಟುಗಳನ್ನು ತುಂಬಲು ಆಗುತ್ತಿಲ್ಲ. ಒಂದು ವೇಳೆ ಹಾಕಿದರೂ ಇದು ಮುಖ್ಯ ರಸ್ತೆಯಲ್ಲಿ ಇರುವುದರಿಂದ ಒಂದೇ ದಿನದಲ್ಲಿ ಖಾಲಿಯಾಗಿ ಹೋಗುತ್ತದೆ. ಎಂದು ಹೇಳಿದರು. ಅಲ್ಲದೆ ಚಿಲ್ಲರೆ ನೋಟುಗಳನ್ನು ಹಾಕಿದಾಗ ಗ್ರಾಹಕರಿಗೆ 500 ರ ಬದಲಿಗೆ 100, 200 ನೋಟುಗಳು ಬಂದು ಸಮಸ್ಯೆಯಾಗುತ್ತದೆ. ಈ ಕಾರಣದಿಂದ ಹಣ ತುಂಬುತ್ತಿಲ್ಲ ಎಂದರು.

ನಂತರ ನಾನು ದಟ್ಟಗಳ್ಳಿಯ ನೇತಾಜಿ ವೃತ್ತದ ಬಳಿಯ ಎಸ್‌ಬಿಐ ಶಾಖೆಯ ಎಟಿಎಂಗೆ ಹೋದೆ ಅಲ್ಲಿನ ಎಟಿಎಂ ಕೂಡ ನೋ ಕ್ಯಾಶ್ ಎಂದು ತೋರಿಸಿತು. ನಂತರ ಪಕ್ಕದಲ್ಲಿದ್ದ ಇಂಡಿಯನ್ ಬ್ಯಾಂಕ್ ಎಟಿಎಂಗೆ ಹೋದೆ. ಅದು ಔಟ್ ಆಫ್ ಸರ್ವಿಸ್ ಎಂದು ತೋರಿಸಿತ್ತು. ಮತ್ತೆ ನಾನು ಹತ್ತಿರವಿದ್ದ ದಟ್ಟಗಳ್ಳಿಯ ಬ್ಯಾಂಕ್ ಆಫ್ ಬರೋಡ ಶಾಖೆಯ ಎಟಿಎಂಗೆ ಹೋದೆ. ಅಲ್ಲೇ ನೂರರ ನೋಟುಗಳು ಮಾತ್ರ ಇದ್ದವು. ಅದರ ಮಿತಿ ಕೇವಲ ನಾಲ್ಕುವರೆ ಸಾವಿರ ರೂಪಾಯಿ ಮಾತ್ರ. ಅಂತೂ ನಾನು 4000 ರೂಪಾಯಿಗಳನ್ನು ಪಡೆದುಕೊಂಡೆ. ನನಗೂ ಮೊದಲೇ ಈ ಶಾಖೆಗೆ ಬಂದಿದ್ದ ತಾಯಿ ಮಗಳಿಬ್ಬರು ಎಟಿಎಂನಿಂದ ಹಣ ಪಡೆಯಲು ಪರದಾಡುತ್ತಿದ್ದರು. ಅವರಿಗೆ 50,000 ರೂ. ತುರ್ತಾಗಿ ಬೇಕಾಗಿತ್ತಂತೆ. ಆದರೆ 500ರೂ ನೋಟುಗಳು ಇಲ್ಲದ ಕಾರಣ ಅವರಿಗೆ ಹಣ ಬರುತ್ತಿರಲಿಲ್ಲ. ಅವರು ನಿರಾಸೆಯಿಂದ ಮನೆಗೆ ಹೋದರು.


ಆರ್‌ಬಿಐ ಐನೂರರ ನೋಟುಗಳನ್ನು ನೀಡುತ್ತಿಲ್ಲ ಎಂದರೆ ಮತ್ತೆ ಸರ್ಕಾರ ನೋಟು ಅಮಾನ್ಯೀಕರಣ ಮಾಡುತ್ತಿರುವುದೇ ಎನ್ನುವ ಅನುಮಾನ ಶುರುವಾಯಿತು. ಸಾವಿರ, ಎರಡು ಸಾವಿರ ರೂಪಾಯಿ ನೋಟುಗಳನ್ನೂ ಹಿಂಪಡೆದು ಗಂಡಾಂತರ ಮಾಡಿದ ಸರ್ಕಾರ ಈಗ 500 ನೋಟುಗಳನ್ನು ಹಿಂಪಡೆಯುತ್ತಿದೆಯೇ? ಗ್ರಾಹಕರು ಬ್ಯಾಂಕ್‌ಗಳಲ್ಲಿ ಹಣ ಇಟ್ಟಿದ್ದರೂ ಜನರ ಕೈಗೆ ಹಣ ಲಭ್ಯವಾಗದಿದ್ದರೆ ಈ ಬ್ಯಾಂಕ್, ಎಟಿಎಂಗಳು ಇದ್ದೂ ಪ್ರಯೋಜನ ವೇನು? ಆರ್‌ಬಿಐ 500ರ ನೋಟುಗಳನ್ನು ಸರಬರಾಜು ಮಾಡುತ್ತಿಲ್ಲ ಯಾಕೆ? ಮುದ್ರಣ ಮಾಡುತ್ತಿಲ್ಲವೇಕೆ? ಇದು ಸರ್ಕಾರದ ವೈಫಲ್ಯವೇ, ಬ್ಯಾಂಕ್‌ಗಳ ಸೋಮಾರಿತನವೇ? ಆರ್‌ಬಿಐನ ಬೇಜವಾಬ್ದಾರಿತನವೇ? ಕನಿಷ್ಠ ಠೇವಣಿ ಇಲ್ಲ ಎಂದು ಗ್ರಾಹಕರಿಗೆ ದಂಡ ವಿಧಿಸುವ ಬ್ಯಾಂಕ್‌ಗಳು, ಎಟಿಎಂನಿಂದ ಹಣ ಲಭ್ಯವಾಗದಿದ್ದಾಗ ಗ್ರಾಹಕರಿಗೆ ಪರಿಹಾರ ನೀಡುವಂತಾಗಬೇಕು. ಕೇಂದ್ರ ಹಣಕಾಸು ಇಲಾಖೆ ಬ್ಯಾಂಕ್ ಮತ್ತು ಎಟಿಎಂಗಳ ಏಜೆನ್ಸಿ ವಿರುದ್ಧ ಕ್ರಮ ಕೈಗೊಳ್ಳಬೇಕು.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಪುಸ್ತಕ ಪರಿಚಯ

ಅಪರೂಪದ 'ರಂಗಭೂಮಿ'

ಕನ್ನಡ ರಂಗಭೂಮಿ ತನ್ನದೇ ಇತಿಹಾಸ ಹೊಂದಿದೆ. ಸುಮಾರು 1870ರಲ್ಲಿ ತಲೆ ಎತ್ತಿ ಈಚಿನವರೆಗೂ ಅದು ತನ್ನದೇ ಛಾಪು ಮೂಡಿಸಿಕೊಂಡು ಬೆಳೆದು ಬಂದಿದೆ. ರಾಜಾಶ್ರಯದಲ್ಲಿ ಪ್ರವರ್ಧಮಾನಕ್ಕೆ ಬಂದು ಗರಿಕಟ್ಟಿಕೊಳ್ಳುವುದರ ಜೊತೆಗೆ ಖಾಸಗೀ ನಾಟಕ ಕಂಪನಿಗಳೂ ಅರಮನೆಯ ನಾಟಕ ಮಂಡಲಿಗೆ ಕಡಿಮೆ ಇಲ್ಲದಂತೆ ಕೊಡುಗೆ ನೀಡಿವೆ. ಅವುಗಳ ಕೊಡುಗೆಯೇ ಮೇಲಾಗಿದೆ. ಈಚೆಗೆ ಆಧುನಿಕ ತಂತ್ರಜ್ಞಾನ ಬೆಳೆದು ರಂಗಭೂಮಿ ಸಪ್ಪೆಯಾಗಿದೆ. ರಂಗ ಕಲೆಗಾರರು ಕಡಿಮೆಯಾಗಿದ್ದಾರೆ. ಪರಿಕರಗಳು ಮೂಲೆ ಹಿಡಿಯುತ್ತಿವೆ. ನಾಟಕ ರಂಗಭೂಮಿ ಮರೆಯಾಗಿ ಹೋಗುವ ಆತಂಕದ ಹಂತ ತಲುಪುತ್ತಿದೆ.



ರಂಗಭೂಮಿ

ಸಂಗ್ರಹಕರು: ಪ್ರೊ.ಎ.ವಿ.ಸೂರ್ಯನಾರಾಯಣಸ್ವಾಮಿ, ಎಚ್.ಎಸ್.ಗೋವಿಂದಗೌಡ

ಪ್ರಕಟಿತ ವರ್ಷ : 2022

ಪುಟಗಳು: 480

ಪ್ರಕಾಶಕರು : ಹನ್ಯಾಳು ಪ್ರಕಾಶನ, ವಿಜಯನಗರ, ಮೈಸೂರು

ಬೆಲೆ : ರೂ. 500

ಮೈಸೂರಿನ ಇತಿಹಾಸದಲ್ಲಿ ನಾಟಕರಂಗದ ಪ್ರಸ್ತಾಪ ಮೊದಲಿನಿಂದ ರಾಜಾಶ್ರಯದ ಹಿನ್ನೆಲೆಯಲ್ಲಿ ಗುರುತಿಸಿಕೊಂಡಿರುವುದು ಕಂಡುಬರುತ್ತದೆ. ಅದು ಸಾರ್ವಜನಿಕವಾಗಿ ಹೊರಬಂದು ಜನ ಮೆಚ್ಚುಗೆಯಾಗಿದ್ದು ಮಹಾರಾಜ ಚಾಮರಾಜ ಒಡೆಯರ ಕಾಲದಲ್ಲಿ ಎನ್ನಬಹುದು. ಅವರ ಕಾಲದಲ್ಲಿ ಅರಮನೆ ಕಂಪನಿಯ ಜೊತೆಗೆ ರಂಗಕಲೆಗಾರರು ವೃತ್ತಿ ತಂಡಗಳನ್ನು ಕಟ್ಟಿ ಜನ ಮೆಚ್ಚಿಸಿದರು. ರಾಜಾಶ್ರಯದಿಂದಾಗಿ ಕನ್ನಡ ರಂಗಭೂಮಿ ಅಂದು ಭದ್ರವಾಗಿ ತಳವೂರಿತು. ರಂಗಭೂಮಿಗಾಗಿಯೇ ಹಲವಾರು ನಾಟಕಗಳು ರಚನೆಯಾದವು. ಅವು ಪ್ರಸಿದ್ಧಿಯನ್ನೂ ಪಡೆದವು. ಜನರನ್ನೂ ಮೆಚ್ಚಿಸಿದವು. ಕಲೆಗಾರರ ಸಂಖ್ಯೆಯೂ ಬೆಳೆಯಿತು.

1882ರಲ್ಲಿ ಅರಮನೆಯಲ್ಲಿಯೇ 'ಶ್ರೀಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ' ಆರಂಭಗೊಂಡಿತು. ಅದು 1907ರ ವರೆಗೂ ಅಸ್ತಿತ್ವದಲ್ಲಿತ್ತು. ಮಹಾರಾಜರ ಪ್ರೋತ್ಸಾಹದಲ್ಲಿ ಅದಕ್ಕಾಗಿಯೇ ನಾಟಕಗಳು ರಚಿಸಲ್ಪಟ್ಟವು. ಅವುಗಳನ್ನು ರಂಗದ ಮೇಲೆಯೂ ತಂದು ಜನರ ಮುಂದೆ ಪ್ರದರ್ಶಿಸಲಾಯಿತು. ಆದರೆ ಎರಡು ವರ್ಷ ಮುಂಚೆಯೇ 1880ರಲ್ಲಿ ಮಂಡ್ಯದಿಂದ ಮೈಸೂರಿಗೆ ಬಂದಿದ್ದ ರಂಗಾಚಾರ್ಯರು 'ರಾಜಧಾನಿ ನಾಟಕ ಮಂಡಲಿ' ಯನ್ನು ಸ್ಥಾಪಿಸಿದರು. ಹಲವಾರು ನಾಟಕಗಳನ್ನು ಜನರಿಗಾಗಿ ಆಡಿ ತೋರಿದರು. ಅವರ ಮಂಡಲಿಯ ಪಾತ್ರಧಾರಿಯೇ ಆದ ಗೌರೀ ನರಸಿಂಹಯ್ಯನವರು ಬೆಂಗಳೂರಿನಿಂದ ಎ. ವಿ. ವರದಾಚಾರ್ಯರನ್ನು ಮೈಸೂರಿಗೆ ಕರೆದುಕೊಂಡು ಬಂದು ನಾಟಕ ರಂಗಕ್ಕೆ ಉಸಿರು ತುಂಬಿದರು. ಮುಂದೆ ವರದಾಚಾರ್ಯರು ಪ್ರಸಿದ್ಧರಾಗಿ 'ನಾಟಕ ಶಿರೋಮಣಿ'ಗಳಾದರು. ಅರಮನೆ, ಖಾಸಗಿ ವೃತ್ತಿ ಮಂಡಲಿಗೆ ಮುಂಚೆ ಮುಂಬಯಿಯ ಕಡೆಯ ಪಾರ್ಸಿ, ಮರಾಠಿ ತಂಡಗಳು ಮೈಸೂರು ಸೀಮೆಗೆ ಬಂದು ನಾಟಕ ಪ್ರದರ್ಶಿಸುತ್ತಿದ್ದವು. ಮೈಸೂರಿನಲ್ಲಿ 1880ರ ಸಮಯದಲ್ಲಿ ಕನ್ನಡ ರಂಗಭೂಮಿ ತಲೆ ಎತ್ತಿಕೊಂಡರೆ, ಉತ್ತರ ಕರ್ನಾಟಕದ ಭಾಗದಲ್ಲಿ 1877ರಲ್ಲಿ ಗದಗ ಕರ್ಣಾಟಕ ನಾಟಕ ಮಂಡಲಿ ಆಡಿತೋರಿದ ಶಾಂತ ಕವಿಗಳ 'ಉಷಾಪಹರಣ' ಮೊದಲ ನಾಟಕವನ್ನಾಗಿಸಿತು.

ಅಲ್ಲಿಂದ ಮುಂದೆ ಕನ್ನಡ ರಂಗಭೂಮಿ ಏಳುಬೀಳುಗಳ ನಡುವೆ ಬೆಳೆದು ಮುಂದೆ ಸಾಗಿತು. ಈ ಅವಧಿಯಲ್ಲಿ ಹಲವಾರು ನಾಟಕ ತಂಡಗಳು, ನಾಟಕಕಾರರು ಪ್ರಸಿದ್ಧಿಗೆ ಬಂದರು. ಹೊಸ ರಂಗಸಜ್ಜಿಕೆಗಳು ರೂಪುಗೊಂಡವು. ನಟರು, ನಾಟಕ ಜನರ ಮೆಚ್ಚುಗೆ ಗಳಿಸಿದರು. ಉತ್ತಮ ನಾಟಕಗಳ ಜೊತೆಗೆ ಸಾಮಾನ್ಯ ನಾಟಕಗಳೂ ಪ್ರದರ್ಶನಕ್ಕೆ ಬಂದವು. ಪ್ರಶಂಸೆ–ಟೀಕೆಗಳೂ ಪ್ರಕಟವಾದವು. ಈ ಮಧ್ಯೆ ನಟನಿಗೆ ಇರಬೇಕಾದ ಎಲ್ಲಾ ಗುಣಗಳನ್ನೂ ಹೊಂದಿದ್ದ ಎ.ವಿ.ವರದಾಚಾರ್ಯರು ಉತ್ತುಂಗ ಶಿಖರಕ್ಕೇರಿದರು. ಅವರ ನಾಟಕ ಕಂಡ ಜನ ಅವರನ್ನು ಬಾಯ್ತುಂಬ ಹೊಗಳಿದರು.

ಈ ಬೆಳವಣಿಗೆಯಲ್ಲಿ 1925ರಲ್ಲಿ ಜರುಗಿದ ಒಂದು ಕಾರ್ಯವೆಂದರೆ ನಟನ ಕಲೆಗೆ ಆದ್ಯತೆ ನೀಡಿದ 'ರಂಗಭೂಮಿ' ಪತ್ರಿಕೆಯ ಪ್ರಾರಂಭ. ದ.ಕೃ. ಭಾರದ್ವಾಜರ ಸಂಪಾದಕತ್ವದಲ್ಲಿ ಸಚಿತ್ರ ಮಾಸ ಪತ್ರಿಕೆಯಾಗಿ ವಾರ್ಷಿಕ ಮೂರು ರೂ.ಗಳಿಗೆ ಅದು ಕೈಸೇರುತ್ತಿತ್ತು. ಹತ್ತನೇ ವರ್ಷದಲ್ಲಿ ಅದಕ್ಕೊಂದು ಸಂಪಾದಕ ಮಂಡಳಿಯ ವ್ಯವಸ್ಥೆಯಾಯಿತು. ಅದರಲ್ಲಿ ವ್ಯವಸ್ಥಾಪಕ ಸಂಪಾದಕ ಬಿ.ಶ್ರೀನಿವಾಸಯ್ಯಂಗಾರ್, ಸಂಪಾದಕರಾಗಿ ಎಂ.ಎಸ್.ಸುಬ್ರಹ್ಮಣ್ಯಶಾಸ್ತ್ರಿ, ಸದಸ್ಯರಾಗಿ ಬೆನಗಲ್ ರಾಮರಾವ್, ಮಾಸ್ತಿ ವೆಂಕಟೇಶಯ್ಯಂಗಾರ್, ಎಸ್.ಜಿ.ಶಾಸ್ತ್ರಿ, ಸಿ.ಕೆ.ವೆಂಕಟರಾಮಯ್ಯ, ಪಿ.ಶ್ರೀನಿವಾಸರಾವ್, ವಿ.ಸೀತಾರಾಮಯ್ಯ, ಬೆಳ್ಳಾವೆ ನರಹರಿಶಾಸ್ತ್ರಿ, ದೇವುಡು ನರಸಿಂಹ ಶಾಸ್ತ್ರಿ ಇಂತಹ ಮಹಾನುಭಾವರು ಕೈಜೋಡಿಸಿದರು. ಈ ಮಹನೀಯರೂ ಲೇಖನಗಳನ್ನು ಬರೆದು ಪತ್ರಿಕೆ ಬೆಳೆಸಿದರು. ರಂಗಚಿಂತಕರು ಲೇಖನಗಳನ್ನು ಬರೆದರು. ರಂಗಭೂಮಿಯಲ್ಲಿನ ರಂಗಪ್ರದರ್ಶನದ ಚಿತ್ರಗಳು, ನಟ–ನಟಿಯರ–ನಾಟಕಕಾರರ ಭಾವಚಿತ್ರಗಳು ಪ್ರಕಟವಾದವು. ನಾಟಕಸಾಹಿತ್ಯ ಸೃಷ್ಟಿಸಿ ಪತ್ರಿಕೆ ಬೆಳೆಯಿತು. ಒಂದು ದಶಕಕ್ಕೂ ಹೆಚ್ಚು ಕಾಲ ನಾಟಕ ಸಂಸ್ಕೃತಿಯ ಆಗುಹೋಗುಗಳನ್ನು ದಾಖಲಿಸಿ ಅದ್ವಿತೀಯ ಪತ್ರಿಕೆಯಾಗಿ ನಡೆಯಿತು. 1938ರವರೆಗೆ ಹನ್ನೆರಡು ವರ್ಷಗಳು ಅದು ಬದುಕಿದ್ದು ನಂತರ ಮರೆಯಾಯಿತು. ಈ ಅವಧಿಯಲ್ಲಿ ವೃತ್ತಿ ರಂಗದ ವಿವಿಧ ಮಜಲುಗಳ ಅನೇಕ ಲೇಖನಗಳು 'ರಂಗಭೂಮಿ'ಯಲ್ಲಿ ಪ್ರಕಟವಾಗಿವೆ. ರಂಗಭೂಮಿಯ ಸರ್ವತೋಮುಖ ಅಭಿವೃದ್ಧಿಗೆ ಸಂಬಂಧ ಪಟ್ಟಂತೆ ಲೇಖನಗಳು ಮುದ್ರಣಗೊಂಡಿವೆ.



ಗೌರಿ ಸತ್ಯ

ಹಿರಿಯ ಪತ್ರಕರ್ತರು

ಮೊ. 87627 88685

ಹಲವಾರು ರಂಗ ಚಿಂತಕರು ತಮ್ಮ ಅನಿಸಿಕೆಗಳನ್ನು ತೆರೆದಿಟ್ಟಿದ್ದಾರೆ. ನಾಟಕ ಕಲೆ ಉಳಿಯಬೇಕಾದರೆ ನಟರು, ನಾಟಕಕಾರರು, ಪೋಷಕರು, ಪ್ರೇಕ್ಷಕರ ಜವಾಬ್ದಾರಿಯನ್ನು ಗುರುತಿಸಿದ್ದಾರೆ. ರಂಗ ಸಾಹಿತ್ಯ, ರಂಗ ಸಂಗೀತದ ಔಚಿತ್ಯ, ಪ್ರಸಾಧನ, ನಾಟಕಗಳ ವಿಮರ್ಶೆ, ಸ್ತ್ರೀಯರ ಪಾತ್ರ, ವಿನೋದ ಮುಂತಾದ ವಿಷಯಗಳ ಬಗ್ಗೆ ಮನಸೆಳೆದಿದ್ದಾರೆ. ರಂಗಭೂಮಿಯ ಇತಿಹಾಸವನ್ನೂ ಸೂಕ್ಷ್ಮವಾಗಿ ಪ್ರಸ್ತಾಪಿಸಿದ್ದಾರೆ. ಇವೆಲ್ಲವೂ ಒಳಗೊಂಡ 'ರಂಗಭೂಮಿ'ಯ ಸಂಚಿಕೆಗಳು ಒಂದು ದೃಷ್ಟಿಯಲ್ಲಿ ಅಂದಿನ ನಾಟಕ ರಂಗಭೂಮಿಯ ಇತಿಹಾಸವೇ ಆಗುತ್ತದೆ. ರಂಗಭೂಮಿಯ ಆಸಕ್ತರಿಗೆ ಆಸಕ್ತಿ ಮೂಡಿಸುತ್ತದೆ.

ಆದರೆ ಆ ಪತ್ರಿಕೆಯ ಪ್ರತಿಗಳು ಅಲಭ್ಯವಾಗಿತ್ತು. ಈಗ ಅವುಗಳಲ್ಲಿನ ಪ್ರಮುಖ ಲೇಖನಗಳನ್ನು ಸಂಗ್ರಹಿಸಿ ಕನ್ನಡ ಪ್ರಾಧ್ಯಾಪಕ ಮತ್ತು ಪ್ರಸಿದ್ಧ ಲೇಖಕ ಪ್ರೊ.ಎ.ವಿ.ಸೂರ್ಯನಾರಾಯಣಸ್ವಾಮಿ ಮತ್ತು ಎಚ್.ಎಸ್.ಗೋವಿಂದೇಗೌಡ ಅವರು ಪುಸ್ತಕವನ್ನಾಗಿ ಪ್ರಕಟಿಸಿ ಉಪಕಾರ ಮಾಡಿದ್ದಾರೆ. ಅಂದು ಪ್ರಕಟವಾಗಿದ್ದ ಸುಮಾರು 70 ಲೇಖನಗಳು ಇವರು ಹೊರತಂದಿರುವ 'ರಂಗಭೂಮಿ' ಪುಸ್ತಕದಲ್ಲಿ ಸೇರ್ಪಡೆಯಾಗಿವೆ. ಹಿರಿಯ ರಂಗಕರ್ಮಿ ಎಚ್. ಎಸ್. ಉಮೇಶ್ ಇದಕ್ಕೆ ಪೂರಕವಾದ ಒಂದು ಮುನ್ನುಡಿಯನ್ನು ಬರೆದಿದ್ದಾರೆ.

ಪ್ರಕಟವಾಗಿರುವ ಲೇಖನಗಳಲ್ಲಿ ಭಾರತೀಯ ನಾಟಕಗಳು, ಕರ್ನಾಟಕ, ಮೈಸೂರು ರಂಗಭೂಮಿಯ ಇತಿಹಾಸ, ಉತ್ತರ ಕರ್ನಾಟಕದ ರಂಗಭೂಮಿಯ ಸಂಕ್ಷಿಪ್ತ ಇತಿಹಾಸ, ರಷ್ಯದ ರಂಗಭೂಮಿ ಕುರಿತ ವಿಷಯಗಳೂ ಸೇರಿವೆ. ನಾಟಕದಲ್ಲಿ ವಿದೂಷಕನ ಪಾತ್ರ, ಅಭಿನಯ ಕಲೆ, ರಸಾಭಿವ್ಯಕ್ತಿ, ಸ್ತ್ರೀಯರೂ ರಂಗಭೂಮಿಯೂ, ಸಂಗೀತದ ಔಚಿತ್ಯ, ಗಾಯನದಲ್ಲಿ ಭಾವಸ್ಪಷ್ಟೀಕರಣ, ವಿನೋದವೆಂದರೇನು, ದುಃಖಾತ್ಮಕ ನಾಟಕ, ಪ್ರಸಾಧನ, ನಾವೂ ನಾಟಕವೂ, ನಾಂದಿಯು ಬೇಡವೇ, ನಿರ್ದೇಶಕನ ಕರ್ತವ್ಯ, ಆಗಬೇಕಾದ ಸುಧಾರಣೆ, ರಂಗಭೂಮಿಯ ಜೀರ್ಣೋದ್ಧಾರ ಮತ್ತಿತರೆ ವಿಷಯಗಳನ್ನು ಚರ್ಚಿಸಿರುವ ಲೇಖನಗಳಿವೆ. ರಾಷ್ಟ್ರೀಯ ರಂಗಸ್ಥಾಪನೆಯ ಬಗ್ಗೆ ಒಂದು ಚಿಂತನೆಯಿದೆ. ಎ.ವಿ.ವರದಾಚಾರ್ಯರು, ವೀಣೆ ಶೇಷಣ್ಣ ಅವರ ಚರಮ ಶ್ಲೋಕಗಳಿವೆ. ವರದಾಚಾರ್ಯರನ್ನು ಕುರಿತ ನಾಲ್ಕೈದು ಲೇಖನಗಳು ಅವರ ವ್ಯಕ್ತಿತ್ವ, ನಾಟಕ, ಪ್ರತಿಭೆಗಳನ್ನು ಎತ್ತಿಹಿಡಿಯುತ್ತವೆ. ಒಟ್ಟಿನಲ್ಲಿ ರಂಗಭೂಮಿಯ ಬಹುತೇಕ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟ ಲೇಖನಗಳು 'ರಂಗಭೂಮಿ' ಪುಸ್ತಕದಲ್ಲಿ ಒಗ್ಗೂಡಿವೆ.

ಬೆಳ್ಳಾವೆ ನರಹರಿ ಶಾಸ್ತ್ರಿಗಳು, ಕೆರೋಡಿ ಸುಬ್ಬರಾವ್, ನಾರಾಯಣರಾವ್ ಹುಯಿಲಗೋಳ, ದೇವುಡು ನರಸಿಂಹಶಾಸ್ತ್ರಿ, ಪಂಡಿತ ತಾರಾನಾಥರು, ಎಂ.ಎ.ಗೋಪಾಲಸ್ವಾಮಿ ಅಯ್ಯಂಗಾರ್, ಬಿ.ಎಸ್. ರಾಮರಾವ್, ಧರ್ಮಾವರಂ ಲಕ್ಷ್ಮೀದೇವಿ, ಮುದವೀಡು ಕೃಷ್ಣರಾಯರು, ವಿ.ಸೀತಾರಾಮಯ್ಯ, ಗರುಡ ಸದಾಶಿವರಾವ್, ಕಳಲೆ ಸಂಪತ್ಕುಮಾರಾಚಾರ್ಯ, ವಿದ್ವಾನ್ ನಂಜುಂಡಶಾಸ್ತ್ರಿಗಳು ಮುಂತಾದ ಗಣ್ಯರು ಈ ವಿಷಯಗಳ ಬಗ್ಗೆ ವಿಶ್ಲೇಷಿಸಿದ್ದಾರೆ. ಹೆಸರಾಂತ ಅ.ನ.ಕೃಷ್ಣರಾಯರ ಆರು ಲೇಖನಗಳನ್ನು ಇಲ್ಲಿ ಸೇರಿಸಲಾಗಿದೆ. ಇಂತಹ ಸಮಗ್ರವಾದ ಪುಸ್ತಕ ಹೊರತಂದು ಪ್ರೊ. ಸೂರ್ಯನಾರಾಯಣಸ್ವಾಮಿಗಳು ಮತ್ತು ಗೋವಿಂದೇಗೌಡರು ರಂಗಭೂಮಿಯ ಅಭಿಮಾನಿಗಳಿಗೆ, ರಂಗಭೂಮಿಯ ಬಗ್ಗೆ ಸಂಶೋಧನೆಗೆ ನೆರವಾಗಬಲ್ಲ ಉತ್ತಮ ಕೊಡುಗೆ ನೀಡಿದ್ದಾರೆ.

ಮೊಬೈಲ್ ಮಾಯೆಯಲ್ಲಿ ಮುಳುಗುತ್ತಿರುವ ವಿದ್ಯಾರ್ಥಿಗಳು!!

ಒಂದು ಕಾಲವಿತ್ತು. ಶಾಲೆಯ ಗಂಟೆ ಬಾರಿಸಿದ ತಕ್ಷಣ ಮಕ್ಕಳು ಮನೆಗೆ ಓಡಿ ಬಂದು, ಚೀಲ ಎಸೆದು, ಮೈದಾನದಲ್ಲಿ ಆಟವಾಡುತ್ತಿದ್ದರು. ಸಂಜೆ ದೀಪ ಹಚ್ಚುವ ಹೊತ್ತಿಗೆ ಪುಸ್ತಕ ಹಿಡಿದು ಕುಳಿತು ಓದುತ್ತಿದ್ದರು. ಇಂದು ಆ ಚಿತ್ರ ಬದಲಾಗಿದೆ. ಶಾಲೆಯಿಂದ ಬಂದ ಮಗು ನೇರವಾಗಿ ಮೊಬೈಲ್ ಕೈಗೆ ತೆಗೆದುಕೊಳ್ಳುತ್ತದೆ. ತಿನ್ನುವಾಗ, ಮಲಗುವಾಗ, ಎಚ್ಚರಗೊಂಡಾಗ ಎಲ್ಲ ಕ್ಷಣಗಳಲ್ಲೂ ಮೊಬೈಲ್ ಜೊತೆಗಾರ. ಇದು ಇಂದಿನ ಸಮಾಜ ಎದುರಿಸುತ್ತಿರುವ ಅತ್ಯಂತ ಗಂಭೀರ ಸಮಸ್ಯೆಗಳಲ್ಲಿ ಒಂದಾಗಿದೆ.



ವಿದ್ಯಾಭ್ಯಾಸ ಕಡೆ ವಿಮುಖತೆ

ಹಿಂದೆ ಮಕ್ಕಳು ಪಠ್ಯಪುಸ್ತಕದಲ್ಲಿ ಮುಳುಗಿ ಹೋಗುತ್ತಿದ್ದರು. ಇಂದು ಅದೇ ಮಕ್ಕಳು ಗಂಟೆ ಗಟ್ಟಲೆ YouTube Reels, Instagram, Online Games ನಲ್ಲಿ ಕಳೆದುಕೊಳ್ಳುತ್ತಾರೆ. ಮೊಬೈಲ್ ನೀಡುವ ತ್ವರಿತ ಮನೋರಂಜನೆ ಮಗುವಿನ ಮೆದುಳಿಗೆ ಅಭ್ಯಾಸವಾಗಿ ಬಿಡುತ್ತದೆ. ನಂತರ ಪಾಠ ಓದುವ ತಾಳ್ಮೆ, ಶ್ರದ್ಧೆ ಕ್ರಮೇಣ ಮಾಯವಾಗುತ್ತದೆ. ಪರೀಕ್ಷೆಯ ದಿನ ಹತ್ತಿರ ಬಂದಾಗ ಮಾತ್ರ ಎಚ್ಚರಗೊಳ್ಳುವ ವಿದ್ಯಾರ್ಥಿ ಜೀವನ ಇಂದು ಸಾಮಾನ್ಯ ದೃಶ್ಯವಾಗಿ ಬಿಟ್ಟಿದೆ.

ಏಕಾಗ್ರತೆಯ ಕೊರತೆ ಮೆದುಳಿಗೆ ಅಪಾಯ

ವೈದ್ಯರ ಅಧ್ಯಯನಗಳ ಪ್ರಕಾರ, ದಿನಕ್ಕೆ ಮೂರು ಗಂಟೆಗಿಂತ ಹೆಚ್ಚು ಮೊಬೈಲ್ ಬಳಸುವ ಮಕ್ಕಳಲ್ಲಿ ಏಕಾಗ್ರತೆ ಗಮನಾರ್ಹವಾಗಿ ಕಡಿಮೆ ಆಗುತ್ತದೆ. ಚಿಕ್ಕ ಚಿಕ್ಕ ವೀಡಿಯೊಗಳಿಗೆ ಅಭ್ಯಾಸ ಆದ ಮೆದುಳು ದೀರ್ಘ ಆಲೋಚನೆ ಮಾಡಲು ಸಿದ್ಧವಾಗದು. ತರಗತಿಯಲ್ಲಿ ಕುಳಿತ ಮಗುವಿನ ದೇಹ ಅಲ್ಲಿದ್ದರೂ ಮನಸ್ಸಿನಿಂದ ಗೈರಾಗಿರುತ್ತದೆ. ಇದು ಶಿಕ್ಷಕರಿಗೂ ಸವಾಲಾಗಿ ಪರಿಣಮಿಸಿದೆ.

ನೆನಪಿನ ಶಕ್ತಿ ಕ್ಷೀಣಿಸುತ್ತಿದೆ

ಮೊಬೈಲ್ ಇದ್ದರೆ ಸಾಕು, ಎಲ್ಲವೂ ಸಿಗುತ್ತದೆ ಎಂಬ ಮನೋಭಾವ ಮಗುವಿನ ನೆನಪಿನ ಶಕ್ತಿಯನ್ನು ನಿಧಾನವಾಗಿ ಕಸಿದುಕೊಳ್ಳುತ್ತಿದೆ. ಗುಣಾಕಾರ ಕೋಷ್ಟಕ, ಕವಿತೆ, ಭೂಗೋಳದ ಮಾಹಿತಿ ಇವೆಲ್ಲ ತಲೆಯಲ್ಲಿ ಉಳಿಯದೆ ಮೊಬೈಲ್‌ನಲ್ಲಿ ಹುಡುಕುವ ಅಭ್ಯಾಸ ಬೆಳೆಯುತ್ತಿದೆ. ಮೆದುಳಿಗೆ ಕೆಲಸ ಕೊಡದಿದ್ದರೆ ಅದು ಮೊಂಡಾಗುತ್ತದೆ ಈ ಸತ್ಯ ಇಂದಿನ ಪೀಳಿಗೆ ಮರೆಯುತ್ತಿದೆ.

ಗೌರವ ಭಾವನೆ ಮರೆಯಾಗುತ್ತಿದೆ

ತಂದೆ–ತಾಯಿ ಮಾತನಾಡಿಸಿದರೆ ಒಂದು ನಿಮಿಷ ಎಂದು ಮೊಬೈಲ್‌ನಿಂದ ಕಣ್ಣೆತ್ತದ ಮಗು, ಗುರುಗಳ ಪ್ರಶ್ನೆಗೆ ಉತ್ತರ ಕೊಡದೆ ಕೈಯಲ್ಲಿ ಫೋನ್ ಅಡಗಿಸಿಕೊಳ್ಳುವ ವಿದ್ಯಾರ್ಥಿ ಇವು ಇಂದಿನ ಮನೆ ಮತ್ತು ಶಾಲೆಯ ಚಿತ್ರಗಳು. ಅಂತರ್ಜಾಲದ ವಿಚಾರಗಳು ಮಕ್ಕಳ ಮನಸ್ಸಿನಲ್ಲಿ ಅನಗತ್ಯ ಅಹಂಭಾವ ತುಂಬಿ, ಹಿರಿಯರ ಅನುಭವ ಮತ್ತು ಜ್ಞಾನವನ್ನು ಕಡೆಗಣಿಸುವ ಪ್ರವೃತ್ತಿ ಹೆಚ್ಚಾಗುತ್ತಿದೆ.

ದುಶ್ಚಟಗಳ ಕೂಪಕ್ಕೆ ಬೀಳುತ್ತಿರುವ ಯುವಕರು

ಮೊಬೈಲ್ ಒಂದೇ ಸಮಸ್ಯೆಯಲ್ಲ ಅದು ಬೇರೆ ಹಲವು ಸಮಸ್ಯೆಗಳ ಬಾಗಿಲು ತೆರೆಯುತ್ತದೆ. Online Gambling, ಅಶ್ಲೀಲ ವಿಷಯಗಳು, ತಪ್ಪು ಸ್ನೇಹ ಸಂಪರ್ಕ, ಮಾದಕ ವ್ಯಸನಕ್ಕೆ ಆಕರ್ಷಿಸುವ ಜಾಹೀರಾತುಗಳು ಇವೆಲ್ಲ ಮೊಬೈಲ್ ಮೂಲಕ ಮಕ್ಕಳ ಮನ ತಲುಪುತ್ತಿವೆ. ಭವಿಷ್ಯದಲ್ಲಿ ದೇಶದ ಬೆನ್ನೆಲುಬಾಗಬೇಕಿದ್ದ ಯುವ ಶಕ್ತಿ ಇಂದು ದುಶ್ಚಟಗಳ ಸೆರೆಯಲ್ಲಿ ಸಿಲುಕಿ ನರಳುತ್ತಿದೆ.

ಪರಿಹಾರದ ದಾರಿ ನಾವೆಲ್ಲರೂ ಜವಾಬ್ದಾರರು

ಮೊಬೈಲ್ ನಿಷೇಧ ಪರಿಹಾರವಲ್ಲ ಸರಿಯಾದ ಬಳಕೆ ಕಲಿಸುವುದು ಅಗತ್ಯ.

ತಂದೆ–ತಾಯಿ, ಮನೆಯಲ್ಲಿ "Screen Time" ನಿಯಮ ಮಾಡಿ. ರಾತ್ರಿ ಊಟದ ಸಮಯ ಮೊಬೈಲ್ ಮುಕ್ತ ಕ್ಷಣ ಆಗಲಿ. ಮಕ್ಕಳ ಜೊತೆ ಮಾತನಾಡಿ.

ಶಿಕ್ಷಕರು: ಪಾಠ ಆಸಕ್ತಿದಾಯಕವಾಗಿ ಮಾಡಿ. ಮಕ್ಕಳಿಗೆ ಮೌಲ್ಯ ಶಿಕ್ಷಣ ನೀಡಿ. ಸರ್ಕಾರವೂ ಶಾಲಾ ಮಟ್ಟದಲ್ಲಿ Digital Literacy ಕಡ್ಡಾಯ ಮಾಡಬೇಕು. ಸಮಾಜ ಸಹ ಮಕ್ಕಳಿಗೆ ಆಟದ ಮೈದಾನ, ಗ್ರಂಥಾಲಯ, ಸಾಂಸ್ಕೃತಿಕ ಚಟುವಟಿಕೆ ನೀಡಬೇಕು.

ಕೊನೆ ಮಾತು

ಮೊಬೈಲ್ ಒಂದು ಸಾಧನ ಯಜಮಾನನಲ್ಲ. ಅದನ್ನು ನಿಯಂತ್ರಿಸುವ ಶಕ್ತಿ ನಮ್ಮ ಮಕ್ಕಳಿಗೆ ಬರಬೇಕಾದರೆ ಮೊದಲು ನಾವು ಎಚ್ಚರಗೊಳ್ಳಬೇಕು. ಇಂದಿನ ವಿದ್ಯಾರ್ಥಿ ನಾಳಿನ ನಾಯಕ ಆ ನಾಯಕನನ್ನು ಕಟ್ಟುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಮೊಬೈಲ್ ಮಾಯೆಯಿಂದ ನಮ್ಮ ಮಕ್ಕಳನ್ನು ಬಿಡಿಸಿ, ಬೆಳಕಿನ ದಾರಿ ತೋರಿಸೋಣ.



ಲೇಖಕರು:

ಲೋಕೇಶ. ಹೆಚ್ ಪಿ

ಮುಖ್ಯ ಶಿಕ್ಷಕರು

ಅನಂತ ಗೀತಾ ವಿದ್ಯಾಲಯ

ಮೈಸೂರು

ಜೆಟ್ ಇಂಧನ ದುಬಾರಿ; ಏರ್ ಇಂಡಿಯಾ ಕೆಲ ಅಂತಾರಾಷ್ಟ್ರೀಯ ಫ್ಲೈಟ್‌ಗಳ ಕಡಿತ

ನವದೆಹಲಿ, ಮೇ 13–ವಿಮಾನಗಳಿಗೆ ಬಳಸಲಾಗುವ ಜೆಟ್ ಫ್ಯುಯೆಲ್ ಅಥವಾ ಎಟಿಎಫ್ ಇಂಧನದ ಬೆಲೆ ತೀವ್ರವಾಗಿ ಹೆಚ್ಚಳ ಆಗಿರುವ ಹಿನ್ನೆಲೆಯಲ್ಲಿ ಏರ್ ಇಂಡಿಯಾ ಸಂಸ್ಥೆ ತನ್ನ ಕೆಲ ಫ್ಲೈಟ್‌ಗಳನ್ನು ನಿಲ್ಲಿಸಲು ನಿರ್ಧರಿಸಿದೆ. ಜೂನ್‌ನಿಂದ ಆಗಸ್ಟ್‌ವರೆಗೆ ಕೆಲ ಆಯ್ದ ಅಂತಾರಾಷ್ಟ್ರೀಯ ಮಾರ್ಗಗಳಲ್ಲಿ ತನ್ನ ಫ್ಲೈಟ್ ಸರ್ವಿಸ್ ಅನ್ನು ಕಡಿಮೆಗೊಳಿಸುವುದಾಗಿ ಸಂಸ್ಥೆ ಹೇಳಿದೆ.



ಏರ್ ಇಂಡಿಯಾ ಇಂದು ಬುಧವಾರ ನೀಡಿರುವ ಮಾಹಿತಿ ಪ್ರಕಾರ ಆರೇಳು ಮಾರ್ಗಗಳಲ್ಲಿ ಅದರ ಫ್ಲೈಟ್ ಸಂಚಾರ ಇರುವುದಿಲ್ಲ. ದೆಹಲಿ–ಚಿಕಾಗೊ, ಮುಂಬೈ–ನ್ಯೂಯಾರ್ಕ್, ದೆಹಲಿ–ಶಾಂಘೈ, ಚೆನ್ನೈ–ಸಿಂಗಾಪುರ್ ಹಾಗೂ ಇತರ ಎರಡು ಮಾರ್ಗಗಳಲ್ಲಿ ಏರ್ ಇಂಡಿಯಾ ಫ್ಲೈಟ್‌ಗಳು ತಾತ್ಕಾಲಿಕವಾಗಿ ಸ್ಥಗಿತಗೊಳ್ಳಲಿವೆ.

ಏರ್ ಇಂಡಿಯಾದ ಬಹುತೇಕ ಎಲ್ಲಾ ಫ್ಲೈಟ್‌ಗಳು ಯಥಾಪ್ರಕಾರ ಸಂಚರಿಸಲಿವೆ. ಮೇಲೆ ತಿಳಿಸಿದ ಆರು ಮಾರ್ಗಗಳನ್ನು ಬಿಟ್ಟರೆ ಉಳಿದ ಕಡೆ ಫ್ಲೈಟ್ ಸ್ಥಗಿತ ಇರುವುದಿಲ್ಲ. ಏರ್ ಇಂಡಿಯಾ ಒಂದು ತಿಂಗಳಲ್ಲಿ 1,200ಕ್ಕೂ ಹೆಚ್ಚು ಅಂತಾರಾಷ್ಟ್ರೀಯ ಫ್ಲೈಟ್‌ಗಳನ್ನು ಚಲಾಯಿಸುತ್ತದೆ. ಇದರಲ್ಲಿ ಉತ್ತರ ಅಮೆರಿಕಕ್ಕೆ ವಾರಕ್ಕೊಮ್ಮೆ 33 ಫ್ಲೈಟ್‌ಗಳು, ಯೂರೋಪ್‌ಗೆ 47 ಫ್ಲೈಟ್‌ಗಳು, ಯುಕೆಗೆ 57 ಫ್ಲೈಟ್‌ಗಳು, ಪೂರ್ವ ಏಷ್ಯಾಗೆ 158 ಫ್ಲೈಟ್‌ಗಳು, ಆಸ್ಟ್ರೇಲಿಯಾಗೆ 8 ಫ್ಲೈಟ್‌ಗಳು, ಆಫ್ರಿಕಾಗೆ 7 ಫ್ಲೈಟ್‌ಗಳನ್ನು ಏರ್ ಇಂಡಿಯಾ ಆಪರೇಟ್ ಮಾಡುತ್ತಿದೆ. ಬಹುತೇಕ ಇವೆಲ್ಲವೂ ಹಾಗೇ ಮುಂದುವರಿಯುತ್ತವೆ. ವಿಮಾನ ಸಂಸ್ಥೆಯು ತನ್ನ ಫ್ಲೈಟ್ ಸಂಖ್ಯೆ ಇಳಿಸಲು ಇಂಧನ ದರ ಏರಿಕೆ ಮಾತ್ರವೇ ಅಲ್ಲ, ಕೆಲ ಪ್ರದೇಶಗಳಲ್ಲಿ ವಾಯು ಸಂಚಾರ ನಿರ್ಬಂಧಗಳು ಮುಂದುವರಿದಿರುವುದೂ ಕಾರಣವಾಗಿದೆ. ಕೆಲ ದಿನಗಳ ಹಿಂದಷ್ಟೇ ಭಾರತೀಯ ವಿಮಾನ ಸಂಸ್ಥೆಗಳ ಸಂಘಟನೆಯೊಂದು ಜೆಟ್ ಇಂಧನದ ಬೆಲೆ ವಿಚಾರವಾಗಿ ಸರ್ಕಾರಕ್ಕೆ ಮನವಿ ಮಾಡಿತ್ತು. ಜೆಟ್ ಫ್ಯುಯಲ್‌ಗೆ ಇರುವ ಬೆಲೆ ಸೂತ್ರದಲ್ಲಿ ಬದಲಾವಣೆ ಮಾಡಬೇಕು ಎಂದು ಆಗ್ರಹಿಸಿ ಈ ಸಂಘಟನೆಯು ಸರ್ಕಾರಕ್ಕೆ ತುರ್ತು ಸಂದೇಶ ಕಳುಹಿಸಿತ್ತು. ಏರ್ ಇಂಡಿಯಾ, ಇಂಡಿಗೋ, ಸ್ಪೈಸ್ ಜೆಟ್ ಸಂಸ್ಥೆಗಳನ್ನೊಳಗೊಂಡ ಸಂಘಟನೆ ಇದಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರಿನ ನಾಚನಹಳ್ಳಿ ಬಳಿ ಎಂಡಿಎ ಆಸ್ತಿ ಅತಿಕ್ರಮಣ ತೆರವು

ಅಕ್ರಮ ಕಟ್ಟಡ ನೆಲಸಮಗೊಳಿಸಿ ಒಂದೂವರೆ ಕೋಟಿ ಮೌಲ್ಯದ ಆಸ್ತಿ ಎಂಡಿಎ ಸುಪರ್ದಿಗೆ



ನಾಚನಹಳ್ಳಿ ಸರ್ವೆ ನಂ. 21ರಲ್ಲಿ ಎಂಡಿಎಗೆ ಸೇರಿದ 1 ಎಕರೆ ಯನ್ನು ಖಾಸಗಿ ವ್ಯಕ್ತಿಗಳು ಅತಿ ಕ್ರಮಿಸಿಕೊಂಡು ನಿರ್ಮಿಸಿದ್ದ ಕಟ್ಟಡ ವನ್ನು ಮೈಸೂರು ಅಭಿವೃದ್ಧಿ ಪ್ರಾಧಿ ಕಾರದ ಅಧಿಕಾರಿ ಗಳು ನೆಲಸಮ ಗೊಳಿಸಿ, ತಮ್ಮ ಸುಪರ್ದಿಗೆ ಪಡೆದರು.

ಮೈಸೂರು, ಮೇ 13(ಬಿಎಲ್‌ಯು)– ಮೈಸೂರಿನ ಜೆ.ಪಿ.ನಗರ ಬಳಿಯ ನಾಚನ ಹಳ್ಳಿಯಲ್ಲಿ ಖಾಸಗಿಯವರು ಅತಿಕ್ರಮಿಸಿ ಕೊಂಡು ನಿರ್ಮಿಸಿದ್ದ ಅಕ್ರಮ ಕಟ್ಟಡ ವನ್ನು ನೆಲಸಮಗೊಳಿಸಿದ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ಒಂದೂವರೆ ಕೋಟಿ ಮೌಲ್ಯದ ಒಂದು ಎಕರೆ ಭೂಮಿಯನ್ನು ವಶಕ್ಕೆ ಪಡೆದರು.

ನಾಚನಹಳ್ಳಿ ಗ್ರಾಮದ ಸರ್ವೆ ನಂಬರ್ 21ರಲ್ಲಿ ಎಂಟು ಎಕರೆ ಎರಡು ಗುಂಟೆ ಭೂಮಿಯನ್ನು ಪರಸ್ಪರ ಒಪ್ಪಂದದ ಆಧಾರದ ಮೇಲೆ ಭೂಸ್ವಾಧೀನಪಡಿಸಿ ಕೊಂಡು ಭೂ ಮಾಲೀಕರಿಗೆ ಪರಿಹಾರ ಕೂಡ ನೀಡಲಾಗಿತ್ತು. ಆದರೆ 8 ಎಕರೆ ಎರಡು ಗುಂಟೆ ಜಮೀನಿನಲ್ಲಿ ಒಂದು ಎಕರೆ ಜಾಗವನ್ನು ಖಾಸಗಿ ವ್ಯಕ್ತಿಗಳು ಅತಿಕ್ರಮಿಸಿಕೊಂಡು ಅಕ್ರಮವಾಗಿ ಕಟ್ಟಡ ಕೂಡ ನಿರ್ಮಾಣ ಮಾಡಿದ್ದರು.

ಇದು ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಸ್ತಿಯಾದ ಕಾರಣ ಕಟ್ಟಡ ತೆರವು ಗೊಳಿಸಿ ಜಾಗ ಖಾಲಿ ಮಾಡುವಂತೆ ಹಲವು ಬಾರಿ ಅಧಿಕಾರಿಗಳು ತಾಕೀತು ಮಾಡಿದ್ದರು. ಆದರೆ ಎಂಡಿಎ ಆಸ್ತಿ ಅತಿಕ್ರಮಣ ಮಾಡಿಕೊಂಡಿದ್ದ ಖಾಸಗಿ ವ್ಯಕ್ತಿಗಳು ಜಾಗ ಬಿಟ್ಟು ಕದಲಿಲ್ಲ. ಈ ಹಿನ್ನೆಲೆಯಲ್ಲಿ ಇಂದು ಬೆಳಿಗ್ಗೆ ಜೆಸಿಬಿ ಯಂತ್ರಗಳೊಂದಿಗೆ ಸ್ಥಳಕ್ಕೆ ಬಂದ ಎಂಡಿಎ ಅಧಿಕಾರಿಗಳು ಅಕ್ರಮ ಕಟ್ಟಡ ನೆಲಸಮಗೊಳಿಸಿದರು. ಅಲ್ಲದೆ ಅತಿಕ್ರಮಿಸಿಕೊಂಡಿದ್ದ ಭೂಮಿಯನ್ನು ವಶ ಪಡಿಸಿಕೊಂಡರು. ಸ್ಥಳದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಿದ್ದ ಹಿನ್ನೆಲೆಯಲ್ಲಿ ಯಾವುದೇ ಅಹಿತಕರ ಘಟನೆ ನಡೆಯಲಿಲ್ಲ. ಎಂಡಿಎ ವಿಶೇಷ ಭೂಸ್ವಾಧೀನ ಶಾಖೆಯ ಮಹದೇವಸ್ವಾಮಿ, ಸಚಿನ್, ಕೆಂಪಣ್ಣ ಹಾಗೂ ಕೆ.ಆರ್.ಮಹೇಶ್ ಅವರ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ನಡೆಸಿ ಒಂದು ಎಕರೆ ಭೂಮಿಯನ್ನು ಎಂಡಿಎ ಸುಪರ್ದಿಗೆ ಪಡೆಯಲಾಯಿತು.

ಒಂದು ಎಕರೆ ಭೂಮಿ ಎಂಡಿಎ ಪ್ರಕಾರ ಒಂದೂವರೆ ಕೋಟಿಯಾದರೂ ಮಾರುಕಟ್ಟೆ ಬೆಲೆಯಲ್ಲಿ ಇದು ಸುಮಾರು 4 ಕೋಟಿಗೂ ಹೆಚ್ಚು ಬೆಲೆ ಬಾಳುತ್ತದೆ.

ಸಿಬಿಎಸ್‌ಇ 12ನೇ ತರಗತಿ ಫಲಿತಾಂಶ ಪ್ರಕಟ: ಶೇ.85.20 ವಿದ್ಯಾರ್ಥಿಗಳು ಉತ್ತೀರ್ಣ



ನವದೆಹಲಿ: ಕೇಂದ್ರೀಯ ಮಾಧ್ಯಮಿಕ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ನಡೆಸಿದ 12ನೇ ತರಗತಿ ಬೋರ್ಡ್ ಪರೀಕ್ಷಾ ಫಲಿತಾಂಶಗಳು ಇಂದು ಪ್ರಕಟವಾಗಿವೆ. ಪರೀಕ್ಷೆಯಲ್ಲಿ ಶೇ.85.20ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಕಳೆದ ವರ್ಷಕ್ಕಿಂತ ಶೇ.3ರಷ್ಟು ಕಡಿಮೆ ಫಲಿತಾಂಶ ದಾಖಲಾಗಿದೆ.

ಬಾಲಕಿಯರ ಮೇಲುಗೈ: ಶೇ.88ಕ್ಕೂ ಹೆಚ್ಚು ಬಾಲಕಿಯರು, ಶೇ.82ರಷ್ಟು ಬಾಲಕರು ಉತ್ತೀರ್ಣರಾಗಿದ್ದಾರೆ. ಈ ಮೂಲಕ ಬಾಲಕಿಯರೇ ಪರೀಕ್ಷೆಯಲ್ಲಿ ಮೇಲುಗೈ ಸಾಧಿಸಿದ್ದಾರೆ.

94 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಶೇ.90ಕ್ಕಿಂತ ಹೆಚ್ಚು ಅಂಕ: 94,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶೇ.90ಕ್ಕಿಂತ ಹೆಚ್ಚು ಅಂಕ ಗಳಿಸಿದರೆ, 17,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶೇ.95ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ. 1.63 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಂಪಾರ್ಟ್‌ಮೆಂಟ್ ವಿಭಾಗದಲ್ಲಿ ಸ್ಥಾನ ಪಡೆದಿದ್ದಾರೆ. ಕಳೆದ ವರ್ಷಕ್ಕಿಂತ ಸುಮಾರು 2 ಶೇಕಡಾ ಅಂಕಗಳು ಹೆಚ್ಚಾಗಿವೆ ಎಂದು ಸಿಬಿಎಸ್‌ಇ ಮಾಹಿತಿ ನೀಡಿದೆ.

ತಿರುವನಂತಪುರ ಫಸ್ಟ್, ಬೆಂಗಳೂರಿಗೆ 3ನೇ ಸ್ಥಾನ: ಶೇ 95.62ರಷ್ಟು ಉತ್ತೀರ್ಣತೆಯೊಂದಿಗೆ ತಿರುವನಂತಪುರ ಅತ್ಯುತ್ತಮ ಪ್ರದರ್ಶನ ನೀಡಿದ ಪ್ರದೇಶವಾಗಿ ಹೊರಹೊಮ್ಮಿದೆ. ನಂತರದ ಸ್ಥಾನಗಳನ್ನು ಚೆನ್ನೈ (ಶೇ.93.84) ಮತ್ತು ಬೆಂಗಳೂರು (ಶೇ.93.19) ಪಡೆದಿವೆ. ರಾಷ್ಟ್ರ ರಾಜಧಾನಿಯಲ್ಲಿ ದೆಹಲಿ ಪಶ್ಚಿಮ ಪ್ರದೇಶ ಶೇ.92.34 ಉತ್ತೀರ್ಣ ದರ ದಾಖಲಿಸಿದರೆ, ದೆಹಲಿ ಪೂರ್ವ ಶೇ.91.73 ರಷ್ಟು ಪಾಸ್ ಪರ್ಸೆಂಟೇಜ್ ಹೊಂದಿದೆ.

ಕೇಂದ್ರೀಯ ವಿದ್ಯಾಲಯಗಳು (ಕೆವಿಗಳು) ಮತ್ತು ಜವಾಹರ್ ನವೋದಯ ವಿದ್ಯಾಲಯಗಳು (ಜೆಎನ್‌ವಿಗಳು) ಕ್ರಮವಾಗಿ ಶೇ.98.55 ಮತ್ತು ಶೇ.98.47 ಉತ್ತೀರ್ಣತೆಯೊಂದಿಗೆ ಮುಂಚೂಣಿಯಲ್ಲಿವೆ. ತೃತೀಯಲಿಂಗಿ ವಿದ್ಯಾರ್ಥಿಗಳು ಶೇ 100ರಷ್ಟು ಉತ್ತೀರ್ಣ ದರ ಸಾಧಿಸಿದ್ದಾರೆ. ಅನಾರೋಗ್ಯಕರ ಸ್ಪರ್ಧೆ ತಪ್ಪಿಸಲು ಮೆರಿಟ್ ಪಟ್ಟಿಯನ್ನು ಬಿಡುಗಡೆ ಮಾಡಿಲ್ಲ ಎಂದು ಮಂಡಳಿ ತಿಳಿಸಿದೆ.

ಒಟ್ಟಾರೆ ಶೇ.5.32 ವಿದ್ಯಾರ್ಥಿಗಳು (94,028 ಅಭ್ಯರ್ಥಿಗಳು) ಶೇ.90 ಮತ್ತು ಅದಕ್ಕಿಂತ ಹೆಚ್ಚು ಅಂಕ ಗಳಿಸಿದ್ದಾರೆ. ಶೇ 0.97 (17,113 ಅಭ್ಯರ್ಥಿಗಳು) ಶೇ.95 ಹಾಗೂ ಅದಕ್ಕಿಂತ ಹೆಚ್ಚಿನ ಅಂಕಗಳನ್ನು ಗಳಿಸಿದ್ದಾರೆ ಎಂದು ಸಿಬಿಎಸ್‌ಇ ಮಾಹಿತಿ ನೀಡಿದೆ.

ಆಧುನೀಕರಣದ ಪ್ರಮುಖ ಬದಲಾವಣೆಯಾಗಿ ಬೋರ್ಡ್, 9,866, 622 ಉತ್ತರ ಪುಸ್ತಕಗಳ ಮೌಲ್ಯಮಾಪನಕ್ಕಾಗಿ ಪೂರ್ಣ ಪ್ರಮಾಣದ ಆನ್ ಸ್ಕ್ರೀನ್ ಮಾರ್ಕಿಂಗ್ ಅನ್ನು ಯಶಸ್ವಿಯಾಗಿ ಜಾರಿಗೆ ತಂದಿದೆ. ಅಂಕಗಳನ್ನು ಒಗ್ಗೂಡಿಸುವ ಮತ್ತು ಪೋಸ್ಟ್ ಮಾಡುವಲ್ಲಿನ ಸಾಂಪ್ರದಾಯಿಕ ದೋಷಗಳನ್ನು ನಿವಾರಿಸಲು, ವಿದ್ಯಾರ್ಥಿಗಳಿಗೆ ಹೆಚ್ಚು ನಿಖರ ಮತ್ತು ಪಾರದರ್ಶಕ ಫಲಿತಾಂಶವನ್ನು ಖಚಿತಪಡಿಸಿಕೊಳ್ಳಲು ಈ ಡಿಜಿಟಲ್ ಕ್ರಮವನ್ನು ವಿನ್ಯಾಸಗೊಳಿಸಲಾಗಿದೆ.

ಹೀಗೆ ನಿಮ್ಮ ರಿಸಲ್ಟ್ ನೋಡಿ: ವಿದ್ಯಾರ್ಥಿಗಳು ಫಲಿತಾಂಶಗಳನ್ನು ಅಧಿಕೃತ CBSE ವೆಬ್‌ಸೈಟ್, DigiLocker ಮತ್ತು UMANG ಅಪ್ಲಿಕೇಶನ್ ಮೂಲಕ ಆನ್‌ಲೈನ್‌ನಲ್ಲಿ ಪಡೆಯಬಹುದು. DigiLocker ಮೂಲಕ ಒದಗಿಸಲಾದ ಡಿಜಿಟಲ್ ದಾಖಲೆಗಳು ಉನ್ನತ ಶಿಕ್ಷಣ ಪ್ರವೇಶಕ್ಕೆ ಕಾನೂನುಬದ್ಧವಾಗಿ ಮಾನ್ಯವಾಗಿರುತ್ತವೆ.

ಜುಲೈ 15ರಂದು ಪೂರಕ ಪರೀಕ್ಷೆ: ಇನ್ನು ತಮ್ಮ ಅಂಕಗಳನ್ನು ಸುಧಾರಿಸಿಕೊಳ್ಳಲು ಬಯಸುವ ವಿದ್ಯಾರ್ಥಿಗಳಿಗೆ ಅಥವಾ ಕಂಪಾರ್ಟ್‌ಮೆಂಟ್ ವಿಭಾಗದಲ್ಲಿ ಸ್ಥಾನ ಪಡೆದವರಿಗೆ ಜುಲೈ 15ರಂದು ಪೂರಕ ಪರೀಕ್ಷೆ ನಿಗದಿಪಡಿಸಲಾಗಿದೆ. ಈ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಜೂನ್ 2ರಂದು ಶುರುವಾಗುತ್ತದೆ.

ಕ್ರೈಂ ಬಾಕ್ಸ್

ಮೈಸೂರಲ್ಲಿ ಆಪಲ್ ಕಂಪನಿಯ ಹೆಸರಲ್ಲಿ ಡೂಪ್ಲಿಕೇಟ್ ವಸ್ತು ಮಾರಾಟ

ಕೆ.ಟಿ.ಸ್ಟ್ರೀಟ್‌ನ 9 ಅಂಗಡಿಗಳ ವಿರುದ್ಧ ಎಫ್‌ಐಆರ್ ದಾಖಲು

ಮೈಸೂರು, ಮೇ 13(ಜಿಎ)–ಆಪಲ್ ಕಂಪನಿ ಹೆಸರಿನಲ್ಲಿ ಡೂಪ್ಲಿಕೇಟ್ ವಸ್ತುಗಳನ್ನು ನಕಲು ಮಾಡಿ ಮಾರಾಟ ಮಾಡುತ್ತಿರುವ ಆರೋಪದ ಮೇಲೆ ಕೆ.ಟಿ. ಸ್ಟ್ರೀಟ್‌ನಲ್ಲಿರುವ 9 ಅಂಗಡಿಗಳ ವಿರುದ್ಧ ಆಪಲ್ ಕಂಪನಿ ಲಷ್ಕರ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿದೆ.

ಕೆ.ಟಿ.ಸ್ಟ್ರೀಟ್‌ನಲ್ಲಿರುವ ನರೇಶ್ ಟೆಲಿಕಾಂ, ಶ್ರೀಕೃಷ್ಣ ಟೆಲಿಕಾಂ, ರಾಜ್ ಟೆಲಿಕಾಂ, ಮಹೇಶ್ ಟೆಲಿಕಾಂ, ಮದನ್ ಟೆಲಿಕಾಂ, ನೇಮಿನಾಥ್ ಟೆಲಿಕಾಂ, ಲಲಿತ್ ಟೆಲಿಕಾಂ, ಶ್ರೀಕೃಷ್ಣ ಟೆಲಿಕಾಂ ಮತ್ತು ಹನುಮಾನ್ ಟೆಲಿಕಾಂಗಳ ಮೇಲೆ ಪ್ರಕರಣ ದಾಖಲಾಗಿದೆ.

ಆಪಲ್ ಕಂಪನಿ ಪರವಾಗಿ ಕಾನೂನು ವಿಭಾಗದ ಮೊಹಮ್ಮದ್ ತೌಕೀರ್ ಅವರು ಮೇ 12ರಂದು ಲಷ್ಕರ್ ಪೊಲೀಸ್ ಠಾಣೆಗೆ ಭೇಟಿ ನೀಡಿ, ಆಪಲ್ ಕಂಪನಿಯೂ ಐಫೋನ್, ಈ ಪ್ಯಾಡ್ ಸೇರಿದಂತೆ ವಿವಿಧ ಎಲೆಕ್ಟ್ರಾನಿಕ್ ಉತ್ಪನ್ನಗಳನ್ನು ಬ್ರ್ಯಾಂಡ್ ಹೆಸರಿನಲ್ಲಿ ತಯಾರಿಸುವ ವಿಶ್ವಪ್ರಸಿದ್ಧ ಸಂಸ್ಥೆಯಾಗಿದ್ದು, ತನ್ನ ಉತ್ಪನ್ನಗಳ ಗುಣಮಟ್ಟ ಹಾಗೂ ಬೌದ್ಧಿಕ ಸ್ವತ್ತಿನ ಹಕ್ಕುಗಳ ಮೇಲೆ ಕಟ್ಟುನಿಟ್ಟಿನ ನಿಯಂತ್ರಣವನ್ನು ಹೊಂದಿದೆ ಎಂದು ತಿಳಿಸಿದ್ದಾರೆ.

ಮೈಸೂರು ನಗರದ ಕೆ.ಟಿ.ಸ್ಟ್ರೀಟ್‌ನಲ್ಲಿರುವ 9 ಟೆಲಿಕಾಂ ಅಂಗಡಿಗಳಲ್ಲಿ ಆಪಲ್ ಕಂಪನಿಯ ಹೆಸರಿನಲ್ಲಿ ನಕಲಿ ಮತ್ತು ಕಾನೂನುಬಾಹಿರ ಉತ್ಪನ್ನಗಳನ್ನು ಮಾರಾಟ ಮಾಡುತ್ತಿರುವುದು ಪತ್ತೆಯಾಗಿದೆ. ಇವುಗಳು ಆಪಲ್ ಕಂಪನಿಯ ಲೋಗೋ, ಐಫೋನ್ ಪದಚಿಹ್ನೆ ಹಾಗೂ ಉತ್ಪನ್ನಗಳ ಪ್ಯಾಕೇಜಿಂಗ್ ವಿನ್ಯಾಸವನ್ನು ಅನಧಿಕೃತವಾಗಿ ನಕಲು ಮಾಡಿ ಮಾರಾಟ ನಡೆಸುತ್ತಿರುವುದರಿಂದ, ಇದು ಕಂಪನಿಯ ಬೌದ್ಧಿಕ ಸ್ವತ್ತಿನ ಹಕ್ಕುಗಳ ಉಲ್ಲಂಘನೆ ಮಾಡಿರುವುದು ಕಂಡು ಬಂದಿದೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಈ ವಿಚಾರವನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಮೇ 11ರಂದು ಬೆಳಿಗ್ಗೆ 11 ಗಂಟೆಗೆ 9 ಅಂಗಡಿಗಳಲ್ಲಿ ಪರಿಶೀಲನೆ ನಡೆಸಿದಾಗ, ಅವುಗಳಲ್ಲಿ ನಕಲಿ ಉತ್ಪನ್ನಗಳ ಮಾರಾಟ ಮತ್ತು ವಿತರಣೆ ಸಕ್ರಿಯವಾಗಿ ನಡೆಯುತ್ತಿರುವುದು ದೃಢಪಟ್ಟಿದೆ. ಆದ್ದರಿಂದ, ನಕಲು ಮಾಡಿ ಮಾರಾಟ ಮಾಡುತ್ತಿರುವ ಆರೋಪಗಳ ವಿರುದ್ಧ ಸಮಗ್ರ ತನಿಖೆ ನಡೆಸಿ, ನಕಲಿ ಉತ್ಪನ್ನಗಳನ್ನು ವಶಪಡಿಸಿಕೊಂಡು, ಸಂಬಂಧಪಟ್ಟ ಆರೋಪಿಗಳನ್ನು ಬಂಧಿಸಿ, ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಕಂಪನಿ ಪರವಾಗಿ ದೂರು ಸಲ್ಲಿಸಿದ್ದಾರೆ. ಈ ಸಂಬಂಧ ಲಷ್ಕರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಕೆಎಸ್‌ಐಸಿ ಮೈಸೂರು ಸಿಲ್ಕ್ ಮಾರಾಟ ಮಳಿಗೆಯಲ್ಲಿ ಬೆಲೆಬಾಳುವ ಸೀರೆ ಕಳವು

ಮೈಸೂರು, ಮೇ 13(ಜಿಎ)–ಕೆಎಸ್‌ಐಸಿ ಮೈಸೂರು ಸಿಲ್ಕ್ ಮಾರಾಟ ಮಳಿಗೆಯಲ್ಲಿ 72 ಸಾವಿರ ರೂ. ಮೌಲ್ಯದ ಸೀರೆ ಕಳ್ಳತನವಾಗಿರುವ ಸಂಬಂಧ ದೇವರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜೆಎಲ್‌ಬಿ ರಸ್ತೆಯ ಮಯೂರ ಯಾತ್ರಿ ನಿವಾಸದಲ್ಲಿರುವ ಮಳಿಗೆಯಲ್ಲಿ ಕಳ್ಳತನವಾಗಿದ್ದು, ಮೇ 5ರಂದು ಬೆಳಗ್ಗೆ ಎಂದಿನಂತೆ 10 ಗಂಟೆಗೆ ಮಳಿಗೆ ಆರಂಭವಾಗಿದೆ. ಆಗ ಮಳಿಗೆಯಲ್ಲಿ 36 ಸೀರೆಗಳ ಸ್ಟಾಕ್ ಇದ್ದವು. ನಂತರ ಮಧ್ಯಾಹ್ನ ಫ್ಯಾಕ್ಟರಿಯಿಂದ 72 ಮೈಸೂರು ಸಿಲ್ಕ್ ಸೀರೆಗಳನ್ನು ಮಳಿಗೆಯ ಮೇಲ್ವಿಚಾರಕರು 2.15ಕ್ಕೆ ತಂದು ಸ್ಟಾಕ್ ಎಂಟ್ರಿ ಮಾಡಿ, ಮಾರಾಟಕ್ಕೆ ಇಟ್ಟಿದ್ದಾರೆ. ಒಟ್ಟು 96 ಸೀರೆಗಳನ್ನು ಮಾರಾಟಕ್ಕೆ ಇಟ್ಟಿದ್ದರು. ಅದೇ ದಿನ 51 ಸೀರೆಗಳು ಮಾರಾಟವಾಗಿವೆ.

ಆ ದಿನ ಗ್ರಾಹಕರಿಂದ ಮಳಿಗೆ ರಶ್‌ನಿಂದ ಕೂಡಿತು. ಸಂಜೆ 6.30ರ ಸಂದರ್ಭದಲ್ಲಿ ಸೀರೆಗಳ ಎಣಿಕೆ ಮಾಡುವಾಗ 1 ಸೀರೆ ಕಳ್ಳತನ ಆಗಿರುವುದು ಗಮನಕ್ಕೆ ಬಂದಿದೆ. ಆ ಸೀರೆಯ ಬೆಲೆ ಬರೋಬ್ಬರಿ 72,633 ರೂ. ಗಳಾಗಿದೆ. ನಂತರ ಇಡೀ ಮಳಿಗೆಯಲ್ಲಿ ಹುಡುಕಾಟ ಮಾಡಿದ್ದು, ಕೆಲಸ ಮಾಡುವವರನ್ನು ವಿಚಾರಿಸಲಾಗಿದೆ. ಸೀರೆ ಪತ್ತೆಯಾಗಿರುವುದಿಲ್ಲ. ಮತ್ತೊಂದೆಡೆ ಮಳಿಗೆಯ ಸಿಸಿಟಿವಿಯೂ ಕಾರ್ಯ ನಿರ್ವಹಿಸದೇ ಇರುವುದು ಮತ್ತೊಂದು ತಲೆ ನೋವಾಗಿದೆ. ಈ ಸಂಬಂಧ ದೇವರಾಜ ಪೊಲೀಸ್ ಠಾಣೆಯಲ್ಲಿ ಮಳಿಗೆಯ ಮೇಲ್ವಿಚಾರಕರು ದೂರು ಸಲ್ಲಿಸಿದ್ದಾರೆ.

ಜಾನುವಾರುಗಳನ್ನು ಕಸಾಯಿಖಾನೆಗೆ ಸಾಗಿಸುತ್ತಿದ್ದ ಗೂಡ್ಸ್ ವಾಹನ ಚಾಲಕನ ಬಂಧನ

ಮೈಸೂರು, ಮೇ 13(ಜಿಎ)– ಯಾವುದೇ ಸುರಕ್ಷತೆ ಕ್ರಮ ಅನುಸರಿಸದೇ ಗೂಡ್ಸ್‌ವಾಹನದಲ್ಲಿ ಜಾನುವಾರುಗಳನ್ನು ಖಸಾಯಿಖಾನೆಗೆ ಮಾರಾಟ ಮಾಡಲು ಹೋಗುತ್ತಿದ್ದ ವ್ಯಕ್ತಿಯನ್ನು ಮಂಡಿ ಪೊಲೀಸರು ಬಂಧಿಸಿ, ಎರಡು ಓರಿ ಮತ್ತು ಗೂಡ್ಸ್ ವಾಹನವನ್ನು ವಶಪಡಿಸಿಕೊಂಡಿದ್ದಾರೆ.

ಮೇ12ರಂದು ಮಂಡಿ ಪೊಲೀಸರು ರೈಲ್ವೆ ನಿಲ್ದಾಣ ಬಳಿ ತಪಾಸಣೆ ನಡೆಸುತ್ತಿದ್ದ ಸಂದರ್ಭದಲ್ಲಿ (ಕೆಎ–10–9485) ಟಾಟಾ ಗೂಡ್ಸ್ ವಾಹನದಲ್ಲಿ ಎರಡು ಹೋರಿಗಳನ್ನು ತುಂಬಿಕೊಂಡು ಹೋಗುತ್ತಿದ್ದನ್ನು ಕಂಡ ಪೊಲೀಸರು ಮೈಸೂರು ಮೆಡಿಕಲ್ ಕಾಲೇಜಿನ ಮುಂಭಾಗ ತಡೆದು ತಪಾಸಣೆ ನಡೆಸಿದರು. ಹುಣಸೂರು ಮೂಲದ ಗೂಡ್ಸ್ ವಾಹನದ ಚಾಲಕನನ್ನು ವಿಚಾರಿಸಿದಾಗ ಉದಯಗಿರಿಯ ವ್ಯಕ್ತಿಯೊಬ್ಬರು ನನಗೆ ಫೋನ್ ಮಾಡಿ ಹುಣಸೂರಿನ ವ್ಯಕ್ತಿಯೊಬ್ಬರು ನಿನಗೆ 2 ಜಾನುವಾರುಗಳನ್ನು ಕೊಡುತ್ತಾರೆ. ಅದನ್ನು ನನಗೆ ತಂದು ತಲುಪಿಸು ಅವುಗಳನ್ನು ಖಸಾಯಿಖಾನೆಗೆ ನೀಡಬೇಕು ಎಂದು ತಿಳಿಸಿದ್ದ ಹಿನ್ನೆಲೆಯಲ್ಲಿ ಆತ ಹೇಳಿದ ವ್ಯಕ್ತಿಯಿಂದ ಜಾನುವಾರುಗಳನ್ನು ಪಡೆದುಕೊಂಡು ಉದಯಗಿರಿಗೆ ತೆರಳುತ್ತಿದ್ದೇನೆ ಎಂದು ತಿಳಿಸಿದ್ದಾನೆ.

ನಂತರ ಪೊಲೀಸರು ಜಾನುವಾರುಗಳನ್ನು ಹಿಂಸೆ ಮತ್ತು ಕ್ರೂರವಾದ ರೀತಿಯಲ್ಲಿ ಯಾವುದೇ ಸುರಕ್ಷತೆ ಕ್ರಮ ಅನುಸರಿಸದೇ ವಾಹನದಲ್ಲಿ ತುಂಬಿಕೊಂಡು ಹೋಗಿ ಮಾರಲು ನಿನ್ನ ಬಳಿ ಅಧಿಕೃತ ದಾಖಲೆ ಇದೆಯೇ ಎಂದು ವಿಚಾರಿಸಿದಾಗ ಯಾವುದು ಇಲ್ಲ ಎಂದು ತಿಳಿಸಿದ್ದಾಗ ಪೊಲೀಸರು ಆತನನ್ನು ಬಂಧಿಸಿ ಗೂಡ್ಸ್ ವಾಹನ ಮತ್ತು ಎರಡು ಓರಿಗಳನ್ನು ವಶಪಡಿಸಿಕೊಂಡು ಎಲ್ಲರ ಮೇಲೆ ಪ್ರಕರಣ ದಾಖಲಿಸಿದ್ದಾರೆ.

ಗುಡುಮಾದನಹಳ್ಳಿಯಲ್ಲಿ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣ ಶೀಘ್ರ ಆರಂಭಿಸುವಂತೆ ಆಗ್ರಹಿಸಿ ಪ್ರತಿಭಟನೆ



ಮೈಸೂರಿನ ಗುಡುಮಾದನಹಳ್ಳಿಯಲ್ಲಿ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣ ಕಾಮಗಾರಿಯನ್ನು ಶೀಘ್ರವೇ ಆರಂಭಿಸಬೇಕೆಂದು ಆಗ್ರಹಿಸಿ ಕರ್ನಾಟಕ ಪೌರಕಾರ್ಮಿಕರ ಸಂಘಟನೆಗಳ ಒಕ್ಕೂಟದವರು ಮೈಸೂರು ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಮೈಸೂರು, ಮೇ 13(ಬಿಎಲ್‌ಯು)– ಮೈಸೂರು ತಾಲೂಕು ಗುಡುಮಾದನಹಳ್ಳಿಯಲ್ಲಿ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣ ಕಾಮಗಾರಿಯನ್ನು ಶೀಘ್ರವೇ ಆರಂಭಿಸಬೇಕೆಂದು ಕರ್ನಾಟಕ ಪೌರ ಕಾರ್ಮಿಕರ ಸಂಘಟನೆಗಳ ಒಕ್ಕೂಟದವರು ಮೈಸೂರು ಜಿಲ್ಲಾಧಿಕಾರಿ ಕಚೇರಿ ಮುಂದೆ ಇಂದು ಪ್ರತಿಭಟನೆ ನಡೆಸಿದರು.

ಗುಡುಮಾದನಹಳ್ಳಿ ಗ್ರಾಮದ 20 ಎಕರೆ ಸರ್ಕಾರಿ ಭೂಮಿಯಲ್ಲಿ 100 ಕೋಟಿ ವೆಚ್ಚದ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣ ಮಾಡಲು ಸರ್ಕಾರ ಯೋಜನೆ ರೂಪಿಸಿದ್ದು, ಇದನ್ನು ಒಕ್ಕೂಟ ಸ್ವಾಗತಿಸುತ್ತದೆ ಎಂದು ಪ್ರತಿಭಟನಾಕಾರರು ತಿಳಿಸಿದರು.

ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಸೇರಿದಂತೆ ಇತರೆ ಜಿಲ್ಲೆಯ ಜನರಿಗೆ ಅನುಕೂಲವಾಗುವ ಆಸ್ಪತ್ರೆ ನಿರ್ಮಾಣ ಕಾಮಗಾರಿಯನ್ನು ಶೀಘ್ರ ಆರಂಭಿಸಬೇಕು. ಜೊತೆಗೆ ಇದರ ನಿರ್ಮಾಣಕ್ಕೆ 300 ಕೋಟಿ ನಿಗದಿ ಮಾಡಬೇಕೆಂದು ಸರ್ಕಾರವನ್ನು ಆಗ್ರಹಿಸಿದರು. ಆಸ್ಪತ್ರೆ ನಿರ್ಮಾಣ ಕಾಮಗಾರಿಯನ್ನು ವಿಳಂಬ ಮಾಡದೆ ಶೀಘ್ರ ಆರಂಭಿಸಬೇಕು ಎಂದು ಒತ್ತಾಯಿಸಿದರು.

ನೂರಾರು ಸಂಖ್ಯೆಯಲ್ಲಿದ್ದ ಪ್ರತಿಭಟನೆಯಲ್ಲಿ ಪೌರಕಾರ್ಮಿಕರ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಡಿ.ಆರ್.ರಾಜು, ಪ್ರಧಾನ ಕಾರ್ಯದರ್ಶಿ ದಿನೇಶ್ ಕುಮಾರ್, ಗೌರವ ಸಲಹೆಗಾರ ಶ್ರೀನಿವಾಸ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ರಸ್ತೆಬದಿಯ ಬೊಂಬೆ ವ್ಯಾಪಾರಿ ಮೇಲೆ ಗುಂಪಿನಿಂದ ಹಲ್ಲೆ; ಪ್ರಕರಣ ದಾಖಲು

ಮೈಸೂರು, ಮೇ 13 (ಪಿಎಂ)– ರಸ್ತೆಬದಿಯ ಬೊಂಬೆ ವ್ಯಾಪಾರಿಯೊಬ್ಬರ ಮೇಲೆ ಅಪರಿಚಿತರ ಗುಂಪೊಂದು ಹಲ್ಲೆ ನಡೆಸಿರುವ ಘಟನೆ ಬೆಲವತ್ತ ಸಮೀಪದ ರಿಂಗ್ ರಸ್ತೆಯ ಅಂಡರ್ ಬ್ರಿಡ್ಜ್ ಬಳಿಯಲ್ಲಿ ಮಂಗಳವಾರ ಸಂಜೆ ನಡೆದಿದೆ.

ಮೈಸೂರಿನ ರಾಜೀವ್‌ನಗರದ ನಿವಾಸಿ, ಬೊಂಬೆ ವ್ಯಾಪಾರಿ ಇಮ್ರಾನ್ ಪಾಷಾ ಹಲ್ಲೆಗೆ ಒಳಗಾದವರು. ಬೊಂಬೆ ಬೆಲೆ ವಿಚಾರದಲ್ಲಿ ಜಗಳ ತೆಗೆದ ಗುಂಪು, ಕಲ್ಲಿನಿಂದ ಇಮ್ರಾನ್ ಪಾಷಾ ತಲೆಗೆ ಒಡೆದು ಸ್ಥಳದಿಂದ ಪರಾರಿಯಾಗಿದೆ.

ಎಂದಿನಂತೆ ಇಲ್ಲಿನ ಅಂಡರ್ ಬ್ರಿಡ್ಜ್ ಬಳಿಯಲ್ಲಿ ಬೊಂಬೆಗಳ ಮಾರಾಟ ಮಾಡುತ್ತಿದ್ದ ಇಮ್ರಾನ್ ಪಾಷಾ ಅವರ ಹತ್ತಿರ ನಾಲ್ಕೈದು ಮಂದಿ ಅಪರಿಚಿತರು ಬಂದು ಖರೀದಿಸುವ ಸಲುವಾಗಿ ಬೊಂಬೆಗಳನ್ನು ಕೇಳಿದ್ದಾರೆ. ಈ ವೇಳೆ ಬೊಂಬೆಗಳ ಬೆಲೆ ದುಬಾರಿ ಎಂದು ತಗಾದೆ ತೆಗೆದ ಈ ಗುಂಪು, ಸ್ಥಳೀಯರಾದ ನಮಗೆ ಬೆಲೆ ದುಬಾರಿ ಹೇಳುತ್ತಿದ್ದೀಯಾ ಎಂದು ಗಲಾಟೆ ಆರಂಭಿಸಿದೆ. ಕೊನೆಗೆ ಮಾತಿಗೆ ಮಾತು ಬೆಳೆದಿದ್ದು, ಈ ನಡುವೆ ಅಪರಿಚಿತರ ಗುಂಪು ಕಲ್ಲಿನಿಂದ ಇಮ್ರಾನ್ ಪಾಷಾ ತಲೆಗೆ ಹೊಡೆದು ಸ್ಥಳದಿಂದ ಪರಾರಿಯಾಗಿದೆ. ಇಮ್ರಾನ್ ಪಾಷಾ ನೀಡಿದ ದೂರಿನನ್ವಯ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ ಎಂದು ಮೇಟಗಳ್ಳಿ ಠಾಣೆ ಪೊಲೀಸರು ತಿಳಿಸಿದರು.

ಮೈಸೂರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ



ಮೈಸೂರು,ಮೇ 13(ಪಿಎಂ)–ಸಿಎಂ ಸಿದ್ದರಾಮಯ್ಯ ಬುಧವಾರ ಸಂಜೆ ಮೈಸೂರಿಗೆ ಆಗಮಿಸಿದರು. ಎರಡು ದಿನಗಳು ಮೈಸೂರು ಪ್ರವಾಸ ಕೈಗೊಂಡಿರುವ ಅವರು ಬುಧವಾರ ಸಂಜೆ ವಿಶೇಷ ವಿಮಾನದ ಮೂಲಕ ಬೆಂಗಳೂರಿನಿಂದ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸಿ, ಬಳಿಕ ಸ್ಥಳೀಯ ಖಾಸಗಿ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು. ಮೈಸೂರಿನಲ್ಲೇ ವಾಸ್ತವ್ಯ ಹೂಡಿರುವ ಅವರು, ಮೇ 14ರಂದು ಸ್ಥಳೀಯ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ನಂತರ ಬೆಳಗ್ಗೆ 11.30ಕ್ಕೆ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ. ಆ ಬಳಿಕ ಬೆಳಗ್ಗೆ 11.55ಕ್ಕೆ ಬೆಂಗಳೂರಿಗೆ ವಿಶೇಷ ವಿಮಾನದಲ್ಲಿ ತೆರಳಲಿದ್ದಾರೆ.

ಪಿಹೆಚ್.ಡಿ ಪದವಿ



ಮೈಸೂರು,ಮೇ 13– ಡಾ.ಉಮಾಮಹೇಶ್ವರಿ.ಎಸ್. ಅವರ ಮಾರ್ಗದರ್ಶನದಲ್ಲಿ ವಿನಯ್.ಎಂ ಅವರು ವಾಣಿಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವ ವಿದ್ಯಾನಿಲಯ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

5ನೇ ಬಾರಿಗೆ ಪುದುಚೇರಿ ಸಿಎಂ ಆಗಿ ಎನ್.ರಂಗಸಾಮಿ ಪ್ರಮಾಣ ವಚನ




ಪಾಂಡಿಚೇರಿ: ಹಿರಿಯ ರಾಜಕಾರಣಿ ಹಾಗೂ ಎಐಎನ್‌ಆರ್‌ಸಿ ಸಂಸ್ಥಾಪಕ ಎನ್.ರಂಗಸಾಮಿ ಬುಧವಾರ ಐದನೇ ಬಾರಿಗೆ ಪುದುಚೇರಿಯ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಪ್ರಾದೇಶಿಕ ಪಕ್ಷದ ಮಲ್ಲಾಡಿ ಕೃಷ್ಣ ರಾವ್ ಮತ್ತು ಬಿಜೆಪಿಯ ಎ ನಮಸ್ಸಿವಾಯಂ ಅವರು ಎನ್‌ಡಿಎ ಸರ್ಕಾರದಲ್ಲಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಲೆಫ್ಟಿನೆಂಟ್ ಗವರ್ನರ್ ಕೆ.ಕೈಲಾಶನಾಥನ್ ಅವರು ಸಿಎಂ ಮತ್ತು ಅವರ ಸಂಪುಟ ಸಹೋದ್ಯೋಗಿಗಳಿಗೆ ಅಧಿಕಾರ ಮತ್ತು ಗೌಪ್ಯತೆಯ ಪ್ರಮಾಣ ವಚನ ಬೋಧಿಸಿದರು. ರಂಗಸಾಮಿ ದೇವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ರಾವ್ ತೆಲುಗಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಅವರು ಪುದುಚೇರಿಯ ಒಂದು ಪ್ರದೇಶವಾದ ಆಂಧ್ರಪ್ರದೇಶದ ಯಾನಂ ಅನ್ನು ಪ್ರತಿನಿಧಿಸುತ್ತಾರೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಮತ್ತು ಹಿರಿಯ ನಾಯಕ ಬಿಎಲ್ ಸಂತೋಷ್ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಏ.9ರಂದು ಕೇಂದ್ರಾಡಳಿತ ಪ್ರದೇಶದಲ್ಲಿ ನಡೆದ ಚುನಾವಣೆಯಲ್ಲಿ ಎನ್‌ಡಿಎ ಗೆದ್ದು ಅಧಿಕಾರವನ್ನು ಉಳಿಸಿಕೊಂಡಿತು. ಅಧ್ಯಕ್ಷೆ ದ್ರೌಪದಿ ಮುರ್ಮು ಅವರು ರಂಗಸಾಮಿಯನ್ನು ಸಿಎಂ ಆಗಿ ನೇಮಿಸಿದ್ದರು.

ಭವಾನಿಪುರ ಉಳಿಸಿಕೊಂಡು ನಂದಿಗ್ರಾಮ ಕ್ಷೇತ್ರಕ್ಕೆ ರಾಜೀನಾಮೆ ಘೋಷಿಸಿದ ಸುವೇಂದು ಅಧಿಕಾರಿ



ಕೋಲ್ಕತ್ತಾ: ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಭವಾನಿಪುರ ವಿಧಾನಸಭಾ ಸ್ಥಾನವನ್ನು ಉಳಿಸಿಕೊಂಡು ನಂದಿಗ್ರಾಮ ಕ್ಷೇತ್ರಕ್ಕೆ ರಾಜೀನಾಮೆ ನೀಡುವುದಾಗಿ ಘೋಷಿಸಿದ್ದಾರೆ.

ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಭವಾನಿಪುರ ಮತ್ತು ನಂದಿಗ್ರಾಮ, ಎರಡೂ ಕ್ಷೇತ್ರಗಳಿಂದ ಸ್ಪರ್ಧಿಸಿ ಗೆದ್ದಿದ್ದರು. ಟಿಎಂಸಿ ಭದ್ರಕೋಟೆಯಾದ ಭವಾನಿಪುರದಲ್ಲಿ ಮಮತಾ ಬ್ಯಾನರ್ಜಿ ಅವರು 15,105 ಮತಗಳ ಅಂತರದಿಂದ ಸೋತಿದ್ದರು. ನಂದಿಗ್ರಾಮದಲ್ಲಿ ಟಿಎಂಸಿಯ ಪವಿತ್ರ ಕರ್ ವಿರುದ್ಧ ಗೆದ್ದು ತಮ್ಮ ಕ್ಷೇತ್ರವನ್ನು ಅಧಿಕಾರಿ ರಕ್ಷಿಸಿಕೊಂಡಿದ್ದರು.

ಉಪಚುನಾವಣೆಯಲ್ಲಿ ನಂದಿಗ್ರಾಮದಿಂದ ಬೇರೆಯವರು ಶಾಸಕರಾಗಿ ಆಯ್ಕೆಯಾಗುತ್ತಾರೆ. ಆದರೆ ಅಲ್ಲಿನ ಜನರ ಜೊತೆ ನಾನು ಇರುತ್ತೇನೆ. ನಂದಿಗ್ರಾಮದ ಜನರಿಗೆ ನಾನು ನೀಡಿದ ಎಲ್ಲಾ ಅಭಿವೃದ್ಧಿಯ ಭರವಸೆಗಳನ್ನು ಈಡೇರಿಸುತ್ತೇನೆ ಎಂದು ಹೇಳಿದ್ದಾರೆ. ಇಂದು ಮೊದಲ ದಿನ ಮುಖ್ಯಮಂತ್ರಿಯಾಗಿ ವಿಧಾನಸಭೆಗೆ ಬಂದ ಅಧಿಕಾರಿ, ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿದರು. ಬಳಿಕ ಸದನದ ಪ್ರವೇಶದ್ವಾರದಲ್ಲಿ ಮಂಡಿಯೂರಿ ನಮಸ್ಕರಿಸಿ, ಒಳಗೆ ಪ್ರವೇಶಿಸಿದರು. ಮೇ 9ರಂದು ಕೋಲ್ಕತ್ತಾದ ಬ್ರಿಗೇಡ್ ಪರೇಡ್ ಮೈದಾನದಲ್ಲಿ ನಡೆದ ಅದ್ಧೂರಿ ಕಾರ್ಯಕ್ರಮದಲ್ಲಿ ಸುವೇಂದು ಅಧಿಕಾರಿ ಪ್ರಮಾಣ ಸ್ವೀಕರಿಸಿದ್ದರು. ಪ್ರಧಾನಿ ಮೋದಿ, ಕೇಂದ್ರ ಗೃಹಸಚಿವ ಅಮಿತ್ ಹಾಗೂ ಎನ್‌ಡಿಎ ಆಡಳಿತದ 20 ರಾಜ್ಯಗಳ ಮುಖ್ಯಮಂತ್ರಿಗಳು ಸಾಕ್ಷಿಯಾಗಿದ್ದರು. ಬಂಗಾಳ ಚುನಾವಣೆಯಲ್ಲಿ ಬಿಜೆಪಿ 207 ಸ್ಥಾನಗಳನ್ನ ಗಳಿಸಿ ಅಧಿಕಾರದ ಗದ್ದುಗೆ ಹಿಡಿದಿದೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಮೇ 13– ಮಯೂರ ಹಾಗೂ ಆರ್ಕೋಲಜಿ ವಿದ್ಯುತ್ ಮಾರ್ಗದಲ್ಲಿ ಭೂಗತ ಕೇಬಲ್ ಕೆಲಸದ ನಿಮಿತ್ತ ಮೇ 14 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಕರ್ನಾಟಕ ಬ್ಯಾಂಕ್, ಸಂಕ್ರಾಂತಿ ವೃತ್ತ ಸುತ್ತಮುತ್ತ, ಗೋಲ್ಡನ್ ಬೇಕರಿ ವೃತ್ತ, ನಿಸರ್ಗ ಲೇಔಟ್, ಚೆನ್ನಮ್ಮ ವೃತ್ತ, ಮಿಲಿಟರಿ ಕ್ವಾರ್ಟ್ರಸ್, ಬಸವಮಾರ್ಗ, ಕೆ.ಐ.ಎ.ಡಿ.ಬಿ ಲೇಔಟ್, ಹೆಬ್ಬಾಳ್ 2ನೇ ಹಂತ, ಮಯೂರ ವೃತ್ತ, ಕಾವೇರಿ ವೃತ್ತ ಎಂ.ಜಿ.ಕೊಪ್ಪಲು, ಅಕ್ಷರ ಪಾಠಶಾಲಾ, ಯಲ್ಲಮ್ಮ ದೇವಸ್ಥಾನ, ಗಣಪತಿ ದೇವಸ್ಥಾನ, ಧ್ಯಾನ ಶಾಲೆ ಸುತ್ತಮುತ್ತ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ನೀಟ್ ಅವ್ಯವಸ್ಥೆ ಖಂಡಿಸಿ ಸಂಸದ ಯದುವೀರ್ ಕಚೇರಿಗೆ ಮುತ್ತಿಗೆ ಹಾಕಲು ಯೂತ್ ಕಾಂಗ್ರೆಸ್ ಕಾರ್ಯಕರ್ತರ ಯತ್ನ

ಮೈಸೂರು, ಮೇ 13(ಬಿಎಲ್‌ಯು)– ನೀಟ್ ಪರೀಕ್ಷೆಯ ಅವ್ಯವಸ್ಥೆ ಖಂಡಿಸಿ ಯೂತ್ ಕಾಂಗ್ರೆಸ್ ಕಾರ್ಯಕರ್ತರು ಮೈಸೂರಿನ ಸಂಸದ ಯದುವೀರ್ ಕಚೇರಿಗೆ ಬುಧವಾರ ಮುತ್ತಿಗೆ ಹಾಕಲು ಯತ್ನಿಸಿದರು.

ಮೈಸೂರಿನ ಕಾಡಾ ಕಚೇರಿ ಸಂಕೀರ್ಣದಲ್ಲಿರುವ ಯದುವೀರ್ ಅವರ ಆಫೀಸ್ ಬಳಿ ಕಾರ್ಯಕರ್ತರು ಪ್ರತಿಭಟನೆ ನಡೆಸಿ, ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿದರು.

ಪ್ರಶ್ನೆ ಪತ್ರಿಕೆ ಸೋರಿಕೆ ಆಗಿರುವುದು ಪ್ರಧಾನಿ ನರೇಂದ್ರ ಮೋದಿ ಸರ್ಕಾರದ ವೈಫಲ್ಯವಾಗಿದೆ ಎಂದು ಆರೋಪಿಸಿದರು.



ನೀಟ್ ಪರೀಕ್ಷೆಯ ಅವ್ಯವಸ್ಥೆ ವಿರೋಧಿಸಿ ಯೂತ್ ಕಾಂಗ್ರೆಸ್ ಕಾರ್ಯಕರ್ತರು ಮೈಸೂರಿನ ಕಾಡಾ ಕಚೇರಿ ಸಂಕೀರ್ಣದಲ್ಲಿರುವ ಸಂಸದ ಯದುವೀರ್ ಆಫೀಸ್‌ಗೆ ಮುತ್ತಿಗೆ ಹಾಕಲು ಯತ್ನಿಸಿದಾಗ ಪೊಲೀಸರು ಪ್ರತಿಭಟನಾಕಾರರನ್ನು ಬಂಧಿಸಿದರು.

ಯದುವೀರ್ ಒಡೆಯರ್‌ರ ಕಚೇರಿಯತ್ತ ಪ್ರತಿಭಟನಾಕಾರರು ಹೋಗದಂತೆ ಬ್ಯಾರಿಕೇಡ್ ಅಳವಡಿಸಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಆದರೂ ಪ್ರತಿಭಟನಾಕಾರರು ಪೊಲೀಸರ ಸರ್ಪಗಾವಲು ಭೇದಿಸಿ ಯದುವೀರ್ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದಾಗ ಪೊಲೀಸರು ಪ್ರತಿಭಟನಾಕಾರರನ್ನು ಬಂಧಿಸಿದರು. ಈ ವೇಳೆ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

ಈ ವೇಳೆ ಯೂತ್ ಕಾಂಗ್ರೆಸ್ ಅಧ್ಯಕ್ಷ ಹೊಯ್ಸಳ, ಬಸವಣ್ಣ, ನಾಗೇಶ್, ಕರಿಯಪ್ಪ, ದೀಪಕ್ ಹಾಗೂ ಇತರರು ಪ್ರತಿ ಭಟನೆಯಲ್ಲಿ ಪಾಲ್ಗೊಂಡಿದ್ದರು.

ಎನ್‌ಟಿಎ ರದ್ದಿಗೆ ಆಗ್ರಹಿಸಿ ಎಐಡಿಎಸ್‌ಒ ಪ್ರತಿಭಟನೆ

ಮೈಸೂರು, ಮೇ13(ಬಿಎಲ್‌ಯು)– ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಗೆ ಕಾರಣರಾದವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕೆಂದು ಎಐಡಿಎಸ್‌ಒ ಕಾರ್ಯಕರ್ತರು ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು ಕೋಚಿಂಗ್ ಮಾಫಿಯಾ ಕೈಗೊಂಬೆಯಾಗಿ ಕೆಲಸ ಮಾಡುತ್ತಿದ್ದು, ಇದನ್ನು ಕೂಡಲೇ ರದ್ದು ಮಾಡಬೇಕು. ಕೋಚಿಂಗ್ ಮಾಫಿಯಾ ಪತ್ತೆ ಮಾಡಲು ನ್ಯಾಯಾಂಗ ತನಿಖೆ ನಡೆಸಬೇಕು. ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು. ಈವೇಳೆ ಎಐಡಿಎಸ್‌ಒ ಜಿಲ್ಲಾ ಕಾರ್ಯದರ್ಶಿ ನಿತಿನ್ ಸೇರಿದಂತೆ ಇತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮಿಮ್ಸ್‌ನಲ್ಲಿ ಶಿಶು ಸಂಜೀವಿನಿ ಘಟಕ

ಸಾರ್ವಜನಿಕರ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಸರ್ಕಾರದಿಂದ ಹಲವು ಕ್ರಮ

ಮಂಡ್ಯ, ಮೇ13– ಕಳೆದ ಮೂರು ವರ್ಷಗಳಿಂದ ನಮ್ಮ ಸರ್ಕಾರ ಜನರಿಗೆ ಉತ್ತಮ ಆರೋಗ್ಯ ಸೇವೆ ಕಲ್ಪಿಸಿಕೊಂಡು ಬರುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಮಿಮ್ಸ್) ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಬುಧವಾರ ಜಿಲ್ಲಾ ಆಸ್ಪತ್ರೆಯಲ್ಲಿ ನೂತನವಾಗಿ ಸ್ಥಾಪಿಸಿರುವ ಮಿಡ್ ವೈಫರಿ ಆಧಾರಿತ ಆರೈಕೆ ಘಟಕ ಮತ್ತು ತಾಯಿ ಹಾಲು ಸಂಗ್ರಹಣಾ ಕೇಂದ್ರ (ಶಿಶು ಸಂಜೀವಿನಿ) ಘಟಕಗಳನ್ನು ಉದ್ಘಾಟಿಸಿ ಮಾತನಾಡಿದರು.



ಮಿಡ್ ವೈಫರಿ ಆಧಾರಿತ ಆರೈಕೆ ಮತ್ತು ತಾಯಿ ಹಾಲು ಸಂಗ್ರಹಣಾ ಕೇಂದ್ರ ಘಟಕಗಳನ್ನು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಉದ್ಘಾಟಿಸಿದರು.

ಕಳೆದ ಮೂರು ವರ್ಷಗಳಿಂದ ನಮ್ಮ ಸರ್ಕಾರ ಜನರಿಗೆ ಉತ್ತಮ ಆರೋಗ್ಯ ಸೇವೆಯನ್ನು ಕಲ್ಪಿಸಿಕೊಂಡು ಬರುತ್ತಿದೆ. ತಾಯಿ ಮಗುವಿನ ಆರೋಗ್ಯ ಕಾಪಾಡುವುದು ಮುಖ್ಯವಾಗಿದೆ. ಆರೋಗ್ಯ ಕ್ಷೇತ್ರದಲ್ಲಿ ಶಿಶು ಸಂಜೀವಿನಿ ಯೋಜನೆ ಮಹತ್ವದ್ದಾಗಿದೆ ಎಂದು ಹೇಳಿದರು.

ಶಿಶು ಸಂಜೀವಿನಿ ಯೋಜನೆಯಿಂದ ಮುಂಚಿತವಾಗಿ ಹೆರಿಗೆ ಆಗುವ ಮಕ್ಕಳಿಗೆ ಮತ್ತು ಪೌಷ್ಟಿಕಾಂಶ ಕೊರತೆಯಿರುವ ಮಕ್ಕಳಿಗೆ ಉಪಯುಕ್ತವಾಗುತ್ತದೆ. ತಾಯಿಯಂದಿರಿಗೆ ಹಾಲು ಸಂಗ್ರಹಿಸಿ ಇಟ್ಟುಕೊಳ್ಳುವುದರಿಂದ ಅನಾನುಕೂಲ ಉಂಟಾಗುತ್ತದೆ ಹಾಗೂ ಎದೆ ಹಾಲನ್ನು ಕೊಡುವುದರಿಂದ ಉತ್ತಮ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದು ತಿಳಿ ಹೇಳಬೇಕು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆರೋಗ್ಯ ಇಲಾಖೆ ಮುತುವರ್ಜಿ ವಹಿಸಿ ಜಿಲ್ಲೆಯಲ್ಲಿ ತಾಯಿ ಎದೆ ಹಾಲು ಸಂಗ್ರಹಕ ಘಟಕವನ್ನು ಪ್ರಾರಂಭಿಸಲಾಗಿದೆ ಇದು ನಿಜಕ್ಕೂ ಶ್ಲಾಘನೀಯ ಎಂದು ಹೇಳಿದರು.

ಮಕ್ಕಳ ಆರೋಗ್ಯ ಕಾಪಾಡುವುದು ಮತ್ತು ಮಕ್ಕಳ ಮರಣ ಸಂಖ್ಯೆಯನ್ನು ತಪ್ಪಿಸುವ ಸದುದ್ದೇಶದಿಂದ ಶಿಶು ಸಂಜೀವಿನಿ ಯೋಜನೆಯನ್ನು ಜಾರಿಗೆ ತರಲಾಗಿದೆ. ಇದರ ಉಪಯೋಗವನ್ನು ಸಾರ್ವಜನಿಕರು ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಜಿ.ಪಂ. ಸಿಇಓ ಕೆ.ಆರ್.ನಂದಿನಿ ಮಾತನಾಡಿ, ತಾಯಿ ಮಗುವಿನ ಆರೋಗ್ಯ ಕಾಪಾಡುವುದು ಅತಿ ಮುಖ್ಯ ಎಂದರು.

ಶಾಸಕ ಪಿ.ರವಿ ಕುಮಾರ್, ಜಿಲ್ಲಾಧಿಕಾರಿ ಡಾ.ಕುಮಾರ, ಮಿಮ್ಸ್ ನಿರ್ದೇಶಕ ನರಸಿಂಹಸ್ವಾಮಿ, ಮುಡಾ ಅಧ್ಯಕ್ಷ ಬಿ.ಪಿ. ಪ್ರಕಾಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಗಾಂಜಾ ಮಾರಾಟ ಯತ್ನ: 6 ಮಂದಿ ಸೆರೆ

20 ಕೆಜಿ ಗಾಂಜಾ ವಶ



ಆರೋಪಿಗಳನ್ನು ಬಂಧಿಸಿ ಗಾಂಜಾವನ್ನು ವಶಪಡಿಸಿಕೊಂಡಿರುವ ಪೊಲೀಸರು.

ಪಾಂಡವಪುರ, ಮೇ 13– ಲಕ್ಷಾಂತರ ರೂ. ಮೌಲ್ಯದ ಗಾಂಜಾವನ್ನು ಅಕ್ರಮವಾಗಿ ಮಾರಾಟ ಮಾಡಲು ಯತ್ನಿಸುತ್ತಿದ್ದ ಆರು ಆರೋಪಿಗಳನ್ನು ಪಾಂಡವಪುರ ಪೊಲೀಸರು ಬಂಧಿಸಿದ್ದು, ಬಂಧಿತರಿಂದ 20 ಕೆಜಿ 640 ತೂಕದ ಗಾಂಜಾ ಹಾಗೂ ಕೃತ್ಯಕ್ಕೆ ಬಳಸಲಾಗಿದ್ದ ಕಾರನ್ನು ವಶಪಡಿಸಿಕೊಂಡಿದ್ದಾರೆ.

ಪಟ್ಟಣದ ಶಾಂತಿನಗರ ನಿವಾಸಿ ಹಾಲಿ ವಾಸ ಹೆಬ್ಬಾಳ ಎಸ್.ಶ್ರೇಯಸ್ ಗೌಡ (20), ವಾರಿಗಂಡ ಬೀದಿ ನಿವಾಸಿ ಎಸ್.ಶಶಿ ಕುಮಾರ್ (34), ಪೆನ್ಷನ್ ಲೈನ್ ನಿವಾಸಿ ವಿನೋದ ಅಲಿಯಾಸ್ ಮಾದು(41), ಬಂಧಿತ ಆರೋಪಿಗಳು. ಬೀರಶೆಟ್ಟಹಳ್ಳಿ ನಿವಾಸಿ ಕಾರು ಚಾಲಕ ಮಂಜುನಾಥ್, ಶಾಂತಿನಗರ ನಿವಾಸಿಗಳಾದ ಅರುಣ್ ಕುಮಾರ್ ಗಾಂಜಾ ಅರುಣ (41) ಹಾಗೂ ವಿಜಯ ಕುಮಾರ್ ಅಲಿಯಾಸ್ ವಿಜಿ ತಲೆಮರೆಸಿಕೊಂಡಿದ್ದಾರೆ.

ಬಂಧಿತ ಆರೋಪಿಗಳು ಮೇ 8 ರಂದು ತಾಲೂಕಿನ ಕಾಂಚನಹಳ್ಳಿ ಸಮೀಪ ತಮಗೆ ಟಾಟಾ ಇಂಡಿಗೋ ಕಾರಿನಲ್ಲಿ ಗಾಂಜಾವನ್ನು ಅಕ್ರಮವಾಗಿ ಮಾರಾಟ ಮಾಡಲು ಯತ್ನಿಸುತ್ತಿದ್ದಾರೆ ಎಂಬ ನಿಖರ ಮಾಹಿತಿ ಮೇರೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ವಿ.ಜೆ.ಶೋಭಾ ರಾಣಿ ಅವರ ಆದೇಶದ ಮೇರೆಗೆ ಅಪರ ಪೊಲೀಸ್ ವರಿಷ್ಠಾಧಿಕಾರಿಗಳಾದ ಸಿ.ಇ.ತಿಮ್ಮಯ್ಯ, ಎಸ್.ಇ.ಗಂಗಾಧರಸ್ವಾಮಿ ಹಾಗೂ ಶ್ರೀರಂಗಪಟ್ಟಣ ಉಪ ವಿಭಾಗದ ಉಪಾಧೀಕ್ಷಕ ಯು.ಡಿ.ಕೃಷ್ಣಕುಮಾರ್ ಅವರ ಮಾರ್ಗದರ್ಶನದಲ್ಲಿ ಪಾಂಡವಪುರ ಪೊಲೀಸ್ ಇನ್ಸ್‌ಪೆಕ್ಟರ್ ಎಚ್.ಪಿ.ಶರತ್ ಕುಮಾರ್ ನೇತೃತ್ವದಲ್ಲಿ ಮುಖ್ಯ ಪೇದೆಗಳಾದ ವೆಂಕಟೇಶ್, ಮಹಮ್ಮದ್ ಫಾರೂಕ್, ಕೃಷ್ಣೇಗೌಡ, ಸಿಪಿಸಿಗಳಾದ ತೋಸಿಫ್, ಅನಿಲ್ ಕುಮಾರ್, ವರದರಾಜು, ಶರಣ್ ಕುಮಾರ್ ಅವರನ್ನೊಳಗೊಂಡ ತಂಡ ಪತ್ತೆಂಕಿ ಹಾಗೂ ಪಂಚರ ಸಮಕ್ಷಮ ದಾಳಿ ನಡೆಸಿ 20 ಲಕ್ಷ ಮೌಲ್ಯದ ಗಾಂಜಾ ಹಾಗೂ ಕೃತ್ಯಕ್ಕೆ ಬಳಸಲಾಗಿದ್ದ ಕಾರನ್ನು ವಶಪಡಿಸಿಕೊಂಡಿದ್ದಾರೆ.

ಆರೋಪಿಗಳ ವಿಚಾರಣೆ ವೇಳೆ ವಶಪಡಿಸಿಕೊಳ್ಳಲಾಗಿರುವ ಗಾಂಜಾವನ್ನು ಒರಿಸ್ಸಾ ರಾಜ್ಯದ ಕೆಸ್ಸಿಂಗಾ ಎಂಬಲ್ಲಿ ಖರೀದಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಇಲ್ಲಿಗೆ ತರಲಾಗಿತ್ತು ಬಂದಿರುವ ಒಪ್ಪಿಕೊಂಡಿದ್ದಾರೆ. ಪಾಂಡವಪುರ ಪೊಲೀಸರನ್ನು ಪೊಲೀಸ್ ಎಸ್ಪಿ ಶೋಭರಾಣಿ ಅಭಿನಂದಿಸಿದ್ದಾರೆ.

ವೀರ ಮಕ್ಕಳ ಕುಣಿತದಲ್ಲಿ ಪ್ರಥಮ ಸ್ಥಾನ



ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲೂಕಿನ ರಾಯಸಮುದ್ರ ಗ್ರಾಮದಲ್ಲಿ ಆಯೋಜಿಸಿದ್ದ ವೀರ ಮಕ್ಕಳ ಕುಣಿತ ಸ್ಪರ್ಧೆಯಲ್ಲಿ ಮೈಸೂರು ತಾಲೂಕು ಕೇರ್ಗಳ್ಳಿಯ ವೀರ ಮಕ್ಕಳ ಕುಣಿತ ತಂಡ ಅತ್ಯುತ್ತಮ ಪ್ರದರ್ಶನ ನೀಡಿ ಪ್ರಥಮ ಸ್ಥಾನ ಪಡೆದಿದ್ದು, ಈ ವೇಳೆ ತಂಡವನ್ನು ಅಭಿನಂದಿಸಲಾಯಿತು.

ಸಾಲಬಾಧೆ: ರೈತ ಮಹಿಳೆ ಆತ್ಮಹತ್ಯೆ

ಕಿಕ್ಕೇರಿ: ಹೋಬಳಿಯ ಸಾಸಲು ಗ್ರಾಮದಲ್ಲಿ ಸಾಲಭಾದೆಗೆ ಹೆದರಿ ರೈತ ಮಹಿಳೆಯೊಬ್ಬರು ನೇಣಿಗೆ ಶರಣಾಗಿರುವ ಘಟನೆ ಬುಧವಾರ ಸಂಭವಿಸಿದೆ.



ಸೋಮಶೇಖರ್ ಅವರ ಪತ್ನಿ ಅಂಬಿಕಾ(41) ಎಂಬುವರೇ ಸಾಲಕ್ಕೆ ಹೆದರಿ ಆತ್ಮಹತ್ಯೆ ಮಾಡಿಕೊಂಡಿರುವವರು.

ತನ್ನ ಜಮೀನಿನಲ್ಲಿ ಶುಂಠಿ ಹಾಗೂ ತರಕಾರಿ ಬೇಸಾಯ ಮಾಡಿದ್ದರು. ಬೇಸಾಯಕ್ಕಾಗಿ ಖಾಸಗಿಯವರಿಂದ 5ಲಕ್ಷ ಹಾಗೂ ಲಕ್ಷಾಂತರ ಒಡವೆ ಸಾಲ ಮಾಡಿಕೊಂಡಿದ್ದರು. ಇದಲ್ಲದೆ ಇವರ ಯಜಮಾನ ಸೋಮಶೇಖರ್ ಅವರ ಹೆಸರಿನಲ್ಲಿ ಖಾಸಗಿ ಬ್ಯಾಂಕ್‌ನಲ್ಲಿ 15 ಲಕ್ಷ ರೂ.ಗಳಷ್ಟು ಸಾಲ ಪಡೆದುಕೊಂಡಿದ್ದರು. ಬೇಸಾಯದಲ್ಲಿ ನಿರೀಕ್ಷಿತ ಫಸಲು, ಲಾಭಾಂಶ ಬಾರದ ಕಾರಣ ವಿಚಲಿತರಾಗಿದ್ದರು. ಪರಿಣಾಮ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಿಕ್ಕೇರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಕೆ.ಆರ್.ಪೇಟೆ ತಾಲೂಕು ಆರೋಗ್ಯ ಕೇಂದ್ರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಮೃತರ ವಾರಸುದಾರರಿಗೆ ಹಸ್ತಾಂತರಿಸಲಾಯಿತು. ಮೃತರು ಪತಿ, ಓರ್ವ ಪುತ್ರ ಮತ್ತು ಪುತ್ರಿಯನ್ನು ಅಗಲಿದ್ದಾರೆ.

ಸಣಬ ಡೇರಿಗೆ ನಿರ್ದೇಶಕರುಗಳ ಆಯ್ಕೆ



ಪಾಂಡವಪುರ ತಾಲೂಕಿನ ಸಣಬ ಹಾಲು ಉತ್ಪಾದಕರ ಸಹಕಾರ ಸಂಘದ 10 ನಿರ್ದೇಶಕ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ 10 ಅಭ್ಯರ್ಥಿಗಳು ಜಯಶೀಲರಾಗಿದ್ದು, ನೂತನವಾಗಿ ಆಯ್ಕೆಯಾದ ನಿರ್ದೇಶಕರುಗಳನ್ನು ಮನ್ಮುಲ್ ನಿರ್ದೇಶಕ ಸಿ.ಶಿವಕುಮಾರ್ ಅಭಿನಂದಿಸಿದರು. ಈ ಸಂದರ್ಭದಲ್ಲಿ ಸೊಸೈಟಿ ಅಧ್ಯಕ್ಷ ಸಿ.ಎಸ್.ಗೋಪಾಲಗೌಡ, ಮಾಜಿ ಅಧ್ಯಕ್ಷರಾದ ರಾಮಕೃಷ್ಣೇಗೌಡ, ಸಣಬ ಚನ್ನಕೃಷ್ಣೇಗೌಡ ಸೇರಿದಂತೆ ಹಲವು ಮಂದಿ ಜೆಡಿಎಸ್ ಮುಖಂಡರು ಉಪಸ್ಥಿತರಿದ್ದರು.

ತಮಿಳುನಾಡು ಮಾದರಿ ರಾಜ್ಯದಲ್ಲೂ ಅಹಿಂದ ಸಂಘಟನೆ ಆಗಬೇಕು

ಕೆ.ಆರ್.ಪೇಟೆ, ಮೇ13– ತಮಿಳುನಾಡು ಮಾದರಿಯಲ್ಲಿ ಕರ್ನಾಟಕ ರಾಜ್ಯದಲ್ಲಿಯೂ ಅಹಿಂದ ವರ್ಗದವರು ಸಂಘಟಿತರಾಗಿ ಪರ್ಯಾಯ ರಾಜಕೀಯ ಶಕ್ತಿಯನ್ನು ಹುಟ್ಟು ಹಾಕಲು ಇದು ಸಕಾಲವಾಗಿದೆ. ಇಲ್ಲದಿದ್ದರೆ ಅಹಿಂದ ವರ್ಗಕ್ಕೆ ಅಧಿಕಾರ ಸಿಗುವುದಿಲ್ಲ ಎಂದು ಮಾಜಿ ಸಚಿವ ಮಳವಳ್ಳಿ ಬಿ.ಸೋಮಶೇಖರ್ ತಿಳಿಸಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿಯ (ಪ್ರೊ.ಬಿ.ಕೃಷ್ಣಪ್ಪ ಬಣ) ವತಿಯಿಂದ ಕೆ.ಆರ್.ಪೇಟೆ ಪಟ್ಟಣದ ಸುಲೋಚನಮ್ಮ–ರಾಮದಾಸ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಬುದ್ಧ, ಬಸವ, ಅಂಬೇಡ್ಕರ್ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.



ಬುದ್ಧ, ಬಸವ, ಅಂಬೇಡ್ಕರ್ ಜಯಂತ್ಯೋತ್ಸವವನ್ನು ಗಣ್ಯರು ಉದ್ಘಾಟಿಸಿದರು.

ತಮಿಳುನಾಡಿನಲ್ಲಿ ಕೇವಲ ಎರಡೇ ವರ್ಷದಲ್ಲಿ ದಲಿತ ಹುಡುಗನಾಗಿರುವ ಚಿತ್ರನಟ ವಿಜಯ್ ಮಹಿಳೆಯರು ಮತ್ತು ಯುವಕರನ್ನು ತಮ್ಮ ಟಿವಿಕೆ ಪಕ್ಷದತ್ತ ಸೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ. ಇಂತಹ ಜನಾಕರ್ಷಣೆಯುಳ್ಳ ವ್ಯಕ್ತಿಗಳು ನಮ್ಮ ಕರ್ನಾಟಕ ರಾಜ್ಯಕ್ಕೆ ಅವಶ್ಯಕತೆ ಇದೆ. ರಾಜ್ಯದಲ್ಲಿ ಹಿಂದೆಂದು ಕಂಡರಿಯದಂತಹ ಕುಟುಂಬ ರಾಜಕಾರಣ ಮೂರೂ ಪಕ್ಷಗಳಲ್ಲಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಸ್ವಾತಂತ್ರ್ಯ ಬಂದು 79ವರ್ಷಗಳು ಕಳೆಯುತ್ತಾ ಬಂದರೂ ದಲಿತರಿಗೆ ಮುಖ್ಯಮಂತ್ರಿ ಸ್ಥಾನ ಎಂಬುದು ಕರ್ನಾಟಕ ರಾಜ್ಯದಲ್ಲಿ ಮರೀಚಿಕೆಯಾಗಿದೆ. ಇನ್ನಾದರೂ ದಲಿತ ಚಳುವಳಿಗಳು ತೀವ್ರಗೊಳ್ಳಬೇಕು. 80ರ ದಶಕದ ದಲಿತ ಚಳುವಳಿ, ರೈತ ಚಳುವಳಿ ತೀರಾ ಅಗತ್ಯವಾಗಿದೆ. 80ರ ದಶಕದಲ್ಲಿ ರೈತ ಮತ್ತು ದಲಿತ ಚಳುವಳಿ ಎಷ್ಟು ತೀವ್ರವಾಗಿತ್ತು ಎಂದರೆ ಒಂದು ಸರ್ಕಾರವನ್ನು ಕೆಡವಿ ಹೊಸ ಸರ್ಕಾರವನ್ನು ತರುವ ಶಕ್ತಿ ಹೊಂದಿತ್ತು. ಇದರ ಪರಿಣಾಮವಾಗಿ ಜನತಾ ಪಕ್ಷದ ಸರ್ಕಾರವು ಉದಯವಾಯಿತು ಎಂದು ಬಿ.ಸೋಮಶೇಖರ್ ಹೇಳಿದರು.

ಉಪನ್ಯಾಸಕರು ಹಾಗೂ ದಲಿತಪರ ಚಿಂತಕರಾದ ಎನ್.ಕರುಣಾನಿಧಿ, ಮನ್‌ಮುಲ್ ನಿರ್ದೇಶಕ ಡಾಲು ರವಿ, ಸಮಾಜ ಸೇವಕ ಹೊಸಹೊಳಲು ನಂಜುಂಡಸ್ವಾಮಿ, ರಾಜ್ಯ ಸಂಘಟನಾ ಸಂಚಾಲಕ ಸೋಮನಹಳ್ಳಿ ಅಂದಾನಿ ಮಾತನಾಡಿದರು. ಮದ್ದೂರು ಎಂ.ಶಿವು, ಬೆಸಗರಹಳ್ಳಿ ಬಿ.ಎಂ.ಸತ್ಯ, ಡಿ.ಕೆ. ಅಂಕಯ್ಯ, ಕಂಚಿನಕೋಟೆ ಮೂರ್ತಿ, ಸೋಮಶೇಖರ್ ಭಾಗವಹಿಸಿದ್ದರು.

ಇಂದು ನಾಗಮಂಗಲದಲ್ಲಿ ವಿದ್ಯುತ್ ವ್ಯತ್ಯಯ

ನಾಗಮಂಗಲ: ನಾಗಮಂಗಲ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣೆ ಹಮ್ಮಿಕೊಂಡಿರುವುದರಿಂದ ಮೇ 14ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ನಾಗಮಂಗಲ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಹೊಮ್ಮುವ ನಾಗಮಂಗಲ ಅರ್ಬನ್, ಟಿ.ಬಿ ಅರ್ಬನ್, ಎ.ಸಿ ಹಳ್ಳಿ, ಎನ್.ಜೆ.ವೈ ಮೈಲಾರಪಟ್ಟಣ, ಎನ್.ಜೆ.ವೈ. ಶ್ರೀರಾಮನಹಳ್ಳಿ, ಎನ್.ಜೆ.ವೈ, ಕೋಟೆಬೆಟ್ಟ, ಐ.ಪಿ. ಬಸರಾಳು, ಐ.ಪಿ. ಬೆಳ್ಳೂರು, ಐ.ಪಿ. ರೂರಲ್, ಐ.ಪಿ. ಬಿಂಡಿಗನವಿಲೆ, ಐ.ಪಿ.ಮೇಲುಕೋಟೆ, ಐ.ಪಿ. ಜೋಡಿ ನೇರಲಕೆರೆ, ಐ.ಪಿ, ತುಪ್ಪದಮಡು, ಐ.ಪಿ. ಬೈರನಹಳ್ಳಿ ಐ.ಪಿ ಹಾಗೂ ಮುಳಕಟ್ಟೆ, ಅಂಚೆಚಿಟ್ಟನ ಹಳ್ಳಿ, ಹುಲಿಕೆರೆ, ಪಾಲಗ್ರಹಾರ ಹಾಗೂ ತುಪ್ಪದ ಮಡುವಿನಲ್ಲಿ ವಿದ್ಯುತ್ ಸರಬರಾಜು ಇರುವುದಿಲ್ಲ.

ನಾಳೆ ಕೆಲವೆಡೆ ವಿದ್ಯುತ್ ನಿಲುಗಡೆ

ಮಂಡ್ಯ: ಬಿ.ಹಟ್ನ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯ ನಿರ್ವಹಣೆ ಹಮ್ಮಿಕೊಂಡಿರುವುದರಿಂದ ಮೇ 15 ರಂದು ಬೆಳಗ್ಗೆ 9 ರಿಂದ ಸಂಜೆ 6 ಗಂಟೆಯ ವರೆಗೆ ಬಿ. ಹಟ್ನ ವಿದ್ಯುತ್ ವಿತರಣಾ ಕೇಂದ್ರಗಳಾದ ದುದ್ದ, ಬಿ.ಹಟ್ಟಿ, ಬೇವಕಲ್ಲು, ಬೇವಕಲ್ಲು ಕೊಪ್ಪಲು, ಗಿಡೇಗೌಡನಕೊಪ್ಪಲು, ಕನ್ನಟ್ಟಿ, ಬಂಕನಹಳ್ಳಿ, ಛತ್ರನಹಳ್ಳಿ, ಬಿಲ್ಲೇನಹಳ್ಳಿ, ಕೊಂತೇಗೌಡನಕೊಪ್ಪಲು ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಒಂದನೇ ಪುಟದಿಂದ

ಒಂದಂಕಿ ದಾಟಲ್ಲ ಎಂದಿದ್ದಾರೆ; 58ಕ್ಕಿಂತ ಅಧಿಕ ಸ್ಥಾನ ಗೆದ್ದು ತೋರಿಸ್ತೇವೆ...





25 ವರ್ಷಗಳ ಸೇವೆ: ರಾಜ್ಯದ ನೆಲ, ಜಲ, ಭಾಷೆ ಸೇರಿದಂತೆ ರೈತರು, ಬಡವರ ಹಿತ ಕಾಪಾಡುವ ನಿಟ್ಟಿನಲ್ಲಿ ಜೆಡಿಎಸ್ ಕಳೆದ 25 ವರ್ಷಗಳಿಂದ ಸೇವೆ ಸಲ್ಲಿಸುತ್ತಾ ಬಂದಿದೆ. ಪ್ರಮುಖ ಎರಡು ರಾಷ್ಟ್ರೀಯ ಪಕ್ಷಗಳ ನಡುವೆ ಪ್ರಾದೇಶಿಕ ಪಕ್ಷವಾಗಿ ಅಸ್ತಿತ್ವ ಉಳಿಸಿಕೊಂಡಿದೆ. ಮುಂಬರುವ ದಿನಗಳಲ್ಲಿ ಪಕ್ಷಕ್ಕೆ ಮತ್ತಷ್ಟು ಶಕ್ತಿ ತುಂಬುವ ಪ್ರಯತ್ನ ಮಾಡಲಾಗುವುದು. ಇದಕ್ಕೆ ಕಾರ್ಯಕರ್ತರು ಸಾಥ್ ನೀಡಬೇಕು ಎಂದರು.

ಅಧಿಕಾರ ಅನುಭವಿಸಿ ಹೋದವರು 54 ಮಂದಿ: 25 ವರ್ಷಗಳ ಜೆಡಿಎಸ್ ಅನುಭವದಲ್ಲಿ 54 ಮಂದಿ ಶಾಸಕರು ಜೆಡಿಎಸ್‌ನಲ್ಲಿ ವಿವಿಧ ಅಧಿಕಾರ ಅನುಭವಿಸಿ, ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಬೇರೆ ಬೇರೆ ಪಕ್ಷ ಸೇರಿದ್ದಾರೆ. ಪಕ್ಷದ ತೊರೆದ 54 ಮಂದಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಒಬ್ಬರಾಗಿದ್ದು, ಜೆಡಿಎಸ್ ಅವರನ್ನು ಉಪಮುಖ್ಯಮಂತ್ರಿ ಮಾಡದೇ ಇದ್ದಿದ್ದರೆ, ಇಂದು ಅವರು ಮುಖ್ಯಮಂತ್ರಿಯಾಗಿರಲು ಸಾಧ್ಯವಾಗುತ್ತಿರಲಿಲ್ಲ. ಪ್ರಾದೇಶಿಕ ಪಕ್ಷವೊಂದನ್ನು ಕಟ್ಟಿದ್ದ ಅವರು ಕಾಂಗ್ರೆಸ್‌ನೊಂದಿಗೆ ವಿಲೀನಗೊಳಿಸಿ ಈಗ ಗುಲಾಮಗಿರಿಗೆ ಒಳಗಾಗಿದ್ದಾರೆ ಎಂದು ಕಿಡಿಕಾರಿದರು.

ಎಸ್‌ಸಿಪಿ, ಟಿಎಸ್‌ಪಿ ಹಣ ಗ್ಯಾರಂಟಿ ಯೋಜನೆಗೆ ಬಳಕೆ: ರಾಜ್ಯ ಸರ್ಕಾರ ಕಳೆದ 3 ವರ್ಷಗಳಲ್ಲಿ ಎಸ್‌ಸಿಪಿ, ಟಿಎಸ್‌ಪಿ ಅಡಿ ದಲಿತರ ಅಭಿವೃದ್ಧಿಗೆ ನಿಗದಿಯಾಗಿದ್ದ 29,764 ಕೋಟಿ ರೂ. ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ವರ್ಗಾಯಿಸಲಾಗಿದೆ. ಅಲ್ಲದೇ ಈ ಅನುದಾನವನ್ನು 190 ಕೋಟಿಯಿಂದ 50 ಕೋಟಿಗೆ ಇಳಿಸಿ, 140 ಕೋಟಿ ಕಡಿತ ಮಾಡಿದೆ ಎಂದು ಆರೋಪಿಸಿದರು.

ರೈತರ ಆತ್ಮಹತ್ಯೆ: ರಾಜ್ಯ ಸರ್ಕಾರ ಜನರಿಗಾಗಿ ಯಾವುದೇ ಕಾರ್ಯಕ್ರಮ ರೂಪಿಸಿಲ್ಲ. ರೈತರು ಸಂಕಷ್ಟಕ್ಕೀಡಾಗಿದ್ದಾರೆ. ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ 2,416 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೈಸೂರು ಜಿಲ್ಲೆಯಲ್ಲಿಯೇ ಕಳೆದ 2 ವರ್ಷಗಳಲ್ಲಿ 138 ರೈತರು ಬಲಿಯಾಗಿದ್ದಾರೆ ಎಂದು ವಿಷಾದಿಸಿದರು.

ಚಾಂಪಿಯನ್ ಲೀಡರ್: ನಾನೊಬ್ಬ ಅಹಿಂದ ನಾಯಕ, ಚಾಂಪಿಯನ್ ಲೀಡರ್ ಎಂದು ಹೇಳಿಕೊಳ್ಳುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಬಡವರಿಗೆ ನೀಡಿರುವ ಕೊಡುಗೆ ಶೂನ್ಯ. ಸಿದ್ದರಾಮಯ್ಯ ಅವರನ್ನು ಚಾಂಪಿಯನ್ ಮಾಡಿದ್ದು ಯಾರು ಅಂತ ಮರೆತಿದ್ದಾರೆ. ದಾಖಲೆ ಬಜೆಟ್ ಮಂಡಿಸಿದ್ದೇನೆ ಎಂದು ಬೆನ್ನು ತಟ್ಟಿಕೊಳ್ಳುವುದಕ್ಕೆ ಕಾರಣರು ಯಾರು ಎಂದು ನೆನಪಿಸಿಕೊಳ್ಳಬೇಕು. ಸರ್ಕಾರದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ. ಈ ವರೆಗೆ ಆಡಳಿತ ನಡೆಸಿದ ಮುಖ್ಯಮಂತ್ರಿಗಳಲ್ಲಿ ಸಿದ್ದರಾಮಯ್ಯ ಜನರ ಮೇಲೆ ಅತೀ ಹೆಚ್ಚು ಸಾಲ ಹೊರಿಸಿದ ಸಿಎಂ ಆಗಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಸಮಾವೇಶದಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಜಿಲ್ಲಾ ಜೆಡಿಎಸ್ ಅಧ್ಯಕ್ಷ, ಮಾಜಿ ಶಾಸಕ ಅಶ್ವಿನ್‌ಕುಮಾರ್, ಜೆಡಿಎಸ್ ನಗರಾಧ್ಯಕ್ಷ ಎಸ್‌ಬಿಎಂ ಮಂಜು, ವರುಣ ಕ್ಷೇತ್ರದ ಮುಖಂಡ ಅಭಿಷೇಕ್, ಮಾಜಿ ಶಾಸಕ ಕೆ.ಮಹದೇವ್, ಮಾಜಿ ಮೇಯರ್ ಎಂ.ಜೆ. ರವಿಕುಮಾರ್, ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ಹೇಮಲತಾ, ಮೈಮುಲ್ ಮಾಜಿ ಅಧ್ಯಕ್ಷ ಪ್ರಸನ್ನ ಕುಮಾರ್, ಮುಖಂಡರಾದ ಸುಬ್ಬಪ್ಪ, ಬೆಳವಾಡಿ ಶಿವಮೂರ್ತಿ, ಕೃಷ್ಣನಾಯಕ್, ವರುಣ ಪ್ರಶಾಂತ್, ರಾಮು, ಬಾಲಕೃಷ್ಣ, ನಾಗೇಶ್‌ಗೌಡ ಹಾಗೂ ಇತರರು ಉಪಸ್ಥಿತರಿದ್ದರು.

ಭರ್ಜರಿ ಸ್ವಾಗತ: ವರುಣ ಕ್ಷೇತ್ರದ ಕಾರ್ಯಕ್ರಮಕ್ಕೆ ಆಗಮಿಸಿದ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರನ್ನು ಕ್ಷೇತ್ರದ ಬನ್ನೂರು ಮುಖ್ಯರಸ್ತೆಯ ಭುಗತಗಳ್ಳಿ ಗೇಟ್ ಬಳಿ ಜೆಡಿಎಸ್ ಮುಖಂಡರು, ಕಾರ್ಯಕರ್ತರು ನಾಲ್ಕು ಟ್ರ್ಯಾಕ್ಟರ್‌ನಲ್ಲಿ ಪುಷ್ಪ ಮಳೆ ಸುರಿಸುವ ಮೂಲಕ ಅದ್ದೂರಿ ಸ್ವಾಗತ ಕೋರಿದರು.

ಬೃಹತ್ ಗಾತ್ರದ ಸೇಬಿನ ಹಾರ: ಕಾರ್ಯಕ್ರಮ ನಡೆಯುತ್ತಿದ್ದ ಸ್ಥಳಕ್ಕೆ ಆಗಮಿಸುತ್ತಿದ್ದಂತೆ ಜೆಡಿಎಸ್ ಪರ ಹಾಗೂ ಪಕ್ಷದ ಹಿರಿಯ ಮುಖಂಡರು ಹಾಗೂ ನಿಖಿಲ್ ಕುಮಾರಸ್ವಾಮಿ ಅವರ ಪರವಾಗಿ ಘೋಷಣೆ ಕೂಗಿದರು. ಅಲ್ಲದೇ ಅಭಿಮಾನಿಗಳು, ಕಾರ್ಯಕರ್ತರು ಮುಖಂಡರು ಬೃಹತ್ ಸೇಬಿನ ಹಾರವನ್ನು ಜೆಸಿಬಿ ಸಹಾಯದಿಂದ ಹಾಕಿ, ಸಂಭ್ರಮಿಸಿದರು.

ಗೆದ್ದ ವಿಜಯ್

ಆದರೆ ಸದನದಲ್ಲಿದ್ದ 22 ಎಐಎಡಿಎಂಕೆ ಶಾಸಕರು ವಿಶ್ವಾಸಮತದ ವಿರುದ್ಧ ಮತ ಹಾಕಿದರು. 234 ಶಾಸಕರನ್ನು ಹೊಂದಿರುವ ವಿಧಾನಸಭೆಯಲ್ಲಿ ಬಹುಮತಕ್ಕೆ 118 ಶಾಸಕರ ಅಗತ್ಯವಿದೆ. ವಿಜಯ್ ತಿರುಚಿ ಪಶ್ಚಿಮ ಮತ್ತು ಪೆರಂಬೂರು ಕ್ಷೇತ್ರದಿಂದ ಸ್ಪರ್ಧೆ ಮಾಡಿದ ಹಿನ್ನೆಲೆ ಅದನ್ನು ಒಂದು ಎಂದು ಪರಿಗಣಿಸಲಾಗುತ್ತದೆ. ಇದರ ಜೊತೆಗೆ ತಿರುಪತ್ತೂರು ಟಿವಿಕೆ ಶಾಸಕ ಶ್ರೀನಿವಾಸ್ ಸೇತುಪತಿ ಅವರಿಗೆ ಬಹುಮತ ಸಾಬೀತು ಪ್ರಕ್ರಿಯೆಯಲ್ಲಿ ಭಾಗಿಯಾಗದಂತೆ ಮದ್ರಾಸ್ ಹೈಕೋರ್ಟ್ ಸೂಚನೆ ನೀಡಿರುವ ಹಿನ್ನೆಲೆ ವಿಧಾನಸಭೆಯ ಬಲ 232ಕ್ಕೆ ಇಳಿದಿದ್ದು, ಬಹುಮತಕ್ಕೆ 116 ಶಾಸಕರ ಬೆಂಬಲ ಅಗತ್ಯವಿತ್ತು.

ಸರ್ಕಾರದ ಪರ ಮತ ಎಷ್ಟು: ಟಿವಿಕೆ 106, ಕಾಂಗ್ರೆಸ್ 5 , ಎಡಪಕ್ಷಗಳು 4 , ವಿಸಿಕೆ 2, ಮುಸ್ಲಿಂ ಲೀಗ್ 2 , ಎಐಎಡಿಎಂಕೆ 27 ಶಾಸಕರು ವಿಜಯ್ ಸರ್ಕಾರದ ಪರ ಮತ ಚಲಾಯಿಸಿದರು.

ಶೇ.15ಕ್ಕೆ ಏರಿಕೆ; ಚಿನ್ನ, ಬೆಳ್ಳಿ ಇನ್ನು ದುಬಾರಿ

ಬದಲಾವಣೆ ಮಾಡಿಲ್ಲ. ಆದರೆ ಮೂಲ ಕಸ್ಟಮ್ಸ್ ಸುಂಕ 5% ಏರಿಕೆ ಮಾಡಿದ್ದರಿಂದ ಒಟ್ಟು ಆಮದು ಸುಂಕ 15% ಏರಿಕೆಯಾಗಿದೆ. ಭಾರತದಲ್ಲಿ ಚಿನ್ನದ ಹೂಡಿಕೆ ಮತ್ತು ಖರೀದಿ ತೀವ್ರವಾಗಿ ಹೆಚ್ಚಿದ್ದ ರಿಂದ ಆಮದು ಪ್ರಮಾಣ ಹೆಚ್ಚಾಗಿತ್ತು ಇದನ್ನು ನಿಯಂತ್ರಿಸಲು ಸುಂಕ ಏರಿಸಲಾಗಿದೆ.

ಆಮದು ಸುಂಕ ಹೆಚ್ಚಾದ ಬೆನ್ನಲ್ಲೇ ದೇಶೀಯ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿಯ ಬೆಲೆಗಳು ತಕ್ಷಣವೇ ದುಬಾರಿಯಾಗಲಿವೆ. ಮುಂಬರುವ ಹಬ್ಬ ಹಾಗೂ ಮದುವೆ ಸೀಸನ್‌ಗಳಲ್ಲಿ ಆಭರಣ ಖರೀದಿಸುವ ಗ್ರಾಹಕರಿಗೆ ಮೇಕಿಂಗ್ ಚಾರ್ಜ್ ಹಾಗೂ ಜಿಎಸ್‌ಟಿ ಜೊತೆಗೆ ಈ ಹೆಚ್ಚುವರಿ ಸುಂಕದ ಹೊರೆಯೂ ತಟ್ಟಲಿದೆ.

ಸಾರ್ವಜನಿಕರು ಕನಿಷ್ಠ ಒಂದು ವರ್ಷದವರೆಗೆ ಅನಗತ್ಯ ಚಿನ್ನದ ಖರೀದಿಯನ್ನು ಮುಂದೂಡಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚೆಗೆ ಮನವಿ ಮಾಡಿದ್ದರು.

ದುಬಾರಿ ಹೇಗೆ? : ಆಮದಾಗುವ ಚಿನ್ನದ ಮೇಲೆ 15% ತೆರಿಗೆ ವಿಧಿಸಲಾಗಿದೆ. ಇದರ ಜೊತೆ ಇದರ ಜೊತೆಗೆ ಚಿನ್ನದ ಮೌಲ್ಯದ ಮೇಲೆ 3% ಜಿಎಸ್‌ಟಿ ಮೊದಲದೇ ವಿಧಿಸಲಾಗಿದೆ. ಹೀಗಾಗಿ ಚಿನ್ನದ ದರ ಮತ್ತಷ್ಟು ಏರಿಕೆಯಾಗಲಿದೆ.

ಏರಿಕೆ ಮಾಡಿದ್ದು ಯಾಕೆ? : ಭಾರತದ ಚಿನ್ನದ ಆಮದು ಬಿಲ್ 2025 ರಲ್ಲಿ ಸುಮಾರು 58.9 ಬಿಲಿಯನ್ ಡಾಲರ್‌ಗೆ (5.62 ಲಕ್ಷ ಕೋಟಿ ರೂ.) ತಲುಪಿತ್ತು, ಇದು ದೇಶದ ಒಟ್ಟು ವಿದೇಶಿ ವಿನಿಮಯ ಮೀಸಲು ನಿಧಿಯ ಮೇಲೆ ಭಾರಿ ಒತ್ತಡ ಹೇರಿತು. ಚಿನ್ನಕ್ಕಾಗಿ ಭಾರತೀಯ ರೂಪಾಯಿಗಳನ್ನು ನೀಡಿ ಡಾಲರ್ ಖರೀದಿಸುವುದರಿಂದ ಜಾಗತಿಕ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯ ಕುಸಿಯುತ್ತಿತ್ತು. ಇದನ್ನು ತಡೆಯಲು ಆಮದು ಪ್ರಮಾಣವನ್ನು ಕಡಿಮೆ ಮಾಡುವುದು ಅನಿವಾರ್ಯವಾಗಿತ್ತು.

ತೆರಿಗೆ ಇಳಿಸಿದ್ದ ಸರ್ಕಾರ : ವರ್ಷದಿಂದ ವರ್ಷಕ್ಕೆ ಚಿನ್ನದ ಸ್ಮಗ್ಲಿಂಗ್ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರ 2024 ರ ಬಜೆಟ್‌ನಲ್ಲಿ ತೆರಿಗೆ ಇಳಿಸಿತ್ತು. ಚಿನ್ನ ಮತ್ತು ಬೆಳ್ಳಿಯ ಕಸ್ಟಮ್ಸ್ ಡ್ಯೂಟಿ 15% ಇದ್ದರೆ ಅದನ್ನು 6% ಇಳಿಸಲಾಗಿತ್ತು. 6% ಹೇಗೆ ಅಂದರೆ ಆಮದು ಸುಂಕ ವನ್ನು 10% ರಿಂದ 5% ಇಳಿಕೆ ಮಾಡಿದ್ದರೆ ಕೃಷಿ ಮೂಲಸೌಕರ್ಯ ಅಭಿವೃದ್ಧಿ ಸೆಸ್ 5% ನಿಂದ 1% ಕ್ಕೆ ಇಳಿಸಲಾಗಿತ್ತು. ಆದರೆ ಈಗ ಮತ್ತೆ ಆಮದು ಸುಂಕವನ್ನು 15%ಗೆ ಏರಿಕೆ ಮಾಡಿದೆ.

ಹಿಜಾಬ್ ನಿಷೇಧ ಹಿಂದಕ್ಕೆ

ಬಸವಣ್ಣನವರ ತತ್ವ ಅಳವಡಿಕೆ: ಈ ಆದೇಶದಲ್ಲಿ ಸರ್ಕಾರವು ಜಗಜ್ಯೋತಿ ಬಸವಣ್ಣನವರ ಇವ ನಮ್ಮವ ಎಂಬ ತತ್ವವನ್ನು ಪ್ರಸ್ತಾಪಿಸಿದೆ. ಶಿಕ್ಷಣ ಸಂಸ್ಥೆಗಳು ಕೇವಲ ಬೋಧನಾ ಕೇಂದ್ರಗಳಾಗದೆ, ಸಾಮಾಜಿಕ ಸಾಮರಸ್ಯ ಮತ್ತು ಪರಸ್ಪರ ಗೌರವವನ್ನು ಕಲಿಯುವ ಕೇಂದ್ರಗಳಾಗಬೇಕು. ಎಲ್ಲರನ್ನೂ ಒಳಗೊಳ್ಳುವ ಮನೋಭಾವವನ್ನು ಬೆಳೆಸಲು ಈ ಹೊಸ ಆದೇಶ ಸಹಾಯ ಮಾಡಲಿದೆ ಎಂದು ಸರ್ಕಾರ ಆಶಯ ವ್ಯಕ್ತಪಡಿಸಿದೆ.

ಖಾಸಗಿ ಮತ್ತು ಸರ್ಕಾರಿ ಶಾಲೆಗಳಿಗೆ ಅನ್ವಯ: ಈ ಹೊಸ ಮಾರ್ಗಸೂಚಿಗಳು ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಶಾಲಾ–ಕಾಲೇಜುಗಳು ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ ಅನ್ವಯವಾಗಲಿವೆ. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು ಈ ಆದೇಶವನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಲಾಗಿದೆ.

ಒಟ್ಟಾರೆಯಾಗಿ, ಈ ಆದೇಶದ ಮೂಲಕ ರಾಜ್ಯದಲ್ಲಿ ಕಳೆದ ನಾಲ್ಕು ವರ್ಷಗಳಿಂದ ನಡೆಯುತ್ತಿದ್ದ ಸಮವಸ್ತ್ರ ಮತ್ತು ಹಿಜಾಬ್ ಸಂಘರ್ಷಕ್ಕೆ ಶಾಶ್ವತ ಪರಿಹಾರ ಸಿಕ್ಕಂತಾಗಿದೆ. ವಿದ್ಯಾರ್ಥಿಗಳು ಧಾರ್ಮಿಕ ನಂಬಿಕೆ ಮತ್ತು ಶಿಕ್ಷಣ ಎರಡನ್ನೂ ಸಮತೋಲನದಲ್ಲಿ ಕೊಂಡೊಯ್ಯಲು ಈ ಹೊಸ ನೀತಿ ಪೂರಕವಾಗಿದೆ.

ವಾಹನಗಳಲ್ಲಿ ಶೇ.50 ಕಡಿತ

ಕ್ರಮಗಳನ್ನು ಅನುಸರಿಸುತ್ತಿದೆ ಎಂಬ ಸಂದೇಶವನ್ನು ಪ್ರಧಾನಿ ನೀಡಿದ್ದಾರೆ. ಇದಲ್ಲದೆ, ಪ್ರಧಾನಿ ಭದ್ರತೆಗಾಗಿ ಬಳಸುವ ಕೆಲವು ವಿಶೇಷ ಬೆಂಗಾವಲು ವಾಹನಗಳಲ್ಲಿ ಎಲೆಕ್ಟ್ರಿಕ್ ಕಾರುಗಳ ಬಳಕೆಗೆ ಸಹ ಅನುಮತಿ ನೀಡಲಾಗಿದೆ. ಇಂಧನ ಬಳಕೆಯನ್ನು ಕಡಿಮೆ ಮಾಡುವ ಜೊತೆಗೆ ಪರಿಸರ ಸ್ನೇಹಿ ಕ್ರಮಗಳಿಗೂ ಸರ್ಕಾರ ಒತ್ತು ನೀಡುತ್ತಿದೆ.

ಶಾ ಬೆಂಗಾವಲು ವಾಹನಗಳಲ್ಲೂ ಇಳಿಕೆ: ಪ್ರಧಾನಿ ನರೇಂದ್ರ ಮೋದಿ ಅವರು ಇಂಧನ ಬಳಕೆ ಕಡಿಮೆ ಮಾಡುವಂತೆ ಕರೆ ನೀಡಿರುವ ಬೆನ್ನಲ್ಲೇ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ತಮ್ಮ ಬೆಂಗಾವಲು ವಾಹನಗಳ ಸಂಖ್ಯೆಯನ್ನು ಕಡಿತಗೊಳಿಸಿದ್ದಾರೆ ಎಂದು ವರದಿಯಾಗಿದೆ.

ಈಚೆಗೆ ಹೈದರಾಬಾದ್‌ನಲ್ಲಿ ನಡೆದ ಸಮಾವೇಶದಲ್ಲಿ ಮಾತನಾಡಿದ್ದ ಪ್ರಧಾನಿ ಮೋದಿ, ಪಶ್ಚಿಮ ಏಷ್ಯಾದ ಯುದ್ಧದಿಂದಾಗಿ ಭಾರತದ ಆರ್ಥಿಕತೆಯ ಮೇಲೆ ಬೀರುವ ಪರಿಣಾಮಗಳನ್ನು ಎದುರಿಸಲು ಕೆಲವು ಸಲಹೆಗಳನ್ನು ನೀಡಿದ್ದರು. ಪೆಟ್ರೋಲ್ ಮತ್ತು ಡೀಸೆಲ್ ಬಳಕೆ ಕಡಿಮೆ ಮಾಡುವುದು, ಮೆಟ್ರೊ ರೈಲು ಬಳಕೆ, ಕಾರ್‌ಪೂಲಿಂಗ್ ಮತ್ತು ಎಲೆಕ್ಟ್ರಿಕ್ ವಾಹನಗಳಿಗೆ ಆದ್ಯತೆ ನೀಡುವುದು. ಕನಿಷ್ಠ ಒಂದು ವರ್ಷದ ಮಟ್ಟಿಗೆ ಚಿನ್ನದ ಖರೀದಿ ಮತ್ತು ವಿದೇಶಿ ಪ್ರವಾಸ ಮುಂದೂಡುವುದು. ಸಾಧ್ಯವಿರುವ ಕಡೆ ವರ್ಕ್ ಫ್ರಮ್ ಹೋಮ್ ಮಾಡುವುದು. ಖಾದ್ಯ ತೈಲ ಮತ್ತು ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ಮಿತಗೊಳಿಸಿ, ನೈಸರ್ಗಿಕ ಕೃಷಿ ಹಾಗೂ ಸ್ವದೇಶಿ ಉತ್ಪನ್ನಗಳಿಗೆ ಒತ್ತು ನೀಡಬೇಕೆಂದು ಮೋದಿ ಸಲಹೆ ನೀಡಿದ್ದರು. ಪಶ್ಚಿಮ ಏಷ್ಯಾದ ಬಿಕ್ಕಟ್ಟಿನ ಸಂದರ್ಭದಲ್ಲಿ ದೇಶದ ಆರ್ಥಿಕ ಸ್ಥಿರತೆಯನ್ನು ಕಾಯ್ದುಕೊಳ್ಳಲು ಈ ಕ್ರಮಗಳು ಅನಿವಾರ್ಯ ಎಂದು ಮೋದಿ ಒತ್ತಿ ಹೇಳಿದ್ದರು.

ಪಿಹೆಚ್.ಡಿ ಪದವಿ



ಮೈಸೂರು, ಮೇ 12– ಡಾ.ಪಿ. ಎಸ್.ಕೆ.ರೆಡ್ಡಿ ಅವರ ಮಾರ್ಗದರ್ಶನದಲ್ಲಿ ಸೋಮಶೇಖರ್.ಪಿ ಅವರು ಗಣಿತಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವ ವಿದ್ಯಾನಿಲಯ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ. ಸೋಮಶೇಖರ್.ಪಿ ಅವರು ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ಗಣಿತಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಹಿಂದೂ ಎಂದು ಸಾಬೀತುಪಡಿಸಲು ದೇವಸ್ಥಾನಕ್ಕೆ ಹೋಗಲೇ ಬೇಕೆಂದಿಲ್ಲ

ನವದೆಹಲಿ: ಹಿಂದೂ ಧರ್ಮವು ಒಂದು ಜೀವನ ವಿಧಾನವಾಗಿದ್ದು, ಅದನ್ನು ಸಾಬೀತುಪಡಿಸಲು ಕಡ್ಡಾಯವಾಗಿ ದೇವಸ್ಥಾನಕ್ಕೆ ಭೇಟಿ ನೀಡುವ ಅಥವಾ ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸುವ ಅಗತ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಬುಧವಾರ ಅಭಿಪ್ರಾಯಪಟ್ಟಿದೆ.



ಶಬರಿಮಲೆ ಸೇರಿದಂತೆ ದೇಶದ ವಿವಿಧೆಡೆ ಪೂಜಾ ಸ್ಥಳಗಳಲ್ಲಿ ಮಹಿಳೆಯರ ಪ್ರವೇಶಕ್ಕೆ ನಿರ್ಬಂಧ ಹಾಗೂ ತಾರತಮ್ಯಕ್ಕೆ ಸಂಬಂಧಿಸಿದ ಅರ್ಜಿಗಳ ವಿಚಾರಣೆಯನ್ನು ಒಂಬತ್ತು ನ್ಯಾಯಮೂರ್ತಿಗಳ ಸಂವಿಧಾನ ಪೀಠವು ನಡೆಸುತ್ತಿದೆ.

ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯಾ ಬಾಗ್ಚಿ ಬಿ.ವಿ ನಾಗರತ್ನ, ಎಂ.ಎಂ ಸುಂದರೇಶ್, ಅಹ್ಸಾನುದ್ದೀನ್ ಅಮಾನುಲ್ಲಾ, ಅರವಿಂದ್ ಕುಮಾರ್, ಅಗಸ್ಟೀನ್ ಜಾರ್ಜ್ ಮಸೀಹ್, ಪ್ರಸನ್ನ ಬಿ. ವರಾಳೆ, ಆರ್.ಮಹಾದೇವನ್ ಅವರು ಈ ಪೀಠದಲ್ಲಿದ್ದಾರೆ.

ವಿಚಾರಣೆಯ 15ನೇ ದಿನವಾದ ಇಂದು ವಾದ ಮಂಡಿಸಿದ ಮಧ್ಯಸ್ಥಿಕೆದಾರರ ಪರ ವಕೀಲ ಡಾ. ಜಿ. ಮೋಹನ್ ಗೋಪಾಲ್ ಅವರು, ಧಾರ್ಮಿಕ ಸಮುದಾಯಗಳ ಒಳಗಿನಿಂದಲೇ ಸಾಮಾಜಿಕ ನ್ಯಾಯಕ್ಕಾಗಿ ಬೇಡಿಕೆಗಳು ಉದ್ಭವಿಸುತ್ತಿವೆ ಎಂದು ಪ್ರತಿಪಾದಿಸಿದರು.

ಹಿಂದೂ ಧರ್ಮವನ್ನು ಒಂದು ಧಾರ್ಮಿಕ ವರ್ಗವಾಗಿ ವ್ಯಾಖ್ಯಾನಿಸಲಾಗಿದೆ. ತದನಂತರ, 1966ರಲ್ಲಿ, ವೇದವನ್ನು ಸರ್ವೋಚ್ಚ ಎಂದು ಯಾರು ಒಪ್ಪಿಕೊಳ್ಳುತ್ತಾರೋ ಅವರು ಹಿಂದೂ ಎಂದು ತೀರ್ಪು ನೀಡಲಾಗಿತ್ತು ಆದರೆ ನಮ್ಮಲ್ಲಿ ಯಾರೂ ಹಾಗೆ ಹೇಳಿರಲಿಲ್ಲ ಎಂದರು.

ಮುಂದುವರಿದು, ನನಗೆ ವೇದಗಳ ಬಗ್ಗೆ ಅತ್ಯಂತ ಗೌರವವಿದೆ. ಆದರೆ ಇಂದು ಹಿಂದೂ ಎಂದು ವರ್ಗೀಕರಿಸಲ್ಪಟ್ಟ ಪ್ರತಿಯೊಬ್ಬ ವ್ಯಕ್ತಿಯು ವೇದಗಳನ್ನು ಸರ್ವೋಚ್ಚ ಎಂದು ಒಪ್ಪಿಕೊಳ್ಳುತ್ತಾರೆಂಬುವುದು ಸತ್ಯವೇ ಎಂದು ಪ್ರಶ್ನಿಸಿದರು. ಈ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ ನಾಗರತ್ನ, ಹಿಂದೂ ಧರ್ಮವನ್ನು ದೀರ್ಘಕಾಲದಿಂದಲೂ ಒಂದು ಜೀವನ ವಿಧಾನವೆಂದು ಅರ್ಥೈಸಿಕೊಳ್ಳಲಾಗಿದೆ. ಒಬ್ಬ ವ್ಯಕ್ತಿಯು ಹಿಂದೂವಾಗಿ ಉಳಿಯಲು ಕಡ್ಡಾಯವಾಗಿ ದೇವಸ್ಥಾನಕ್ಕೆ ಭೇಟಿ ನೀಡಬೇಕಾಗಿಲ್ಲ ಅಥವಾ ಧಾರ್ಮಿಕ ವಿಧಿವಿಧಾನಗಳನ್ನು ಮಾಡಬೇಕಾಗಿಲ್ಲ ಎಂದು ಹೇಳಿದರು. ನಂಬಿಕೆಯು ವೈಯಕ್ತಿಕವಾದುದು. ಒಬ್ಬ ವ್ಯಕ್ತಿಯು ಧಾರ್ಮಿಕ ಆಚರಣೆಗಳನ್ನು ಮಾಡದ ಕಾರಣಕ್ಕೆ ಅವರ ಆಧ್ಯಾತ್ಮಿಕ ನಂಬಿಕೆಗಳಿಗೆ ಯಾರೂ ಅಡ್ಡಿಪಡಿಸಲು ಸಾಧ್ಯವಿಲ್ಲ ಎಂದರು. ತಮ್ಮ ಮನೆಯ ಅಥವಾ ಗುಡಿಸಲಿನ ಒಳಗೆ ದೀಪವನ್ನು ಹಚ್ಚುವುದು ಕೂಡ ನಂಬಿಕೆ ಮತ್ತು ಧಾರ್ಮಿಕ ನಂಬಿಕೆಯನ್ನು ಪ್ರದರ್ಶಿಸಲು ಸಾಕಾಗುತ್ತದೆ ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಅವರು ಸೇರಿಸಿದರು. ಪ್ರಕರಣ ಸಂಬಂಧ ವಿಚಾರಣೆ ಮುಂದುವರಿದಿದೆ.

ತಪಾಸಣೆಗೆ ಆಸ್ಪತ್ರೆಗೆ ದಾಖಲಾಗಿದ್ದ ಸೋನಿಯಾ ಗಾಂಧಿ ಮನೆಗೆ ವಾಪಸ್

ನವದೆಹಲಿ: ಕಾಂಗ್ರೆಸ್ ಹಿರಿಯ ನಾಯಕಿ ಸೋನಿಯಾ ಗಾಂಧಿ ಅವರು ಬುಧವಾರ ನಿಯಮಿತ ವೈದ್ಯಕೀಯ ತಪಾಸಣೆಗೆ ತೆರಳಿದ್ದರು. ಇದೀಗ ಆಸ್ಪತ್ರೆಯಿಂದ ಮನೆಗೆ ಮರಳಿದ್ದಾರೆ. ಈ ಕುರಿತು ಕಾಂಗ್ರೆಸ್ ಸಂಸದ ಜೈರಾಮ್ ರಮೇಶ್ ಮಾಹಿತಿ ನೀಡಿದ್ದಾರೆ. ಮಂಗಳವಾರ ತಡರಾತ್ರಿ ಸೋನಿಯಾ ಗಾಂಧಿ ಅವರನ್ನು ಗುರುಗ್ರಾಮ್‌ನ ಮೇದಾಂತಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಹೊಟ್ಟೆ ಹಾಗೂ ಮೂತ್ರದ ಸೋಂಕಿನ ಅನುಮಾನ ಹಿನ್ನೆಲೆ ವೈದ್ಯರು ವಿವಿಧ ಪರೀಕ್ಷೆಗಳನ್ನು ನಡೆಸಿದ್ದರು. ಈಗ ಅವರ ಆರೋಗ್ಯ ಸ್ಥಿರವಾಗಿದೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ ಇದಕ್ಕೂ ಮೊದಲು ಮಾ.24ರಂದು ಜ್ವರ ಮತ್ತು ಸೋಂಕಿನ ಸಮಸ್ಯೆಯಿಂದ ಬಳಲುತ್ತಿದ್ದ ಹಿನ್ನೆಲೆಯಲ್ಲಿ ಅವರನ್ನು ಗಂಗಾರಾಮ್ ಆಸ್ಪತ್ರೆಗೆ ದಾಖಲಿಸಲಾಗಿತ್ತು.



ಮೈಸೂರು ಮಿತ್ರ

ಅವಸಾನದ ಅಂಚಿನಲ್ಲಿದ್ದ ತಿಲಕ್‌ನಗರದ ಶತಮಾನದ ಶಾಲೆಗೆ ಮರುಜೀವ!

ಸರ್ಕಾರದ ನೆರವು ನೆಚ್ಚಿಕೊಳ್ಳದೆ ಸ್ಥಳೀಯ ನಿವಾಸಿಗಳಿಂದಲೇ ಕಾಯಕಲ್ಪ

ಮೈಸೂರು, ಮೇ 13(ಎಂಕೆ)– ಬೆಂಕಿ ಬಿದ್ದು ಸುಟ್ಟು ಕರಕಲಾಗಿ, ಅಸ್ಥಿ ಪಂಜರದಂತೆ ಕಾಣುತ್ತಾ ಅವಸಾನ ದತ್ತ ಸಾಗಿದ್ದ ಶತಮಾನ ಕಂಡ ಸರ್ಕಾರಿ ಶಾಲೆಗೆ ಮರುಜೀವ ನೀಡಲಾಗಿದೆ...!

ಮೈಸೂರಿನ ವಾರ್ಡ್ ನಂ.25ರ ವ್ಯಾಪ್ತಿಯ ತಿಲಕ್‌ನಗರದ ಉತ್ತರ ವಲಯದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಸರ್ಕಾರದ ನೆರವಿಲ್ಲದೆಯೇ ಸ್ಥಳಿಯ ನಿವಾಸಿಗಳೇ ಮರು ಜೀವ ನೀಡಿದ್ದಾರೆ.

1906ರಲ್ಲಿ ಮೈಸೂರು ಸಂಸ್ಥಾನ ದಿಂದ ಆರಂಭವಾದ ಶಾಲೆ ಇದಾಗಿದ್ದು, ಆರಂಭದಲ್ಲಿ ಶಾಲೆಯ ನಿರ್ವಹಣೆಯ ಜವಾಬ್ದಾರಿಯನ್ನು ಕ್ರೈಸ್ತ ಸಂಸ್ಥೆಯೊಂದಕ್ಕೆ ನೀಡಲಾಗಿತ್ತು. ಸ್ವಾತಂತ್ರ್ಯ ನಂತರ ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕಿಯರ ಶಾಲೆಯಾಗಿ ಮುನ್ನಡೆದು ನಂತರದ ದಿನಗಳಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ(ಗಂಡು ಮತ್ತು ಹೆಣ್ಣು ಮಕ್ಕಳು ಸೇರಿ)ಯಾಗಿ ವ್ಯಾಪಾರ್ಡಾಗಿ ಸಾವಿರಾರು ವಿದ್ಯಾರ್ಥಿಗಳ ಬದುಕಿಗೆ ಬೆಳಕಾಗಿದೆ.

ಶಾಲೆಯ ಗೋಡೆಗಳಲ್ಲಿ ಬಿರುಕು ಕಂಡು ಬಂದಿದ್ದರಿಂದ ಮುಂಜಾಗ್ರತಾ ಕ್ರಮವಾಗಿ 2018–19ರಲ್ಲಿ ವಿದ್ಯಾರ್ಥಿಗಳನ್ನು ತಿಲಕ್‌ನಗರದಲ್ಲೇ ಇರುವ ಕಿವುಡ ಮಕ್ಕಳ ಶಾಲೆಗೆ ಸ್ಥಳಾಂತರಿಸಿ, ಅಲ್ಲಿನ ಐದು ಕೊಠಡಿಗಳನ್ನು ಪಡೆದು ಇಂದಿಗೂ ತರಗತಿಗಳನ್ನು ನಡೆಸಲಾಗುತ್ತಿದೆ.

ಇದರ ನಡುವೆ 2020–21ರಲ್ಲಿ ಶಾಲೆಯ ಕೊಠಡಿಯೊಂದಕ್ಕೆ ಬೆಂಕಿ ಬಿದ್ದು, ಕಟ್ಟಡ ಛಾವಣಿ ಸುಟ್ಟು ಕರಕಲಾಗಿ, ಗೋಡೆಗಳಿಗೂ ಹಾನಿಯಾಗಿತ್ತು. ಬಳಿಕ ಕಸದ ರಾಶಿಯೊಂದಿಗೆ ಹಾಳು ಕೊಂಪೆಯಂತಾಗಿದ್ದ ಈ ಸರ್ಕಾರಿ ಶಾಲೆಯ ಹೀನಾಯ ಪರಿಸ್ಥಿತಿಯನ್ನು ಕಂಡ ತಿಲಕ್‌ನಗರ ನಿವಾಸಿಗಳು ಹಾಗೂ ಹಿರಿಯ ವಿದ್ಯಾರ್ಥಿಗಳು ಸೇರಿ 'ತಿಲಕ್ ನಗರ ಹಿತರಕ್ಷಣಾ ಸಮಿತಿ' ಹೆಸರಿನಲ್ಲಿ ದೇಣಿಗೆ ಸಂಗ್ರಹಿಸಿ ಶಾಲೆಗೆ ಮರುಹುಟ್ಟು ನೀಡಿದ್ದಾರೆ.

ಹುನ್ನಾರದ ನಡುವೆ ಶಾಲೆ ಉಳಿಸಿದ್ದೇವೆ

ತಿಲಕ್‌ನಗರದ ಸರ್ಕಾರಿ ಶಾಲೆಯ ಜಾಗವನ್ನು ಕಬಳಿಸಲು ನಿರಂತರ ಪ್ರಯತ್ನಗಳು ನಡೆಯುತ್ತಲೇ ಇವೆ. ಒಳಗೊಳಗೆ ಹುನ್ನಾರಗಳನ್ನು ನಡೆಸಲಾಗುತ್ತಿದೆ. ಇದೆಲ್ಲದರ ನಡುವೆಯೂ ನಮ್ಮ ಶಾಲೆಯನ್ನು ಉಳಿಸಬೇಕೆಂಬ ಸಂಕಲ್ಪದೊಂದಿಗೆ ಶಾಲೆಯನ್ನು ಉಳಿಸಿದ್ದೇವೆ ಎಂದು ಸಮಿತಿಯ ಪದಾಧಿಕಾರಿಗಳು 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ಮೈಸೂರಿನ ತಿಲಕ್‌ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪುನಾರಂಭಕ್ಕೆ ಸಿದ್ಧವಾಗಿರುವುದು.


ಹಾಳು ಕೊಂಪೆಯಂತಾಗಿದ್ದ ತಿಲಕ್‌ನಗರದ ಹಿರಿಯ ಪ್ರಾಥಮಿಕ ಶಾಲೆ ದೃಶ್ಯ.

ಸುಮಾರು 10 ಲಕ್ಷ ರೂ ವೆಚ್ಚದಲ್ಲಿ ಹೊಸದಾಗಿ ಛಾವಣಿ ಅಳವಡಿಸಿ, ಗೋಡೆಗಳನ್ನು ಭದ್ರಗೊಳಿಸಿ ಬಣ್ಣ ಬಳಿದು, ಶಾಲೆಯ ಸುತ್ತಲೂ ಫೆನ್ಸಿಂಗ್ ಅಳವಡಿಸಿ, ಗೇಟ್ ದುರಸ್ತಿಗೊಳಿಸಿ ಹಳೆ ಶಾಲೆಗೆ ಹೊಸ ರೂಪ ನೀಡುವ ಮೂಲಕ ಶಾಲೆಯ ಶತಮಾನೋತ್ಸವ ಆಚರಣೆಗೆ ವೇದಿಕೆ ಸಿದ್ಧಪಡಿಸಿದ್ದಾರೆ.

ಶಾಲಾ ಕಟ್ಟಡ ಸಂಪೂರ್ಣ ಹಾಳಾಗಿತ್ತು. ಕಿಟಕಿ ಬಾಗಿಲುಗಳು ಕಳ್ಳತನವಾಗಿದ್ದವು. ಕಟ್ಟಡದ ಬಹುತೇಕ ಛಾವಣಿ ಬೆಂಕಿಗೆ ಸುಟ್ಟು ಹೋಗಿತ್ತು. ಗೋಡೆಗಳಲ್ಲಿ ಇಟ್ಟಿಗೆಗಳು ಕಿತ್ತು ಬಂದಿದ್ದವು. ರಾಶಿ ರಾಶಿ ಕಸ ಬಿದ್ದಿತ್ತು. ಇನ್ನೇನು ಕಣ್ಮರೆಯಾಗುತ್ತದೆ ಎಂದು ಕೊಳ್ಳುವಷ್ಟರಲ್ಲಿ ಎಲ್ಲರೂ ಒಟ್ಟಾಗಿ ಶಾಲೆಯನ್ನು ಉಳಿಸುವ ಕಾರ್ಯ ಮಾಡಿದ್ದೇವೆ ಎಂದು ಹರ್ಷ ವ್ಯಕ್ತಪಡಿಸಿದರು.

ತಿಂಗಳಲ್ಲಿ ಪೂರ್ಣ: ಕಳೆದ ಒಂದು ತಿಂಗಳಿಂದ ಹಗಲು–ರಾತ್ರಿ ನಿರಂತರವಾಗಿ ಶಾಲೆಯ ದುರಸ್ಥಿ ಕೆಲಸ ನಡೆ ದಿದೆ. ಹಾಳು ಕೊಂಪೆಯಾಗಿದ್ದ ಜಾಗವನ್ನು ಸುಸ್ಥಿತಿಗೆ ತರಲಾಗಿದ್ದು, ಶಾಲಾ ಮಕ್ಕಳು ಯಾವುದೇ ಭಯವಿಲ್ಲದೆ ಅಕ್ಷರಾಭ್ಯಾಸ ಮಾಡಬಹುದಾಗಿದೆ. ಶಿಕ್ಷಣ ಇಲಾಖೆಯಿಂದ ನಯಾಪೈಸೆ ಸಹಕಾರ ಇಲ್ಲದಿದ್ದರೂ ಶಾಲೆಯ ಮೇಲಿನ ಅಭಿಮಾನದಿಂದಾಗಿ ತಿಲಕ್‌ನಗರ ನಿವಾಸಿಗಳು ನೀಡಿದ ಹಣದಿಂದ ಶಾಲೆ ಪುನರುಜ್ಜೀವನ ತಾಳಿದೆ ಎಂದು ನಗರ ಪಾಲಿಕೆ ಮಾಜಿ ಸದಸ್ಯ ರಂಗಸ್ವಾಮಿ ತಿಳಿಸಿದರು.

ಇಂದು ಶತಮಾನೋತ್ಸವ ಕಾರ್ಯಕ್ರಮ: ತಿಲಕ್‌ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶತಮಾನೋತ್ಸವ ಸಂಭ್ರಮಾಚರಣೆಯನ್ನು ನಾಳೆ (ಮೇ 14) ಬೆಳಗ್ಗೆ 11 ಗಂಟೆಗೆ ಶಾಲೆಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸೇರಿದಂತೆ ಸ್ಥಳೀಯ ಜನಪ್ರತಿನಿಧಿಗಳು, ಮುಖಂಡರು ಭಾಗವಹಿಸಲಿದ್ದಾರೆ.

ಮಾಜಿ ಮೇಯರ್ ನಾರಾಯಣ್ ಎಂಎಲ್‌ಸಿ ಮಾಡಿ

ಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾ ಸಂಘದ ಆಗ್ರಹ

ಮೈಸೂರು, ಮೇ 13(ಜಿಎ)–ಮಾಜಿ ಮೇಯರ್ ನಾರಾಯಣ ಅವರಿಗೆ ವಿಧಾನ ಪರಿಷತ್ ಸದಸ್ಯತ್ವ ನೀಡುವ ನಿಟ್ಟಿನಲ್ಲಿ ಸಿಎಂ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ಪಕ್ಷದ ಮುಖಂಡರು ಗಮನಹರಿಸಬೇಕೆಂದು ರಾಜ್ಯ ನಗರಪಾಲಿಕೆ, ನಗರ ಸಭೆ, ಪುರಸಭೆಗಳ ಪೌರ ಕಾರ್ಮಿಕರ ಮಹಾ ಸಂಘದ ಜಿಲ್ಲಾಧ್ಯಕ್ಷ ಆರ್ಟಿಸ್ಟ್ ನಾಗರಾಜ್ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಐಪಿಡಿ ಸಾಲಪ್ಪ ಅವರಿಗೆ ಶಾಸಕ ಸ್ಥಾನ ನೀಡಿದ್ದನ್ನು ಬಿಟ್ಟರೆ ಇದುವರೆಗೂ ಈ ಸಮುದಾಯದವರಿಗೆ ಸೂಕ್ತ ರಾಜಕೀಯ ಪ್ರಾತಿನಿಧ್ಯ ಸಿಕ್ಕಿಲ್ಲ. ರಾಜ್ಯದಲ್ಲಿ ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿ ಸ್ವಚ್ಛತಾ ಕೆಲಸ ಮಾಡುವವರ ಸಂಖ್ಯೆ ಸುಮಾರು 75 ಸಾವಿರ ಇದೆ. ಇದೇ ರೀತಿ ಖಾಸಗಿ ವಲಯದಲ್ಲಿಯೂ ಸುಮಾರು 3 ಲಕ್ಷ ಜನರಿದ್ದು, ಇವರಲ್ಲಿ ಮಹಿಳೆಯರ ಸಂಖ್ಯೆ ಶೇ.80ರಷ್ಟಿದೆ. ಹೀಗಿದ್ದರೂ ಇಷ್ಟು ದೊಡ್ಡ ಪ್ರಮಾಣದ ಸ್ವಚ್ಛತಾ ಕಾರ್ಮಿಕರ ಬಗ್ಗೆ ಧ್ವನಿಯೆತ್ತುವವರು ಸರ್ಕಾರದಲ್ಲಿ ಯಾರೂ ಇಲ್ಲ. ಹೀಗಾಗಿ ಈ ಕೊರತೆ ನೀಗಿಸಲು ನಾರಾಯಣ ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಬೇಕೆಂದು ಕೋರಿದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ಉಪಾಧ್ಯಕ್ಷ ಆರ್.ಶಿವ, ಇನ್ನಿತರ ಪದಾಧಿಕಾರಿಗಳಾದ ಯತಿರಾಜ್, ಕೆ.ನಾಗರತ್ನ, ಎಂ.ಡಿ. ವೆಂಕಟೇಶ್ ಮತ್ತಿತರರು ಉಪಸ್ಥಿತರಿದ್ದರು.

ಟೀಕೆ ಬೆನ್ನಲ್ಲೇ ಜ್ಯೋತಿಷಿಗೆ ನೀಡಿದ್ದ ವಿಶೇಷ ಕರ್ತವ್ಯಾಧಿಕಾರಿ ಹುದ್ದೆ ಹಿಂಪಡೆದ ಸಿಎಂ ವಿಜಯ್!

ಚೆನ್ನೈ: ಟೀಕೆ ಬೆನ್ನಲ್ಲೇ ಜ್ಯೋತಿಷಿ ರಿಕಿ ರಾಧನ್ ಪಂಡಿತ್ ವೆಟ್ರಿವೇಲ್ ಅವರನ್ನು ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯ ಅಧಿಕಾರಿ ಆಗಿ ನೇಮಕ ಮಾಡಿಕೊಂಡ ಆದೇಶವನ್ನು ಸಿಎಂ ವಿಜಯ್ ಹಿಂಪಡೆದುಕೊಂಡಿದ್ದಾರೆ.



ನಿನ್ನೆಯಷ್ಟೇ (ಮೇ 12) ವಿಜಯ್ ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯ ಅಧಿಕಾರಿಯಾಗಿ ಜ್ಯೋತಿಷಿ ರಿಕಿ ರಾಧನ್ ಪಂಡಿತ್ ವೆಟ್ರಿವೇಲ್ ಅವರನ್ನು ನೇಮಕ ಮಾಡಿದ್ದರು. ಅದಾದ ಬಳಿಕ ಮಿತ್ರ ಪಕ್ಷಗಳಲ್ಲಿ ವಿರೋಧ ವ್ಯಕ್ತವಾಗಿತ್ತು. ಇದರ ಬೆನ್ನಲ್ಲೇ ಆದೇಶವನ್ನು ರದ್ದುಗೊಳಿಸಿದ್ದಾರೆ.

ವಿಶ್ವಾಸ ಮತ ಯಾಚನೆ ನಂತರ ಈ ನೇಮಕಾತಿಯನ್ನು ಮರುಪರಿಶೀಲಿಸುವುದಾಗಿ ಮುಖ್ಯಮಂತ್ರಿ ವಿಜಯ್ ತಿಳಿಸಿದ್ದರು. ರಾಜ್ಯ ರಾಜಕೀಯದಲ್ಲಿ ಅನಿಶ್ಚಿತತೆ ಉಂಟಾದ ಬಳಿಕ ಸರ್ಕಾರ ರಚಿಸಲು ತಮಿಳಗ ವೆಟ್ರಿ ಕಳಗಂ (ಟಿವಿಕೆಗೆ) ಹೊರಗಿನಿಂದ ಬೆಂಬಲ ನೀಡಿದ್ದ ಪಕ್ಷಗಳಲ್ಲೂ ಈ ನಿರ್ಧಾರ ಅಸಮಾಧಾನ ಮೂಡಿಸಿತ್ತು. ಟಿವಿಕೆ ಸರ್ಕಾರಕ್ಕೆ ಬೆಂಬಲ ನೀಡಿದ್ದ ವಿಸಿಕೆ ಪಕ್ಷದ ಶಾಸಕ ವನ್ನಿ ಅರಸು ವಿಧಾನಸಭೆಯಲ್ಲಿ ಸರ್ಕಾರದ ಕ್ರಮವನ್ನು ಪ್ರಶ್ನಿಸಿದ್ದರು.

ನಮ್ಮ ಸರ್ಕಾರ ಜ್ಯೋತಿಷ್ಯಕ್ಕಿಂತ ವೈಜ್ಞಾನಿಕ ಚಿಂತನೆಗೆ ಆದ್ಯತೆ ನೀಡಬೇಕು ಎಂದು ಅವರು ವಿಶ್ವಾಸಮತ ಯಾಚನೆಗೂ ಮುನ್ನ ಹೇಳಿದ್ದರು. ಸರ್ಕಾರಿ ವ್ಯವಸ್ಥೆಯಲ್ಲಿ ಜ್ಯೋತಿಷಿಗೆ ಔಪಚಾರಿಕ ಸಲಹಾ ಹುದ್ದೆಯನ್ನ ಏಕೆ ನೀಡಲಾಗಿದೆ ಎಂದು ತಮಿಳಗ ವೆಟ್ರಿ ಕಳಗಂ ಬೆಂಬಲಿತ ಕೆಲ ಪಕ್ಷದ ನಾಯಕರು ಪ್ರಶ್ನೆ ಮಾಡಿದ್ದರು. ಅಲ್ಲದೇ ಈ ನೇಮಕಾತಿ ಸ್ವೀಕಾರಾರ್ಹವಲ್ಲ ಎಂದು ಬೇಸರ ಹೊರಹಾಕಿದ್ದವು.

ಡಿಎಂಡಿಕೆ, ಬಿಜೆಪಿ ಕಿಡಿ: ಜ್ಯೋತಿಷಿ ನೇಮಕ ವಿಚಾರದಲ್ಲಿ ಡಿಎಂಡಿಕೆ ಪಕ್ಷ ಕೂಡ ಟಿವಿಕೆ ವಿರುದ್ಧ ವಾಗ್ದಾಳಿ ನಡೆಸಿದೆ. ವೃದ್ಧಾಚಲಂ ಕ್ಷೇತ್ರದ ಶಾಸಕಿ ಪ್ರೇಮಲತಾ ವಿಜಯಕಾಂತ್ ಮಾತನಾಡಿ, ಜ್ಯೋತಿಷಿಯನ್ನು ಒಎಸ್‌ಡಿ ಆಗಿ ನೇಮಕ ಮಾಡಿರುವುದು ಯುವಕರಿಗೆ ತಪ್ಪು ಸಂದೇಶ ರವಾನಿಸುತ್ತದೆ ಎಂದು ಆರೋಪಿಸಿದ್ದರು. ಅವರು ನಿಮ್ಮ ವೈಯಕ್ತಿಕ ಗುರುಗಳಾಗಿದ್ದರೆ ಖಾಸಗಿಯಾಗಿ ಇಟ್ಟುಕೊಳ್ಳಿ. ಆದರೆ ಸರ್ಕಾರದಲ್ಲಿ ಅಧಿಕೃತ ಸ್ಥಾನ ನೀಡುವುದು ಸರಿಯಲ್ಲ. ಯುವಕರು ನಿಮಗೆ ಮತ ನೀಡಿದ್ದಾರೆ. ಅವರಿಗೆ ಮಾದರಿಯಾಗುವಂತೆ ವರ್ತಿಸಿ ಎಂದರು. ಇದಕ್ಕೆ ಬೆಂಬಲವಾಗಿ ರಾಜ್ಯದ ಬಿಜೆಪಿ ಶಾಸಕ ಬೋಜರಾಜನ್.ಎಮ್ ಕೂಡ, ಜ್ಯೋತಿಷಿಯನ್ನು ಸರ್ಕಾರಿ ಅಧಿಕಾರಿಯಾಗಿ ನೇಮಿಸುವುದು ಜನರಿಗೆ ಕೆಟ್ಟ ಉದಾಹರಣೆ ಎಂದು ಟೀಕಿಸಿದರು.

ಡಿಎಂಕೆ ವ್ಯಂಗ್ಯ: ಈ ವಿವಾದದ ಕುರಿತು ಡಿಎಂಕೆ ಅತ್ಯಂತ ಕಟುವಾಗಿ ಪ್ರತಿಕ್ರಿಯಿಸಿದೆ. ಪಕ್ಷದ ವಕ್ತಾರ ಟಿಕೆಎಸ್ ಇಳಂಗೋವನ್ ವ್ಯಂಗ್ಯವಾಗಿ, ಇನ್ನು ಮುಂದೆ ಸಚಿವ ಸಂಪುಟ ಸಭೆಗಳಿಗೂ ಜ್ಯೋತಿಷಿಗಳೇ ಸಮಯ ನಿಗದಿಪಡಿಸುವಂತಾಗುತ್ತದೆ ಎಂದು ಹೇಳಿದರು.

ಸರ್ಕಾರಕ್ಕೆ ನಿಯಮ ಮತ್ತು ಆಡಳಿತದ ಬಗ್ಗೆ ಸಲಹೆ ನೀಡುವ ಅಧಿಕಾರಿಗಳು ಬೇಕು. ಜ್ಯೋತಿಷಿಗಳು ಭವಿಷ್ಯ ಹೇಳಬಹುದು ಅಷ್ಟೇ, ವಿಜಯ್ ಅವರಿಗೆ ತಮ್ಮ ಪಕ್ಷದ ಕಾರ್ಯಕರ್ತರಿಗಿಂತ ಜ್ಯೋತಿಷಿಯ ಮೇಲೆಯೇ ಹೆಚ್ಚು ನಂಬಿಕೆ ಇರುವಂತೆ ಕಾಣುತ್ತಿದೆ ಎಂದೂ ಕಿಡಿಕಾರಿದರು.

ಪೊಲೀಸ್ ಅಧಿಕಾರಿಗಳಿಗೆ ಸನ್ಮಾನ...


ಕೊಳ್ಳೇಗಾಲ ಉಪವಿಭಾಗದಿಂದ ವರ್ಗಾವಣೆಗೊಂಡು ನಂಜನಗೂಡು ಡಿವೈಎಸ್‌ಪಿ ಆಗಿ ಅಧಿಕಾರ ವಹಿಸಿಕೊಂಡ ಎಂ. ಧರ್ಮೇಂದ್ರ ಹಾಗೂ ಜಯಲಕ್ಷ್ಮಿಪುರಂ ಇನ್‌ಸ್ಪೆಕ್ಟರ್ ಪುರುಷೋತ್ತಮ್ ಜಿ. ಅವರನ್ನು 'ಲಾಗೈಡ್' ಕನ್ನಡ ಕಾನೂನು ಮಾಸಪತ್ರಿಕೆ ಗೌರವ ಸಂಪಾದಕರೂ ಆದ ಹಿರಿಯ ವಕೀಲರಾದ ಎಚ್.ಎನ್.ವೆಂಕಟೇಶ್ ಆತ್ಮೀಯವಾಗಿ ಸನ್ಮಾನಿಸಿದರು. ಈ ವೇಳೆ ಹಿರಿಯ ವಕೀಲರಾದ ಹರೀಶ್‌ಕುಮಾರ್ ಹೆಗ್ಡೆ, ನಗರ ಪಾಲಿಕೆ ಮಾಜಿ ಸದಸ್ಯ ಲೋಕೇಶ್ ಪಿಯಾ ಇನ್ನಿತರರು ಉಪಸ್ಥಿತರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಮೇ 13–ರಾಜೀವ್‌ನಗರ ವಿದ್ಯುತ್ ವಿತರಣಾ ಕೇಂದ್ರದ ವ್ಯಾಪ್ತಿಯಲ್ಲಿ ತ್ರೈಮಾಸಿಕ ಅವಧಿಯ ನಿರ್ವಹಣಾ ಕಾಮಗಾರಿ ಕೆಲಸದ ನಿಮಿತ್ತ ಮೇ 14 ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ಡಿ.ಟಿ.ಎಸ್ ರಾವ್ ನಗರ, ಸಾತಗಳ್ಳಿ, ಕಲ್ಯಾಣಗಿರಿ ನಗರ, ರಾಜೀವನಗರ 2ನೇ ಹಂತ, 3ನೇ ಹಂತ, ಎನ್.ಜಿ ಕರೀಂ ಬ್ಲಾಕ್, ಗುಪ್ತಾ ಸ್ಟೋರ್, ಅಲ್–ಬದರ್ ವೃತ್ತ, ಖುಬಾ ಮಸೀದಿ, ಸೂರ್ಯನಾರಾಯಣ ದೇವಸ್ಥಾನ ರಸ್ತೆ, ದಸ್ತಗೀರ್ ಫಂಕ್ಷನ್ ಹಾಲ್, ಕ್ರಿಶ್ಚಿಯನ್ ಕಾಲೋನಿ, ನಾಗರಾಜಪ್ಪ ಬಡಾವಣೆ, ಸದಾನಂದ ಆಸ್ಪತ್ರೆ, ರೇಷಮ್ ಉದ್ಯೋಗ್ ಬಡಾವಣೆ, ನಾರಾಯಣ ಹೃದಯಾಲಯ ಆಸ್ಪತ್ರೆ, ಪ್ರಜ್ವಲ್ ಆಸ್ಪತ್ರೆ, ಆರ್‌ಟಿಓ–55, ಡಾಲರ್ಸ್ ಕಾಲೋನಿ, ಆಶಿಯಾನ ಬಡಾವಣೆ, ಅಬ್ದುಲ್ ಕಲಾಂ ಬಡಾವಣೆ ಹಾಗೂ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ.

ಬಾರಾಮತಿ ವಿಮಾನ ನಿಲ್ದಾಣದಲ್ಲಿ ಮತ್ತೊಂದು ವಿಮಾನ ಪತನ

ಮುಂಬೈ: ಮಹಾರಾಷ್ಟ್ರದ ಪುಣೆಯಲ್ಲಿರುವ ಬಾರಾಮತಿ ವಿಮಾನ ನಿಲ್ದಾಣದ ಬಳಿ ಮತ್ತೊಂದು ವಿಮಾನ ಪತನಗೊಂಡಿದೆ.



ರೆಡ್‌ಬರ್ಡ್ ಫ್ಲೈಟ್ ಟ್ರೈನಿಂಗ್ ಅಕಾಡೆಮಿಗೆ ಸೇರಿದ ತರಬೇತಿ ವಿಮಾನವೊಂದು ತಾಂತ್ರಿಕ ದೋಷದಿಂದಾಗಿ ತುರ್ತು ಲ್ಯಾಂಡಿಂಗ್ ಮಾಡುವಾಗ ಪತನಗೊಂಡಿದೆ. ಈ ಘಟನೆಯಲ್ಲಿ ತರಬೇತಿ ನಿರತ ಪೈಲಟ್ ಯಾವುದೇ ಗಂಭೀರ ಗಾಯಗಳಿಲ್ಲದೆ ಸುರಕ್ಷಿತವಾಗಿ ಪಾರಾಗಿದ್ದಾರೆ. ಬುಧವಾರ ವಿಮಾನ ಪತನಗೊಂಡಿದೆ. ಪ್ರಾಥಮಿಕ ಮಾಹಿತಿಯ ಪ್ರಕಾರ ವಿಮಾನವು ಕಡಿಮೆ ಎತ್ತರದಲ್ಲಿ ಹಾರುತ್ತಿದ್ದಾಗ ತಾಂತ್ರಿಕ ದೋಷ ಕಾಣಿಸಿಕೊಂಡಿದೆ. ತುರ್ತು ಲ್ಯಾಂಡಿಂಗ್ ಮಾಡಲು ಪ್ರಯತ್ನಿಸಿದಾಗ ವಿಮಾನದ ಒಂದು ಭಾಗ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ನೆಲಕ್ಕೆ ಅಪ್ಪಳಿಸಿದೆ.

ಈ ಘಟನೆಯ ಕುರಿತು ಹೆಚ್ಚಿನ ತನಿಖೆ ನಡೆಯುತ್ತಿದ್ದು, ನಾಗರಿಕ ವಿಮಾನಯಾನ ಸಚಿವಾಲಯದ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ.

ಗಮನಾರ್ಹ ವಿಷಯವೆಂದರೆ ಜನವರಿ 28ರಂದು ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಮತ್ತು ಇತರ ನಾಲ್ವರು ಸಾವನ್ನಪ್ಪಿದ ಭೀಕರ ಲಿಯರ್‌ಜೆಟ್ 45 ವಿಮಾನ ಅಪಘಾತ ಸಂಭವಿಸಿದ ಗ್ರಾಮದ ವ್ಯಾಪ್ತಿಯಲ್ಲಿಯೇ ಈ ವಿಮಾನ ಪತಗೊಂಡಿದೆ.

ವಿದ್ವಾನ್ ಸುಮಂತ್ ಮಂಜುನಾಥ್, ವಿದುಷಿ ಮಾಳವಿ ಮಂಜುನಾಥ್‌ರಿಂದ ಪಿಟೀಲು ವಾದನ







ಮೈಸೂರು, ಮೇ 13– ಮೈಸೂರಿನ ವಿಜಯನಗರ ಮೊದಲ ಹಂತದಲ್ಲಿರುವ ಭಾರತೀಯ ವಿದ್ಯಾಭವನದ ವತಿಯಿಂದ ಮೇ 16ರಂದು ಸಂಜೆ 6 ಗಂಟೆಗೆ ಭಾರತೀಯ ವಿದ್ಯಾಭವನದ ತಾತಾಚಾರಿ ಸಭಾಂಗಣದಲ್ಲಿ ವಿದ್ವಾನ್ ಸುಮಂತ್ ಮಂಜುನಾಥ್ ಮತ್ತು ವಿದುಷಿ ಮಾಳವಿ ಮಂಜುನಾಥ್ ಅವರಿಂದ ಪಿಟೀಲು ವಾದನ ಏರ್ಪಡಿಸಲಾಗಿದೆ. ಪಕ್ಕವಾದ್ಯದಲ್ಲಿ ವಿದ್ವಾನ್ ಅದಮ್ಯ ರಮಾನಂದ್–ಪಿಟೀಲು ಮತ್ತು ವಿದ್ವಾನ್ ಶಮಿತ್‌ಗೌಡ–ಘಟಂನಲ್ಲಿ ಸಹಕಾರ ನೀಡಲಿದ್ದಾರೆ.

53,437 ಹುದ್ದೆಗಳ ಭರ್ತಿಯಲ್ಲಿ ಪರಿಶಿಷ್ಟ ಜಾತಿಗೆ ಅನ್ಯಾಯ

ಮೀಸಲಾತಿಯನ್ನು ಶೇ.3ರಿಂದ 7ಕ್ಕೆ ಹೆಚ್ಚಿಸಲು ಆಗ್ರಹ


ಮೈಸೂರಿನ ಜಲದರ್ಶಿನಿಯಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಪರಿಶಿಷ್ಟ ಪಂಗಡ ಸಂಘಟನೆಗಳ ಒಕ್ಕೂಟದ ಮುಖಂಡರು ಮಾತನಾಡಿದರು.

ಮೈಸೂರು, ಮೇ.13(ಜಿಎ)–ರಾಜ್ಯ ಸರ್ಕಾರ ಪ್ರಸ್ತುತ ಭರ್ತಿ ಮಾಡುತ್ತಿರುವ 53,437 ಸರ್ಕಾರಿ ಹುದ್ದೆಗಳಲ್ಲಿ ಪರಿಶಿಷ್ಟ ಪಂಗಡಕ್ಕೆ ಕೇವಲ ಶೇ.3 ಮೀಸಲಾತಿ ನಿಗದಿ ಮಾಡಿರುವುದು ಭಾರಿ ಅನ್ಯಾಯ, ಮೀಸಲಾತಿಯನ್ನು ಶೇ.7ಕ್ಕೆ ಹೆಚ್ಚಿಸಬೇಕು ಹಾಗೂ ಕಾಯ್ದೆಯನ್ನು ನ್ಯಾಯಾಂಗ ಪರಿಶೀಲನೆಯಿಂದ ರಕ್ಷಿಸಲು ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿಸಬೇಕೆಂದು ಕರ್ನಾಟಕ ರಾಜ್ಯ ಪರಿಶಿಷ್ಟ ಪಂಗಡ ಸಂಘಟನೆಗಳ ಒಕ್ಕೂಟದ ಮೈಸೂರು ಜಿಲ್ಲೆಯ ಮುಖಂಡರಾದ ದ್ಯಾವಪ್ಪ ನಾಯಕ ಒತ್ತಾಯಿಸಿದರು.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮುದಾಯದ ಸ್ವಾಮೀಜಿಗಳ ನೇತೃತ್ವದಲ್ಲಿ ನಡೆದ ಹೋರಾಟದ ಫಲವಾಗಿ ಸಮುದಾಯಕ್ಕೆ ಶೇ.7 ಮೀಸಲಾತಿ ದೊರಕಿತ್ತು. ರಾಜಕೀಯವಾಗಿ ನಮಗೆ ಶೇ.7 ಮೀಸಲಾತಿ ದೊರಕಿದೆ. ಇದರಿಂದಾಗಿ ನಮ್ಮಲ್ಲಿ 15 ಶಾಸಕರು ಇದ್ದಾರೆ. ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲೂ ಶೇ.7 ಮೀಸಲಾತಿ ದೊರಕಿದೆ. ಆದರೆ, ಉದ್ಯೋಗ ಮತ್ತು ಶಿಕ್ಷಣದಲ್ಲಿ ಮಾತ್ರ ನಮಗೆ ಶೇ.7 ಮೀಸಲಾತಿ ಜಾರಿಯಾಗಿಲ್ಲ ಎಂದು ಬೇಸರಿಸಿದರು.

ಸಮುದಾಯದವರು ಶಿಕ್ಷಣವಂತರಾಗುತ್ತಾರೆ. ಉದ್ಯೋಗ ಪಡೆಯುತ್ತಾರೆ. ಅದನ್ನು ತಡೆಗಟ್ಟಬೇಕು ಎಂಬ ಹುನ್ನಾರವೂ ನಡೆದಿದೆ. ಕೂಡಲೇ ಸರ್ಕಾರ ಪ್ರಸ್ತುತ 53,437 ಹುದ್ದೆಗಳ ನೇಮಕಾತಿಯಲ್ಲಿ ಶೇ.7 ಮೀಸಲಾತಿ ನಿಗದಿ ಮಾಡಬೇಕು. ಇದಕ್ಕೂ ಮುನ್ನ ಕಾಯ್ದೆಯನ್ನು ನ್ಯಾಯಾಂಗ ಪರಿಶೀಲನೆಯಿಂದ ರಕ್ಷಿಸಲು ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿಸಬೇಕು. ರಾಜ್ಯ ಮತ್ತು ಕೇಂದ್ರ ಸರ್ಕಾರ ನಮ್ಮ ಪರವಾಗಿ ನಿಲ್ಲಬೇಕು. ಇಲ್ಲದೇ ಇದ್ದಲ್ಲಿ ನಮ್ಮ ಸಂಘಟನೆಯಿಂದ ಸಭೆ ಕರೆದು ರಾಜ್ಯವ್ಯಾಪಿ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಮುಖಂಡರಾದ ಎಸ್.ಆರ್.ನಾಯಕ ಮಾತನಾಡಿ, ಉತ್ತರ ಕರ್ನಾಟಕ ಭಾಗದಲ್ಲಿ ಪರಿಶಿಷ್ಟ ಪಂಗಡಗಳ ಹೆಸರಲ್ಲಿ ಸಾಕಷ್ಟು ಜನರು ನಕಲಿ ಪ್ರಮಾಣ ಪತ್ರ ಮಾಡಿಸಿದ್ದಾರೆ. ಸರ್ಕಾರ ಕೂಡಲೇ ಈ ಬಗ್ಗೆ ತನಿಖೆ ನಡೆಸಿ ನಕಲಿ ಪ್ರಮಾಣ ಪತ್ರಗಳನ್ನು ರದ್ದು ಮಾಡಬೇಕು. ಒಂದು ವೇಳೆ ನಕಲಿ ಪ್ರಮಾಣ ಪತ್ರ ಬಳಸಿ ಉದ್ಯೋಗ ಪಡೆದಿದ್ದಲ್ಲಿ ಅವರನ್ನು ವಜಾ ಮಾಡಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಪರಿಶಿಷ್ಟ ಪಂಗಡ ಸಂಘಟನೆಗಳ ಒಕ್ಕೂಟದ ಪದಾಧಿಕಾರಿಗಳಾದ ಸಿರಿಗೆರೆ ತಿಪ್ಪೇಶ, ತುಮಕೂರು ಶ್ರೀಧರ, ಬೆಂಗಳೂರಿನ ಲಕ್ಷ್ಮಿಪತಿ, ಮಾರುತಿ ನಾಯಕ, ನಾರಾಯಣಸ್ವಾಮಿ ಮಾಲೂರು, ನಾಗರಾಜು ಅಶ್ವತ್ಥಪ್ಪ, ಬೆಂಗಳೂರು ಕಲಾವತಿ, ವಿಮಲಾ ವಾಣಿ, ಸುರೇಶ ಕುಮಾರಬೀಡು, ಸಾಯಿರಾಮ್, ರಾಜು, ಕಲ್ಲಹಳ್ಳಿ ಕೃಷ್ಣ, ಹಂಚ್ಯಾ ರವಿ, ದೀಪಿಕಾ, ಪುಟ್ಟರಾಜು ಮತ್ತಿತರರು ಉಪಸ್ಥಿತರಿದ್ದರು.

ನೀಟ್ ಪ್ರಶ್ನೆ ಪತ್ರಿಕೆ ಬಯಲು ದೊಡ್ಡ ದುರಂತ

ಬೆಂಗಳೂರು, ಮೇ 13(ಕೆಎಂಶಿ)– ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರೇ ಉತ್ತರ ನೀಡಬೇಕು ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಆಗ್ರಹಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಶ್ನೆ ಪತ್ರಿಕೆ ಸೋರಿಕೆ ದೊಡ್ಡ ದುರಂತ. ಮಕ್ಕಳು ಕಷ್ಟ ಪಟ್ಟು ಅಭ್ಯಾಸ ಮಾಡಿರುತ್ತಾರೆ. ಇದೀಗ ಪರೀಕ್ಷೆಗಳನ್ನೇ ಬುಲ್ಡೋಜ್ ಮಾಡುವ ಸಂಪ್ರದಾಯ ಬಂದಿದೆ ಎಂದರು. ಇದುವರೆಗೂ ಆರು ಬಾರಿ ಸೋರಿಕೆ ಆಗಿದ್ದರೂ ಎನ್‌ಟಿಎ ಬಿಗಿ ಕ್ರಮಗಳನ್ನು ಕೈಗೊಂಡಿಲ್ಲ. ಇದರ ಜವಾಬ್ದಾರಿಯನ್ನು ಪ್ರಧಾನಿ ಮೋದಿ ಹಾಗೂ ಸಂಬಂಧಪಟ್ಟ ಕೇಂದ್ರ ಸಚಿವರು ಹೊರಬೇಕು ಎಂದು ಆಗ್ರಹಿಸಿದರು.



ದೇಶ - ವಿದೇಶ

ತ್ರಿಶಾಗೆ ಸಿಎಂ ವಿಜಯ್ ಬಿಗ್ ಗಿಫ್ಟ್

ಚೆನ್ನೈ: ಸಿಎಂ ಆದ ಬೆನ್ನಲ್ಲೇ ವಿಜಯ್ ನಟಿ ತ್ರಿಶಾ ನಟನೆಯ 'ಕರುಪ್ಪ್' ಸಿನಿಮಾದ ಮಾರ್ನಿಂಗ್ ಶೋಗೆ ಸ್ಪೆಷಲ್ ಪರ್ಮಿಷನ್ ಕೊಟ್ಟಿದ್ದಾರೆ. ಮೇ 14ರಂದು ತ್ರಿಶಾ ಮತ್ತು ಸೂರ್ಯ ಅಭಿನಯದ 'ಕರುಪ್ಪ್' ಸಿನಿಮಾ ತೆರೆಕಾಣಲಿದ್ದು, ಬೆಳಿಗ್ಗೆ 9 ಗಂಟೆಯ ಫಸ್ಟ್ ಶೋಗೆ ವಿಶೇಷ ಅನುಮತಿ ನೀಡಿದ್ದಾರೆ. ವಿಜಯ್ ಅವರ ಈ ನಡೆ ತಮಿಳು ಚಲನಚಿತ್ರೋದ್ಯಮದಲ್ಲಿ ಗಮನ ಸೆಳೆಯುವಂತೆ ಮಾಡಿದೆ. ಕರುಪ್ಪ್ ಸಿನಿಮಾಗೆ ಸಿಎಂ ವಿಜಯ್ ಅವರು ದಿನಕ್ಕೆ 5 ಶೋಗಳಿಗೆ ಅನುಮತಿ ನೀಡಿದ್ದಾರೆ. ಜೊತೆಗೆ ಶೋ ಸಮಯದಲ್ಲಿ ಚಿತ್ರಮಂದಿರದ ಮಾಲೀಕರು ಜನದಟ್ಟಣೆ ನಿಯಂತ್ರಿಸುವ ಜವಾಬ್ದಾರಿ ಹೊತ್ತುಕೊಂಡಿದ್ದಾರೆ. ಈ ಕುರಿತು ಕರುಪ್ಪ್ ಸಿನಿಮಾ ತಂಡ ಬೆಳಿಗ್ಗೆ 9 ಗಂಟೆಯ ಶೋಗೆ ವಿಶೇಷ ಅನುಮತಿ ನೀಡಿದ್ದಕ್ಕಾಗಿ ಧನ್ಯವಾದ ತಿಳಿಸಿದ್ದಾರೆ. ಆರ್‌ಜೆ ಬಾಲಾಜಿ ನಿರ್ದೇಶನದ 'ಕರುಪ್ಪ್' ಸಿನಿಮಾದಲ್ಲಿ ಸೂರ್ಯ ಮತ್ತು ತ್ರಿಶಾ ಕೃಷ್ಣನ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದು, ಮೇ 14ರಂದು ತೆರೆಕಾಣಲಿದೆ. ತಮಿಳುನಾಡಿನಲ್ಲಿ ಬೆಳಿಗ್ಗೆ 9 ಗಂಟೆಗಿಂತ ಮುಂಚೆ ಥಿಯೇಟರ್‌ಗಳಲ್ಲಿ ಸಿನಿಮಾ ಶೋಗೆ ಅವಕಾಶವಿಲ್ಲ. ಸಿನಿಮಾ ರಿಲೀಸ್ ಆದ ಮೊದಲ ದಿನ ಫಸ್ಟ್ ಶೋ ವೇಳೆ ಅಭಿಮಾನಿಗಳ ಅತಿರೇಕದ ವರ್ತನೆ, ಟ್ರಾಫಿಕ್ ಸಮಸ್ಯೆ, ಅನಾಹುತಗಳನ್ನು ತಪ್ಪಿಸುವ ಉದ್ದೇಶದಿಂದ ಈ ನಿರ್ಧಾರ ಕೈಗೊಂಡಿದ್ದಾರೆ.



ಇರಾನ್ ಯುದ್ಧದ ವಿಚಾರದಲ್ಲಿ ಚೀನಾದ ನೆರವಿನ ಅಗತ್ಯವಿಲ್ಲ

ವಾಷಿಂಗ್ಟನ್: ಇರಾನ್ ಯುದ್ಧದ ವಿಷಯದಲ್ಲಿ ಚೀನಾದ ನೆರವಿನ ಅಗತ್ಯವಿಲ್ಲ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.



ಚೀನಾ ಭೇಟಿಗೂ ಮುನ್ನ ವಾಷಿಂಗ್ಟನ್‌ನಲ್ಲಿ ಮಾಧ್ಯಮದವರೊಂದಿಗೆ ಪ್ರತಿಕ್ರಿಯಿಸಿದ ಟ್ರಂಪ್, ನಾವು ಶಾಂತಿಯುತವಾಗಿ ಅಥವಾ ಬೇರೆ ರೀತಿಯಲ್ಲಿ ಜಯಿಸಲಿದ್ದೇವೆ ಎಂದು ಹೇಳಿದ್ದಾರೆ. ಯಾವುದೇ ಕಾರಣಕ್ಕೂ ಇರಾನ್‌ಗೆ ಅಣ್ವಸ್ತ್ರ ಹೊಂದಲು ಬಿಡುವುದಿಲ್ಲ ಎಂದು ಹೇಳಿದ್ದಾರೆ. ಇರಾನ್ ಯುದ್ಧ ವಿಷಯದಲ್ಲಿ ಚೀನಾದ ಹಸ್ತಕ್ಷೇಪವನ್ನು ನಿರೀಕ್ಷಿಸುತ್ತೀರಾ ಎಂದು ಕೇಳಿದಾಗ, 'ಇಲ್ಲ ಇರಾನ್ ವಿಚಾರದಲ್ಲಿ ನಮಗೆ ಯಾವುದೇ ಸಹಾಯಬೇಕಿಲ್ಲ. ನಾವು ಅದನ್ನು ಒಂದಲ್ಲ ಒಂದು ರೀತಿಯಲ್ಲಿ ಗೆಲ್ಲುತ್ತೇವೆ. ಶಾಂತಿಯುತವಾಗಿ ಅಥವಾ ಬೇರೆ ರೀತಿಯಲ್ಲಿ. ನೌಕಾ ಪಡೆ, ವಾಯುಪಡೆ ಯುದ್ಧದಲ್ಲಿ ನಿಯಂತ್ರಣ ಸಾಧಿಸಿವೆ' ಎಂದಿದ್ದಾರೆ. 'ಇರಾನ್ ಮೇಲೆ ವಿಧಿಸಿರುವ ದಿಗ್ಬಂದನವನ್ನು ಶೇ.100ರಷ್ಟು ಪರಿಣಾಮಕಾರಿ' ಎಂದು ಟ್ರಂಪ್ ಹೇಳಿದ್ದಾರೆ. ಏತನ್ಮಧ್ಯೆ ನ್ಯಾಟೊ ವಿರುದ್ಧ ಟ್ರಂಪ್ ಮತ್ತೊಮ್ಮೆ ವಾಗ್ದಾಳಿ ನಡೆಸಿದ್ದಾರೆ. ನಮಗೆ ಅಗತ್ಯವಿದ್ದಾಗ ನ್ಯಾಟೊ ನೆರವಿಗೆ ಬಂದಿಲ್ಲ. ನಮಗೆ ಅದರ ಅಗತ್ಯವಿಲ್ಲ ಎಂದು ಪುನರುಚ್ಚಿಸಿದ್ದಾರೆ.

ಮಣಿಪುರದಲ್ಲಿ ಮೂವರು ಕ್ರೈಸ್ತ ನಾಯಕರ ಹತ್ಯೆ

ಇಂಫಾಲ್: ಮಣಿಪುರದಲ್ಲಿ ಬುಧವಾರ ಬೆಳಗ್ಗೆ ಚರ್ಚ್ ಅಧಿಕಾರಿಗಳ ನಿಯೋಗದ ಮೇಲೆ ಉಗ್ರರು ಹೊಂಚು ಹಾಕಿ ದಾಳಿ ನಡೆಸಿದ್ದು, ದಾಳಿಯಲ್ಲಿ ಮೂವರು ಕುಕಿ ಚರ್ಚ್ ನಾಯಕರು ಮೃತಪಟ್ಟಿದ್ದಾರೆ ಮತ್ತು ನಾಲ್ವರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ದಾಳಿ ನಡೆದಾಗ ಥಡೌ ಬ್ಯಾಪ್ಟಿಸ್ಟ್ ಅಸೋಸಿಯೇಷನ್ ಮತ್ತು ಯುನೈಟೆಡ್ ಬ್ಯಾಪ್ಟಿಸ್ಟ್ ಕೌನ್ಸಿಲ್‌ಗೆ ಸೇರಿದ ನಿಯೋಗ, ಚುರಚಂದ್ ಪುರದಿಂದ ಕಾಂಗ್ ಪೋಕ್ಪಿಗೆ ಅಂತರ–ಸಂಘಟನೆಯ ಚರ್ಚ್ ಸಭೆಗೆ ತೆರಳುತ್ತಿದ್ದರು.

ಮೃತರನ್ನು ಟಿಬಿಎ ಅಧ್ಯಕ್ಷ ರೆವ್ ವಿ ಸಿಟ್ಲೆಹೌ, ರೆವ್ ವಿ ಕೈಗೌಲುನ್ ಮತ್ತು ಪಾದ್ರಿ ಪಾಗೊಲೆನ್ ಎಂದು ಗುರುತಿಸಲಾಗಿದೆ. ರೆವ್ ಸಿಟ್ಲೆಹೌ ತಂಡವನ್ನು ಮುನ್ನಡೆಸುತ್ತಿದ್ದರು, ಇದರಲ್ಲಿ ರೆವ್ ಎಸ್‌ಎಂ ಹಾವು, ರೆವ್ ಹೆಕ್ಕೈ ಸಿಮ್ಟೆ, ರೆವ್ ಪಾವೊ ಥಾಂಗ್ ಮತ್ತು ಚಾಲಕ ಗೌಮಾಂಗ್ ಕೂಡ ಇದ್ದರು. ಘಟನೆಯಲ್ಲಿ ಇತರ ನಾಲ್ವರು ಗಾಯ ಗೊಂಡಿದ್ದಾರೆ.

ಉಗ್ರರ ದಾಳಿಯ ನಂತರ, ಪ್ರತಿಭಟನೆಯ ಭಾಗವಾಗಿ ಥಡೌ ಸಂಘಟನೆಗಳು ಕಾಂಗ್‌ಪೋಕ್ಪಿ ಜಿಲ್ಲೆಯ ಸದರ್ ಹಿಲ್ಸ್‌ನಲ್ಲಿ ಸಂಪೂರ್ಣ ಬಂದ್ ಘೋಷಿಸಿವೆ.

ಪಶ್ಚಿಮ ಬಂಗಾಳ ಸರ್ಕಾರದ ಗಡಿ–ಬೇಲಿ ಯೋಜನೆಗೆ ಬಾಂಗ್ಲಾದೇಶ ಆಕ್ಷೇಪ

ಢಾಕಾ: ಪಶ್ಚಿಮ ಬಂಗಾಳದ ಹೊಸ ಬಿಜೆಪಿ ಸರ್ಕಾರವು ಬಾಂಗ್ಲಾದೇಶದ ಗಡಿಯಲ್ಲಿ ಬೇಲಿ ಹಾಕಲು ಗಡಿ ಭದ್ರತಾ ಪಡೆ (ಬಿಎಸ್‌ಎಫ್)ಗೆ ಭೂಮಿಯನ್ನು ಹಸ್ತಾಂತರಿಸುವುದಾಗಿ ಘೋಷಿಸಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ಬಾಂಗ್ಲಾದೇಶ ಸರ್ಕಾರ, ಮುಳ್ಳುತಂತಿಯಿಂದ ಢಾಕಾವನ್ನು ಬೆದರಿಸಲು ಸಾಧ್ಯವಿಲ್ಲ ಎಂದು ಹೇಳಿದೆ. ಬಾಂಗ್ಲಾದೇಶದ ಜನತೆ ಮುಳ್ಳುತಂತಿಗೆ ಹೆದರುವುದಿಲ್ಲ. ಬಾಂಗ್ಲಾದೇಶದ ಸರ್ಕಾರವೂ ಹೆದರುವುದಿಲ್ಲ. ನಾವು ಎಲ್ಲಿ ಮಾತನಾಡಬೇಕೋ ಅಲ್ಲಿ ಮಾತನಾಡುತ್ತೇವೆ ಎಂದು ಬಾಂಗ್ಲಾ ಪ್ರಧಾನಿಯ ವಿದೇಶಾಂಗ ವ್ಯವಹಾರ ಸಲಹೆಗಾರ ಹುಮಾಯೂನ್ ಹೇಳಿದ್ದಾರೆ. ಚುನಾವಣೆಯ ವಾಕ್ಚಾತುರ್ಯ ಮತ್ತು ನಿಜವಾದ ಆಡಳಿತವು ಎರಡು ವಿಭಿನ್ನ ವಿಷಯಗಳಾಗಿವೆ. ಪಶ್ಚಿಮ ಬಂಗಾಳದ ಸರ್ಕಾರವು ಆಡಳಿತದಲ್ಲಿ ಚುನಾವಣಾ ವಾಕ್ಚಾತುರ್ಯವನ್ನು ಅನುಸರಿಸುತ್ತದೆಯೇ ಎಂಬುದನ್ನು ನೋಡಲು ಬಾಂಗ್ಲಾದೇಶ ಬಯಸುತ್ತದೆ ಎಂದು ಹೇಳಿದ್ದಾರೆ. ಭಾರತ ಸರ್ಕಾರವು ಜನರಿಂದ–ಜನರ ನಡುವಿನ ಸಂಬಂಧವನ್ನು ಬಲಪಡಿಸಲು ಬಯಸಿದರೆ ಗಡಿ ವಿವಾದಗಳನ್ನು ಪರಿಹರಿಸುವಲ್ಲಿ ಹೆಚ್ಚು ಮಾನವೀಯ ವಿಧಾನವನ್ನು ಅಳವಡಿಸಿಕೊಳ್ಳಬೇಕು ಎಂದು ಪ್ರತಿಪಾದಿಸಿರುವುದಾಗಿ ವರದಿಯಾಗಿದೆ.



ನಾಪತ್ತೆಯಾಗಿದ್ದ ಮುದ್ದಿನ ಶ್ವಾನ 'ಕದ್ದು' ದ್ವಾರಕಾದಲ್ಲಿ ಪತ್ತೆ!

ನವದೆಹಲಿ: ಕಳೆದ ಕೆಲ ತಿಂಗಳ ಹಿಂದೆ ನಾಪತ್ತೆಯಾಗಿದ್ದ ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸಿಬ್ಬಂದಿ ಮತ್ತು ಪ್ರಯಾಣಿಕರ ಅಚ್ಚುಮೆಚ್ಚಿನ ಶ್ವಾನ ಕದ್ದು ಕೊನೆಗೂ ಪತ್ತೆಯಾಗಿದೆ.



ದೆಹಲಿಯ ದ್ವಾರಕಾ ಪ್ರದೇಶದಲ್ಲಿ ಕದ್ದು ಸುರಕ್ಷಿತವಾಗಿ ಪತ್ತೆಯಾಗಿರುವ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿಯಾಗಿದೆ. ಈ ಕುರಿತು ತನ್ಯಾ ಎಂಬುವವರು ಸಾಮಾಜಿಕ ಜಾಲತಾಣದಲ್ಲಿ ವೀಡಿಯೊ ಹಂಚಿಕೊಂಡಿದ್ದು, ತಿಂಗಳುಗಳ ಸತತ ಹುಡುಕಾಟದ ನಂತರ ಕದ್ದು ಕೊನೆಗೂ ಸಿಕ್ಕಿದ್ದಾಳೆ, ಆಕೆ ಈಗ ಸುರಕ್ಷಿತವಾಗಿದ್ದಾಳೆ ಎಂದು ಬರೆದುಕೊಂಡಿದ್ದಾರೆ.

ಸೇವ್ ದೆಹಲಿ ಎನ್‌ಸಿಆರ್ ಡಾಗ್ಸ್ ಎಂಬ ಪ್ರಾಣಿ ಕಲ್ಯಾಣ ಸಂಸ್ಥೆಯು ಶ್ವಾನದ ಪುನರ್ಮಿಲನದ ಭಾವುಕ ವೀಡಿಯೊವನ್ನು ಇನ್‌ಸ್ಟಾಗ್ರಾಮ್‌ನಲ್ಲಿ ಹಂಚಿಕೊಂಡಿದೆ. ಕಾರ್ಯಕರ್ತೆಯೊಬ್ಬರು 'ಕದ್ದು' ನೋಡಿ ಕಣ್ಣೀರು ಹಾಕುತ್ತಿರುವ ದೃಶ್ಯ ಈ ವೀಡಿಯೊದಲ್ಲಿದೆ. ವಿಮಾನ ನಿಲ್ದಾಣದ ಸಿಬ್ಬಂದಿ ಮತ್ತು ಪ್ರಯಾಣಿಕರ ನೆಚ್ಚಿನ ಶ್ವಾನವಾಗಿದ್ದ ಕದ್ದು, ಮಾರ್ಚ್ 26ರಿಂದ ನಾಪತ್ತೆಯಾಗಿದ್ದಳು. ಹಲ್ಲುಗಳಿಲ್ಲದ, ಅತ್ಯಂತ ಶಾಂತ ಸ್ವಭಾವದ ಈ ನಾಯಿ ಏಕಾಏಕಿ ನಾಪತ್ತೆಯಾದದ್ದು ದೊಡ್ಡ ವಿವಾದಕ್ಕೆ ಕಾರಣವಾಗಿತ್ತು.

ಗಡಿನಾಡ ಉತ್ಸವ, ಗ್ರಾಮೋತ್ಸವ ಹಳ್ಳಿಗೂ ತಲುಪಲಿ



ಅರೆಭಾಷೆ ಗಡಿನಾಡ ಉತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಶಾಸಕ ಎ.ಎಸ್. ಪೊನ್ನಣ್ಣ ಮಾತನಾಡಿದರು.

ವಿರಾಜಪೇಟೆ, ಮೇ.13–ಗಡಿನಾಡ ಉತ್ಸವ, ಗ್ರಾಮೋತ್ಸವ ಕಾರ್ಯಕ್ರಮ ಗಳು ಹಳ್ಳಿಗಳಿಗೂ ತಲುಪಿದಾಗ ಮಾತ್ರ ಅರೆಭಾಷೆ, ಸಂಸ್ಕೃತಿ, ಸಾಹಿತ್ಯ, ಪರಂಪರೆ ಮತ್ತಷ್ಟು ಗಟ್ಟಿಗೊಳಿಸಲು ಅನುಕೂಲ ವಾಗುತ್ತದೆ ಎಂದು ಶಾಸಕ ಎಂ.ಎಸ್. ಪೊನ್ನಣ್ಣ ತಿಳಿಸಿದ್ದಾರೆ.

ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯಿಂದ ತಾಲೂಕಿನ ಕೆದ ಮುಳ್ಳೂರು ಗ್ರಾಮದ ತೋರ ಸಮುದಾಯ ಭವನದ ಆವರಣದಲ್ಲಿ ನಡೆದ ಅರೆಭಾಷೆ ಗಡಿನಾಡ ಉತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಮದೆನಾಡು ಬಳಿ ಕೊಡಗು ಗೌಡ ಸಮಾಜದ ಅಭಿವೃದ್ಧಿಗೆ ಸರ್ಕಾರದಿಂದ 6ಎಕರೆ ಭೂಮಿ ಕಾಯ್ದಿರಿಸಿದೆ. ಹಾಗೆಯೇ ಭಾಗ ಮಂಡಲ ಗೌಡ ಸಮಾಜದ ನೂತನ ಕಟ್ಟಡ ನಿರ್ಮಾಣಕ್ಕೆ ಕೋಟಿ ರೂ. ನಿಗದಿ ಮಾಡಿದೆ. ಯಾವುದೇ ಒಂದು ಭಾಷೆಗೆ ಗಡಿ ಇಲ್ಲ. ಭಾಷೆಯನ್ನು ಮತ್ತಷ್ಟು ವಿಸ್ತರಿಸಿ ಬೆಳೆಸುವಲ್ಲಿ ಶ್ರಮಿಸಬೇಕು. ಆ ನಿಟ್ಟಿನಲ್ಲಿ ಕುಟುಂಬದಿಂದಲೇ ಭಾಷೆ ಬೆಳವಣಿಗೆಗೆ ಪ್ರಯತ್ನಗಳು ನಡೆಯಬೇಕು. ಭಾಷೆ ಉಳಿದರೆ ಜನಾಂಗ ಉಳಿಯುತ್ತದೆ ಎಂಬುದನ್ನು ಮರೆಯಬಾರದು ಎಂದರು.

ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ ಮಾತನಾಡಿ, ಅಕಾಡೆಮಿ ವತಿಯಿಂದ ಸುಳ್ಯ ತಾಲೂಕಿನ ಬಂದ್ಯಡ್ಕ, ಮಂಡೆ ಕೋಲು, ಮಡಿಕೇರಿ ತಾಲೂಕಿನ ಚೆಯ್ಯಂಡಾಣಿ, ಸೇರಿದಂತೆ ವಿವಿಧ ಕಡೆಗಳಲ್ಲಿ ಗಡಿನಾಡ ಉತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಹಾಗೆಯೇ ಅರೆ ಭಾಷೆಯನ್ನು ಎಲ್ಲೆಡೆ ಪಸರಿಸುವಲ್ಲಿ ತ್ರೈಮಾಸಿಕ 'ಹಿಂಗಾರ'ವನ್ನು ಪ್ರಕಟಿಸಲಾಗುತ್ತಿದ್ದು, ಈ ಅವಕಾಶವನ್ನು ಬಳಸಿಕೊಳ್ಳಬೇಕು ಎಂದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಟಿ.ಎಂ.ಧರ್ಮಜ ಉತ್ತಪ್ಪ, ಕೆದಮುಳ್ಳೂರು ಗ್ರಾಮದ ಅರೆ ಭಾಷೆ ಸಂಸ್ಕೃತಿ ಮತ್ತು ಅಭಿವೃದ್ಧಿ ಸಂಘದ ಅಧ್ಯಕ್ಷ ಪೊಕ್ಕುಳಂಡ್ರ ಎಸ್. ದಿನೇಶ್, ಗೌಡ ಸಮಾಜದ ಅಧ್ಯಕ್ಷ ಮುಕ್ಕಾಟಿ ವಾಸು, ಮಡಿಕೇರಿ ಕೊಡಗು ಗೌಡ ಸಮಾ ಜದ ನಿರ್ದೇಶಕ ತೋಟಂ ಬೈಲು ಕುಮಾರ, ಸದಸ್ಯ ಸಂಚಾಲಕ ಸೂದನ ಎಸ್.ಈರಪ್ಪ, ಸದಸ್ಯ ಸಂಚಾಲಕ ಮೋಹನ್ ಪೊನ್ನಚನ ಮಾತನಾಡಿದರು.

ಕೆದಮುಳ್ಳೂರು ಗ್ರಾಮದ ಜಾನಪದ ವಿಭಾಗದ ರಾಜ್ಯ ಪ್ರಶಸ್ತಿ ಪುರಸ್ಕೃತ ಕುಡಿಯರ ಬಿ.ಅಮ್ಮುಣಿ, ಹಿರಿಯರಾದ ಪೊಕ್ಕುಳಂಡ್ರ ಕೆ.ಪಾಪಯ್ಯ, ತೋಟಂ ಬೈಲು ರಾಜು(ಪೆಮ್ಮಯ್ಯ) ಅವರನ್ನು ಸನ್ಮಾನಿಸಲಾಯಿತು. ನರಿಯಂದಡ ಅಯ್ಯಪ್ಪ ಯುವಕ ಸಂಘದ ಅಧ್ಯಕ್ಷ ಬೋಳಿಯಂಡ್ರ ಹರಿಪ್ರಸಾದ್, ಅಕಾಡೆಮಿ ಸದಸ್ಯ ಪೂಳಕಂಡ ಎಂ., ಸಂದೀಪ್, ತೇಜಕುಮಾರ್ ಕುಡೆಕಲ್ಲು, ಡಾ. ಎನ್.ಎ.ಜ್ಞಾನೇಶ್, ಲತಾ ಪ್ರಸಾದ್ ಕುದ್ಪಾಜೆ, ಕುದುಪಜೆ ಕೆ.ಪ್ರಕಾಶ್ ಇತರರು ಇದ್ದರು.

ಉಳುವಾರನ ರೋಷನ್, ಕಲುಮುಟ್ಲು ಜಸ್ಮಿ ಮತ್ತು ಚೈತ್ರ ನಿರೂಪಿಸಿದರು. ಬೈಮನ ಪ್ರೇಮ ಪ್ರಾರ್ಥಿಸಿದರು. ಸೂದನ ಈರಪ್ಪ ಸ್ವಾಗತಿಸಿದರು. ಅಕಾಡೆಮಿ ರಿಜಿಸ್ಟ್ರಾರ್ ಚಿನ್ನಸ್ವಾಮಿ ವಂದಿಸಿದರು

ಬಿ.ಎಸ್.ಗೋಪಿಕ್ ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್ ಐಬಿಆರ್ ಸಾಧಕ


ಬಿ.ಎಸ್.ಗೋಪಿಕ್

ನಾಪೋಕ್ಲು, ಮೇ 13–ಹೊಸ ಕೋಟೆ ಗ್ರಾಮದ ಬಿ.ಎಸ್.ಗೋಪಿಕ್ ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್ ಐಬಿಆರ್ ಸಾಧಕ ಗೌರವಕ್ಕೆ ಪಾತ್ರರಾಗಿದ್ದಾರೆ. ವಿರಾಜಪೇಟೆ ತಾಲೂಕು ಹೊಸ ಕೋಟೆ ಗ್ರಾಮದ ಬಾಚಿಕೆ ಶ್ರೀಕಾಂತ್ ಹಾಗೂ ದಿವ್ಯಜ್ಯೋತಿ ಪುತ್ರನಾದ ಈತ, 2 ವರ್ಷ 5 ತಿಂಗಳಲ್ಲೇ 8 ಹಣ್ಣುಗಳು, 5 ತರಕಾರಿಗಳು, 7 ಪಕ್ಷಿಗಳು, 7 ಸಾಕು ಪ್ರಾಣಿಗಳು, 5 ಕಾಡು ಪ್ರಾಣಿಗಳು, 4 ಜಲಚರ ಪ್ರಾಣಿಗಳು, 3 ಕೀಟಗಳು, 10 ವಾಹನಗಳು, ದೇಹದ 12 ಅಂಗಗಳು, 3 ರಸ ಸ್ವಾದಗಳು, 10 ಕ್ರಿಯೆಗಳು ಹಾಗೂ 16 ಉಡುಪುಗಳ ಹೆಸರನ್ನು ಗುರುತಿಸಿ ಹೇಳುವಲ್ಲಿ ಸಾಧನೆ ಮಾಡಿದ್ದಾರೆ.

ಇದರ ಜೊತೆಗೆ A ಯಿಂದ Z ವರೆಗೆ ಇಂಗ್ಲಿಷ್ ಅಕ್ಷರಮಾಲೆಯನ್ನು, 23 ಅಕ್ಷರ ಪದಗಳೊಂದಿಗೆ ಪಠಿಸುವುದು, 1 ರಿಂದ 4 ರವರೆಗೆ ಸಂಖ್ಯೆಗಳ ಎಣಿಕೆ ಮಾಡುವುದು ಹಾಗೂ 5 ವಾಹನಗಳ ಮತ್ತು 4 ಪ್ರಾಣಿಗಳ ಶಬ್ದಗಳನ್ನು ಅನುಕರಿಸುವ ವಿಶೇಷ ಪ್ರತಿಭೆಯನ್ನು ಪ್ರದರ್ಶಿಸಿರುವುದಕ್ಕಾಗಿ, ಅವರಿಗೆ ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್ ಐಬಿಆರ್ ಸಾಧಕ ಗೌರವ ಎಂಬ ಗೌರವ ನೀಡಿ ಏ.21 ರಂದು ದೃಢೀಕರಿಸಲಾಗಿದೆ.

ಲಾರಿ ಮೇಲೆ ಮರ ಬಿದ್ದು ಓರ್ವನಿಗೆ ತೀವ್ರ ಗಾಯ

ಗೋಣಿಕೊಪ್ಪ, ಮೇ 13–ಭಾರೀ ಗಾಳಿ ಹಾಗೂ ಸಿಡಿಲಬ್ಬರದಿಂದ ಲಾರಿ ಮೇಲೆ ಮರ ಉರುಳಿ ಬಿದ್ದ ಪರಿಣಾಮ ಓರ್ವ ಕಾರ್ಮಿಕ ಗಂಭೀರವಾಗಿ ಗಾಯ ಗೊಂಡು, ಇನ್ನೂ ಏಳು ಮಂದಿ ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾದ ಘಟನೆ ಪೊನ್ನಂಪೇಟೆ ತಾಲೂಕಿನ ನಾಲ್ಕೇರಿ ಗ್ರಾಮದಲ್ಲಿ ನಡೆದಿದೆ.



ರಾಘವೇಂದ್ರ್ ಮರದ ಕೊಂಬೆ ಹಾಗೂ ಲಾರಿಯ ಗಾಜಿನ ಚೂರುಗಳು ತಗುಲಿ ಗಾಯಗಳಾಗಿವೆ. ರಮೇಶ್, ಮಹೇಶ್, ವಿಜಿ, ಜಾಬಿರ್, ರಂಗ, ಕರಿಗೌಡ ಮತ್ತು ಶಂಕರ್ ಅವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕಾರ್ಮಿಕರು ಗೊಬ್ಬರ ಸಾಗಣೆ ಮಾಡಿದ ಬಳಿಕ ನಾಲ್ಕೇರಿ ಕೃಷಿ ಪತ್ತಿನ ಸಹಕಾರ ಸಂಘದ ಗೋದಾಮಿನಿಂದ ಹಿಂದಿರುಗುತ್ತಿದ್ದ ವೇಳೆ ಕಾನೂರು ಗೋಣಿಕೊಪ್ಪ ರಸ್ತೆಯಲ್ಲಿ ಲಾರಿ (KA01, C-7 315) ಮೇಲೆ ಏಕಾಏಕಿ ಮರ ಬಿದ್ದಿದೆ ಎನ್ನಲಾಗಿದೆ.

ಗಾಯಾಳುಗಳಿಗೆ ಗೋಣಿಕೊಪ್ಪ ಸಮುದಾಯ ಕೇಂದ್ರದಲ್ಲಿ ಚಿಕಿತ್ಸೆ ನೀಡಲಾಗಿದೆ, ಕುಟ್ಟ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆ.ಆರ್.ರಾಜೇಶ್ ತಾಪಂ ಪ್ರಭಾರ ಸಿಇಓ



ಮಡಿಕೇರಿ, ಮೇ 13–ಪೊನ್ನಂಪೇಟೆ ಮತ್ತು ವಿರಾಜಪೇಟೆ ತಾಲೂಕು ಪಂಚಾಯಿತಿಯ ಪ್ರಭಾರ ಕಾರ್ಯ ನಿರ್ವಹಣಾಧಿಕಾರಿಯಾಗಿ ಕೆ.ಆರ್‌ರಾಜೇಶ್ ನೇಮಕವಾಗಿದ್ದಾರೆ. ಈ ಹಿಂದೆ ಕಾರ್ಯ ನಿರ್ವಹಣಾಧಿಕಾರಿ ಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಕೆ.ಸಿ. ಅಪ್ಪಣ್ಣ ಅವರು ಚಿಕ್ಕಮಗಳೂರು ಜಿಲ್ಲೆಯ ಕಳಸ ತಾಲೂಕಿಗೆ ವರ್ಗಾವಣೆಗೊಂಡ ಹಿನ್ನೆಲೆಯಲ್ಲಿ ರಾಜೇಶ್‌ರನ್ನು ಪ್ರಭಾರ ಕಾರ್ಯ ನಿರ್ವಹಣಾಧಿಕಾರಿಯಾಗಿ ನೇಮಿಸಲಾಗಿದೆ

ತಾಲೂಕು ಅಕ್ಷರ ದಾಸೋಹ ಸಹಾಯಕ ನಿರ್ದೇಶಕರಾಗಿ, ಅರುವತ್ತೊಕ್ಲು, ಕಿರುಗೂರು ಪಂಚಾಯಿತಿ ಆಡಳಿತಾಧಿಕಾರಿಯಾಗಿ ಕರ್ತವ್ಯದ ಜವಾಬ್ದಾರಿಯಲ್ಲಿದ್ದಾರೆ. ಇವರು ಈ ಹಿಂದೆ ತಾಲೂಕು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ.

ಹಾರಂಗಿ ಜಲಾಶಯಕ್ಕೆ ಜಾರ್ಖಂಡ್ ಹಣಕಾಸು ಸಚಿವರ ಭೇಟಿ


ಜಾರ್ಖಂಡ್ ಹಣಕಾಸು ಸಚಿವ ರಾಧಾಕೃಷ್ಣ ಕಿಶೋರ್, ಪತ್ನಿಯೊಂದಿಗೆ ಇಂದು ಹಾರಂಗಿ ಜಲಾಶಯಕ್ಕೆ ಭೇಟಿ ನೀಡಿದ್ದರು.

ಮಡಿಕೇರಿ, ಮೇ 13–ಜಾರ್ಖಂಡ್ ಮುಖ್ಯಮಂತ್ರಿಗಳ ಜೊತೆಯಲ್ಲಿಯೇ ಕೊಡಗಿಗೆ ಆಗಮಿಸಿದ್ದ ಅಲ್ಲಿನ ಹಣಕಾಸು ಸಚಿವ ರಾಧಾಕೃಷ್ಣ ಕಿಶೋರ್ ಮತ್ತು ಅವರ ಪತ್ನಿ ಇಂದು ಹಾರಂಗಿ ಜಲಾಶಯಕ್ಕೆ ಭೇಟಿ ನೀಡಿ ವೀಕ್ಷಣೆ ನಡೆಸಿದರು.

ಅಧಿಕಾರಿಗಳ ಬಳಿ ಜಲಾಶಯ ನಿರ್ಮಾಣ ಮತ್ತು ನೀರಿನ ಸಂಗ್ರಹ ಮತ್ತಿತ್ತರ ಮಾಹಿತಿಗಳನ್ನು ಪಡೆದರು. ಬಳಿಕ ದುಬಾರೆಯ ಸಾಕಾನೆ ಶಿಬಿರಕ್ಕೆ ತೆರಳಿ ಸಾಕಾನೆಗಳನ್ನು ವೀಕ್ಷಿಸಿದರು. ಈ ಸಂದರ್ಭ ಕುಶಾಲನಗರ ತಾಲೂಕು ತಹಶೀಲ್ದಾರ್ ಕಿರಣ್.ಜಿ ಗೌರಯ್ಯ, ಹಾರಂಗಿ ಜಲಾಶಯದ ಕಿರಿಯ ಇಂಜಿನಿಯರ್ ಸೌಮ್ಯ ಉಪಸ್ಥಿತರಿದ್ದರು.

ಪ್ರವಾಸ ರದ್ದು : ಇನ್ನು ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಮತ್ತವರ ಕುಟುಂಬ ಪುಣ್ಯ ಕ್ಷೇತ್ರ ಭಾಗಮಂಡಲ ಮತ್ತು ತಲಕಾವೇರಿಗೆ ತೆರಳುವ ಯೋಜನೆ ಇತ್ತು. ಆದರೆ ಕಾರಣಾಂತರಗಳಿಂದ ಅತ್ತ ಕಡೆ ತೆರಳುವ ಪ್ರವಾಸವನ್ನು ಕೊನೆ ಕ್ಷಣದಲ್ಲಿ ಮೊಟಕುಗೊಳಿಸಿದ್ದಾರೆ. ಭಾಗಮಂಡಲಕ್ಕೆ ಆಗಮಿಸುವ ಸಾಧ್ಯತೆಯಿದ್ದ ಹಿನ್ನೆಲೆಯಲ್ಲಿ ಪೊಲೀಸ್ ಭದ್ರತೆಯ ವ್ಯವಸ್ಥೆ ಮಾಡಲಾಗಿತ್ತು ಎಂದು ತಿಳಿದು ಬಂದಿದೆ. ಆದರೆ ಮುಖ್ಯಮಂತ್ರಿ ಹೇಮಂತ್ ಸೊರೇನ್ ಮತ್ತವರ ಕುಟುಂಬ ತಂಗಿರುವ ಲೀಲಾ ಪ್ಯಾಲೇಸ್‌ನಲ್ಲೇ ವಾಸ್ತವ್ಯ ಹೂಡಿದ್ದರು.

ಬೈಲಕುಪ್ಪೆಗೆ ಮುಖ್ಯಮಂತ್ರಿ ಭೇಟಿ: ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ತಮ್ಮ ಕುಟುಂಬದೊಂದಿಗೆ ನಿನ್ನೆ ಬೈಲಕುಪ್ಪೆಯ ಸುವರ್ಣ ದೇವಾಲಯಕ್ಕೆ ಭೇಟಿ ನೀಡಿ ಬೌದ್ಧಸ್ತೂಪವನ್ನು ವೀಕ್ಷಿಸಿದರು. ಅಲ್ಲಿ 25ನೇ ಲುನಾರ್ ಕ್ಯಾಲೆಂಡರ್ ವರ್ಷಾಚರಣೆಯ ಅಂಗವಾಗಿ ಸನ್ಯಾಸಿಗಳು ಮಂಕ್ಸ್, ನನ್ಸ್ ಸೇರಿ ಲಕ್ಷಕ್ಕೂ ಹೆಚ್ಚು ಮಂದಿ ನಡೆಸುತ್ತಿರುವ 2ನೇ ದಿನದ ಭಜನಾ ಕಾರ್ಯಕ್ರಮವನ್ನು ಮುಖ್ಯಮಂತ್ರಿಗಳು ಉದ್ಘಾಟಿಸಿದ್ದರು. ಸುವರ್ಣ ದೇವಾಲಯದ ವ್ಯವಸ್ಥಾಪಕ ಟ್ರಸ್ಟಿ ತಲ್ಕು ಚೋಯೇದಾರ್ ಬುದ್ಧನ ವಿಗ್ರಹವನ್ನು ನೀಡಿ ಗೌರವಿಸಿದರು.

ನಾಳೆ ನಿರ್ಗಮನ: ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಮತ್ತವರ ಕುಟುಂಬ ವರ್ಗ, ಹಣಕಾಸು ಸಚಿವ ಸಚಿವ ರಾಧಾಕೃಷ್ಣ ಕಿಶೋರ್ ಮತ್ತು ಅವರ ಪತ್ನಿ ಮೇ 14ರಂದು ತವರು ಜಾರ್ಖಂಡ್‌ಗೆ ತೆರಳುವರು. ಬೆಳಿಗ್ಗೆ 11 ಗಂಟೆ ವೇಳೆಗೆ ರಸ್ತೆ ಮಾರ್ಗವಾಗಿ ಬೆಂಗಳೂರಿಗೆ ತೆರಳಿ, ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಜಾರ್ಖಂಡ್‌ನ ರಾಂಚಿಗೆ ಪ್ರಯಾಣ ಬೆಳೆಸಲಿದ್ದಾರೆ.


ಗೋಲ್ಡನ್ ಟೆಂಪಲ್‌ನ ವ್ಯವಸ್ಥಾಪಕ ಟ್ರಸ್ಟಿ ತಲ್ಕು ಚೋಂಯೇದಾರ್ ಬುದ್ಧನ ವಿಗ್ರಹವನ್ನು ನೀಡಿ ಗೌರವಿಸಿದರು.

ನಿವೇಶನ ರಹಿತರ ಹೋರಾಟದ ದಾರಿ ತಪ್ಪಿಸುವ ಕೆಲಸ ಮಾಡಬೇಡಿ


ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿ ಜಿಲ್ಲಾ ಕಾರ್ಯದರ್ಶಿ ಜೆ.ಶಿವಪ್ಪ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮಡಿಕೇರಿ, ಮೇ 13–ಮಾದಾಪುರದ ಕುಂಬೂರಿನಲ್ಲಿ 12 ದಿನಗಳಿಂದ ನಡೆಯುತ್ತಿರುವ ಬಡ ನಿವೇಶನ ರಹಿತರ ಹೋರಾಟವನ್ನು ದಾರಿ ತಪ್ಪಿಸುವ ಕೆಲಸವನ್ನು ಯಾರೂ ಮಾಡಬಾರದು ಎಂದು ರಾಜ್ಯ ಬಹುಜನ ಕಾರ್ಮಿಕರ ಸಂಘ ಹಾಗೂ ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿ ಜಿಲ್ಲಾ ಕಾರ್ಯದರ್ಶಿ ಜೆ.ಶಿವಪ್ಪ ಆಗ್ರಹಿಸಿದ್ದಾರೆ.

ಕುಂಬೂರು ಲಕ್ಕೇರಿಯಲ್ಲಿ 600 ಕುಟುಂಬಗಳು ನಿವೇಶನಕ್ಕಾಗಿ ಹೋರಾಟ ನಡೆಸುತ್ತಿವೆ. ಈ ಹಂತದಲ್ಲಿ ಎಐಟಿಯುಸಿ ಸಂಘಟನೆಯ ಹೆಚ್. ಎಂ. ಸೋಮಪ್ಪ, ನಿವೇಶನರಹಿತರ ಹೋರಾಟ ಅರ್ಥಹೀನ ಎಂದು ಹೇಳಿಕೆಗಳನ್ನು ನೀಡುವ ಮೂಲಕ ಸರ್ಕಾರದ ದಿಕ್ಕು ತಪ್ಪಿಸುವ ಪ್ರಯತ್ನ ನಡೆಸಿರುವುದನ್ನು ತೀವ್ರವಾಗಿ ವಿರೋಧಿಸುವುದಾಗಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಇಂದಿಗೂ ಬಡ ನಿವೇಶನ ರಹಿತ ಕುಟುಂಬಗಳು ತೋಟಗಳ ಲೈನ್‌ಮನೆಗಳಲ್ಲಿ ಸಂಕಷ್ಟದ ಬದುಕನ್ನು ನಡೆಸಿಕೊಂಡು ಬರುತ್ತಿವೆ. ಇಂತಹ ಕುಟುಂಬಗಳಿಗೆ ಗುಲಾಮಗಿರಿಯಿಂದ ಮುಕ್ತಿ ಕೊಡಿಸುವಂತೆ ಆಗ್ರಹಿಸಿದ ಶಿವಪ್ಪ, ಪ್ರತಿಭಟನೆಯಲ್ಲಿ ಇತರೆ ಪಂಚಾಯ್ತಿಗಳ ನಿವೇಶನ ರಹಿತರು ಪಾಲ್ಗೊಂಡಿರುವುದನ್ನು ಸೋಮಪ್ಪ ಟೀಕಿಸಿದ್ದಾರೆ. ಆದರೆ, ಪ್ರತಿಭಟನೆಯಲ್ಲಿ ನಿರತರಾಗಿರುವವರಿಗೆ ನಿವೇಶನವನ್ನು ಕೇಳುವ ಹಕ್ಕಿಲ್ಲವೆ ಎಂದು ಪ್ರಶ್ನಿಸಿದರು.

ಹೋರಾಟ ಸಮಿತಿಯ ಸುಂಟಿಕೊಪ್ಪ ಹೋಬಳಿ ಕಾರ್ಯದರ್ಶಿ ಎ.ಎಂ. ಗೀತಾ ಮಾತನಾಡಿ, ನಾಲ್ಕೈದು ದಶಕಗಳಿಂದ ಪರಿಶಿಷ್ಟರು ಸೇರಿದಂತೆ ಎಲ್ಲಾ ಬಡ ವರ್ಗದ ಮಂದಿ ಲೈನ್‌ಮನೆ ಮತ್ತು ಬಾಡಿಗೆ ಮನೆಗಳಲ್ಲಿ ಸಂಕಷ್ಟದ ಬದುಕು ನಡೆಸುತ್ತಿದ್ದು, ಇದರಿಂದ ಹೊರ ಬರುವ ನಿಟ್ಟಿನಲ್ಲಿ ಹಲವಾರು ಬಾರಿ ನಿವೇಶನಕ್ಕೆ ಆಗ್ರಹಿಸಿ ಪ್ರತಿಭಟನೆಗಳನ್ನು ನಡೆಸಿ, ಮನವಿ ಪತ್ರಗಳನ್ನು ಸಂಬಂಧಿಸಿದವರಿಗೆ ನೀಡಿದ್ದರು. ಸೂಕ್ತ ಸ್ಪಂದನ ದೊರಕದ ಹಿನ್ನೆಲೆಯಲ್ಲಿ ಇದೀಗ ಹೋರಾಟಕ್ಕೆ ಇಳಿದಿರುವುದಾಗಿ ತಿಳಿಸಿದರು.

ಗೋಷ್ಠಿಯಲ್ಲಿ ಸಮಿತಿಯ ಸೋಮವಾರಪೇಟೆ ತಾಲೂಕು ಅಧ್ಯಕ್ಷೆ ಟಿ.ಎ.ಜಾನ್ಸಿ, ಸುಂಟಿಕೊಪ್ಪ ಹೋಬಳಿ ಅಧ್ಯಕ್ಷ ಹೆಚ್.ಬಿ. ಮುತ್ತಣ್ಣ, ತಾಲೂಕು ಕಾರ್ಯದರ್ಶಿ ಬಿ.ಜಾನಕಿ, ಸುಂಟಿಕೊಪ್ಪ ಹೋಬಳಿ ಸಹ ಕಾರ್ಯದರ್ಶಿ ಸುಂದರಿ ಉಪಸ್ಥಿತರಿದ್ದರು.

ಚಾಮರಾಜನಗರ ಜಿಲ್ಲೆಯ ಕ್ರೀಡಾ ಸಂಸ್ಥೆಗಳ ನೋಂದಣಿ ಅನಿವಾರ್ಯ

ಚಾಮರಾಜನಗರ, ಮೇ 13– ಜಿಲ್ಲೆಯಲ್ಲಿರುವ ಕ್ರೀಡಾ ಸಂಸ್ಥೆಗಳು ನಿಯಮಾನುಸಾರ ನೋಂದಾಯಿಸಿಕೊಳ್ಳಬೇಕು. ಇದರಿಂದ ರಾಜ್ಯ ಕ್ರೀಡಾ ಸಂಸ್ಥೆಗಳಿಂದ ಮಾನ್ಯತೆ ದೊರೆಯುವುದಲ್ಲದೇ ನೆರವಾಗುವ ನಿಟ್ಟಿನಲ್ಲಿ ಎಲ್ಲ ಸಹಕಾರ ಸಿಗಲಿದೆ ಎಂದು ಕರ್ನಾಟಕ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷರಾದ ಸಿ.ಎಸ್. ಅರುಣ್ ಮಾಚಯ್ಯ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದಲ್ಲಿರುವ ಕೆಡಿಪಿ ಸಭಾಂಗಣದಲ್ಲಿಂದು ಜಿಲ್ಲಾ ಕ್ರೀಡಾ ಸಂಸ್ಥೆಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳೊಂದಿಗೆ ಕ್ರೀಡೆಯ ಅಭಿವೃದ್ಧಿ ಸಂಬಂಧ ಸಮಾಲೋಚನೆ ಸಭೆ ನಡೆಸಿ ಅವರು ಮಾತನಾಡಿದರು.

ಕರ್ನಾಟಕ ಕ್ರೀಡಾ ಪ್ರಾಧಿಕಾರ ಜಿಲ್ಲೆಗಳಿಗೆ ಭೇಟಿ ನೀಡಿ ಕ್ರೀಡಾ ಸೌಲಭ್ಯಗಳನ್ನು ವೀಕ್ಷಿಸಿ ಹಾಗೂ ಕ್ರೀಡಾ ಸಂಸ್ಥೆಯ ಮುಖ್ಯಸ್ಥರನ್ನು ಭೇಟಿ ಮಾಡಿ ಮುಂದೆ ಕ್ರೀಡಾ ಅಭಿವೃದ್ಧಿ ಸಂಬಂಧ ಕೈಗೊಳ್ಳಬೇಕಿರುವ ಕುರಿತು ಸಮಾಲೋಚನೆ ನಡೆಸುತ್ತಿದೆ. ಈಗಾಗಲೇ 22 ಜಿಲ್ಲೆಗಳಿಗೆ ಭೇಟಿ ನೀಡಲಾಗಿದೆ. ಕ್ರೀಡಾ ಅಸೋಸಿಯೇಷನ್‌ಗಳು ಇದ್ದರೆ ಕ್ರೀಡೆ ಸಂಬಂಧ ಚಟುವಟಿಕೆಗಳು ಇನ್ನಷ್ಟು ಉತ್ತಮವಾಗಿ ನಡೆದು ಕ್ರೀಡಾ ಕ್ಷೇತ್ರದ ಪ್ರಗತಿಗೆ ಅನುಕೂಲವಾಗಲಿದೆ. ಹೀಗಾಗಿ ಕ್ರೀಡಾ ಸಂಸ್ಥೆಗಳು ನೋಂದಣಿಯಾಗಬೇಕು ಎಂದರು.

ಕ್ರೀಡೆಯಲ್ಲಿ ಗ್ರಾಮಾಂತರ ಪ್ರದೇಶಗಳಿಗೂ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಗ್ರಾಮಾಂತರ ಭಾಗದ ಪ್ರತಿಭೆಗಳನ್ನು ಗುರುತಿಸುವುದು ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಸರ್ಕಾರ ಈಗಾಗಲೇ ಕೆಲಸ ಮಾಡುತ್ತಿದೆ. ಮೊದಲ ಬಾರಿಗೆ ಗುಡ್ಡಗಾಡು ಪ್ರದೇಶದ ಜನರ ಕ್ರೀಡಾಕೂಟಗಳನ್ನು ಆಯೋಜಿಸಿದೆ. ಚಾಮರಾಜನಗರ ಜಿಲ್ಲೆಯಲ್ಲಿ ಹೆಚ್ಚು ಆಸಕ್ತಿ ಹೊಂದಿರುವ ಕ್ರೀಡೆಗಳಿಗೆ ಉತ್ತೇಜನ ನೀಡಲಾಗುವುದು ಎಂದು ಹೇಳಿದರು.

ಲಭ್ಯವಿರುವ ಕ್ರೀಡಾ ಸೌಲಭ್ಯಗಳನ್ನು ನಿರ್ವಹಣೆ ಮಾಡಬೇಕಿದೆ. ಮೂಲ ಸೌಕರ್ಯಗಳು ಸಹ ಸಮರ್ಪಕವಾಗಿ ಲಭ್ಯವಾದರೆ ಆದಾಯವು ಸಹ ಬರಲಿದೆ. ಜಿಲ್ಲೆಯ ಕ್ರೀಡಾಂಗಣಗಳ ಅಭಿವೃದ್ಧಿ, ಕ್ರೀಡಾಪಟುಗಳಿಗೆ ಉತ್ತೇಜನ ಸೇರಿದಂತೆ ಕ್ರೀಡಾ ಕ್ಷೇತ್ರದ ಅಭಿವೃದ್ಧಿ ಸಂಬಂಧ ಶಾಸಕರೊಂದಿಗೂ ಸಮಾಲೋಚಿಸಲಾಗುವುದು. ಕ್ರೀಡಾ ಸಂಸ್ಥೆಗಳ ಮಾನ್ಯತೆ, ಪ್ರೋತ್ಸಾಹ ಸೇರಿದಂತೆ ಎಲ್ಲ ಕ್ರೀಡಾ ಚಟುವಟಿಕೆಗಳಿಗೆ ಅವಶ್ಯವಿರುವ ಸಹಕಾರ ಕ್ರೀಡಾ ಪ್ರಾಧಿಕಾರದಿಂದ ನೀಡಲಾಗುವುದೆಂದು ಕರ್ನಾಟಕ ಕ್ರೀಡಾ ಪ್ರಾಧಿಕಾ ರದ ಉಪಾಧ್ಯಕ್ಷ ಸಿ.ಎಸ್. ಅರುಣ್ ಮಾಚಯ್ಯ ತಿಳಿಸಿದರು.


ಕೆಡಿಪಿ ಸಭೆಯಲ್ಲಿ ಸಿ.ಎಸ್. ಅರುಣ್ ಮಾಚಯ್ಯ ಮಾತನಾಡಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಪ್ರಭಾರ ಸಹಾಯಕ ನಿರ್ದೇಶಕರಾದ ಹೆಚ್.ಎಸ್. ಬಿಂದ್ಯಾ, ರಾಜ್ಯ ಕರಾಟೆ ಅಸೋಸಿಯೇಷನ್ ಅಧ್ಯಕ್ಷರಾದ ಸಿದ್ದರಾಜು, ಕ್ರೀಡಾ ಸಂಸ್ಥೆಗಳ ಮುಖ್ಯಸ್ಥರು, ಪದಾಧಿಕಾರಿಗಳು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಕ್ರೀಡಾಪಟುಗಳಾದ ಶ್ರೀನಿವಾಸ ಪ್ರಸಾದ್, ಚಾ.ರಂ. ಶ್ರೀನಿವಾಸಗೌಡ, ಜಿ. ಬಂಗಾರು, ರಾಜೇಂದ್ರ, ಸಿ.ಎಂ. ನರಸಿಂಹಮೂರ್ತಿ, ನಂಜುಂಡಸ್ವಾಮಿ, ಸುಮನ್, ಚೇತನ್ ದೊರೈರಾಜು, ಮಹದೇವ ಪ್ರಸಾದ್, ಮಂಜುನಾಥ್, ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

ಸಭೆಗೂ ಮೊದಲು ಕರ್ನಾಟಕ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷರಾದ ಸಿ.ಎಸ್. ಅರುಣ್ ಮಾಚಯ್ಯ ಅವರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಪ್ರಭಾರ ಸಹಾಯಕ ನಿರ್ದೇಶಕರಾದ ಹೆಚ್.ಎಸ್. ಬಿಂದ್ಯಾ ಅವರೊಂದಿಗೆ ನಗರದ ಡಾ. ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣಕ್ಕೆ ಭೇಟಿ ನೀಡಿ ಸಿಂಥೆಟಿಕ್ ಟ್ರ್ಯಾಕ್, ಪೆವಿಲಿಯನ್ ಸೇರಿದಂತೆ ಇತರೆ ಕ್ರೀಡಾ ಸೌಕರ್ಯಗಳನ್ನು ಪರಿಶೀಲಿಸಿದರು.

ರಸ್ತೆ ಬದಿ ದೀಪಗಳ ದುರಸ್ತಿಗೆ ಆಗ್ರಹಿಸಿ ಪ್ರತಿಭಟನೆ

ರಸ್ತೆ ತಡೆ, ತಹಸೀಲ್ದಾರ್‌ಗೆ ಮನವಿ ಸಲ್ಲಿಕೆ

ಗುಂಡ್ಲುಪೇಟೆ, ಮೇ 13 – ಕರ್ನಾಟಕ ಕಾವಲು ಪಡೆ ವತಿಯಿಂದ ಪಟ್ಟಣದ ರಾಷ್ಟ್ರೀಯ ಹೆದ್ದಾರಿಯ ಊಟಿ ಮೈಸೂರು ರಸ್ತೆ ಹಾಗೂ ಸುಲ್ತಾನ್ ಬತ್ತೇರಿ ರಸ್ತೆಯ ಮದ್ಯ ಭಾಗದಲ್ಲಿರುವ ರಸ್ತೆ ಬದಿಯ ದೀಪಗಳನ್ನು ಸರಿಪಡಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಪ್ರವಾಸಿ ಮಂದಿರದಿಂದ ಹೊರಟ ಪ್ರತಿಭಟನಾಕಾರರು ಎಂಡಿಸಿಸಿ ಬ್ಯಾಂಕ್ ಮುಂಭಾಗ ರಸ್ತೆ ತಡೆದು ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ದಿಕ್ಕಾರದ ಘೋಷಣೆ ಕೂಗುವ ಮುಖಾಂತರ ಆಕ್ರೋಶ ವ್ಯಕ್ತಪಡಿಸಿದರು, ನಂತರ ತಾಲೂಕು ಕಚೇರಿಗೆ ತೆರಳಿದರು, ಈ ಸಂದರ್ಭದಲ್ಲಿ ಕಾವಲು ಪಡೆಯ ತಾಲೂಕು ಅಧ್ಯಕ್ಷರಾದ ಎ.ಅಬ್ದುಲ್ ಮಾಲಿಕ್ ಮಾತನಾಡಿ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ವಿರುದ್ಧ ಕಿಡಿಕಾರಿ ಕೂಡಲೇ ವಿದ್ಯುತ್ ದೀಪಗಳು ಸರಿಪಡಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟದ ಎಚ್ಚರಿಕೆ ನೀಡಿದರು. ನಂತರ ದಂಡಾಧಿಕಾರಿಗಳಿಗೆ ಮನವಿ ಸಲ್ಲಿಸಿದರು ಮನವಿ ಸ್ವೀಕರಿಸಿದ ದಂಡಾಧಿಕಾರಿ ತನ್ಮಯ್ ಸ್ಥಳದಲ್ಲೇ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ದೂರವಾಣಿ ಕರೆ ಮಾಡಿ ಕೂಡಲೇ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.


ಕರ್ನಾಟಕ ಕಾವಲು ಪಡೆ ವತಿಯಿಂದ ದಂಡಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಇದೇ ವೇಳೆ ತಾಲ್ಲೂಕು ಗೌರವಾಧ್ಯಕ್ಷರಾದ ರಾಮೇಗೌಡ. ಕಾರ್ಯದರ್ಶಿ ಎಸ್.ಮುಬಾರಕ್ ತಾಲೂಕು ಉಪಾಧ್ಯಕ್ಷರಾದ ಶಿವಕುಮಾರ್. ಟೌನ್ ಉಪಾಧ್ಯಕ್ಷರಾದ ಸಾದಿಕ್ ಪಾಷ. ಟೌನ್ ಸಂಚಾಲಕರಾದ ಮಿಮಿಕ್ರಿರಾಜು. ಜಾಹೀರ್ ಹಸೇನ್. ವಾಸು ಆಚಾರ್. ಆಸೀಫ್. ಕರೀಮ್. ಮುಂಟೀಪುರಮಾದಯ್ಯ. ಕಂದೇಗಾಲಮನಸ್. ಸೇರಿದಂತೆ ಸಾರ್ವಜನಿಕರು ಹಾಜರಿದ್ದರು.

ಮೇ 24, ಕೊಳ್ಳೇಗಾಲದಲ್ಲಿ ಬಸವ ಜಯಂತಿ: ಪ್ರಚಾರಕ್ಕೆ ಚಾಲನೆ

ಕೊಳ್ಳೇಗಾಲ, ಮೇ13– ಬಸವ ಜಯಂತಿ ಆಚರಣಾ ಸಮಿತಿ ವತಿಯಿಂದ ಬುಧವಾರ ಕರ್ನಾಟಕ ಸಾಂಸ್ಕೃತಿಕ ನಾಯಕ ಜಗಜ್ಯೋತಿ ಶ್ರೀ ಬಸವೇಶ್ವರರ 893ನೇ ಜಯಂತಿ ಮಹೋತ್ಸವವು ಪಟ್ಟಣದಲ್ಲಿ 24ರಂದು ನಡೆಯುತ್ತಿರುವ ಹಿನ್ನೆಲೆ ಮಠಾಧೀಶರು, ಗಣ್ಯರಿಂದ ಪ್ರಚಾರ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಈ ವೇಳೆ ಗುಂಡೇಗಾಲ ಮಠಾಧ್ಯಕ್ಷ ಶ್ರೀ ಮಲ್ಲಿಕಾರ್ಜುನ ಸ್ವಾಮಿಜಿ ಹಾಗೂ ಕೊಳ್ಳೇಗಾಲ ದಾಸೋಹ ಮಠದ ಶ್ರೀ ಶಿವಪ್ಪ ಸ್ವಾಮಿಗಳ ದಿವ್ಯ ಸಮ್ಮುಖದಲ್ಲಿ ಮಠದ ಆವರಣದಲ್ಲಿ ಪ್ರಚಾರ ಕಾರ್ಯಕ್ರಮದ ಪೋಸ್ಟರ್, ಕರಪತ್ರ, ಆಹ್ವಾನ ಪತ್ರಿಕೆಗಳ ಪ್ರತಿಗಳನ್ನು ಬಿಡುಗಡೆಗೊಳಿಸಿ 24ರಂದು ಬಸವ ಜಯಂತಿ ಸಮಾರಂಭ ಅದ್ದೂರಿಯಾಗಿ ಜರುಗಲಿ, ಯಶಸ್ವಿ ಜಯಂತಿಗೆ ಎಲ್ಲರೂ ಕೈಜೋಡಿಸಿ, ಸಾಲದಲ್ಲಿ ಕಾರ್ಯಕ್ರಮ ಪ್ರಾರಂಭಕ್ಕೆ ಅನುವು ಮಾಡಿ ಎಂದು ಶ್ರೀಗಳು ಈ ವೇಳೆ ಮನವಿ ಮಾಡಿದರು.


ಬಸವ ಜಯಂತಿ ಮಹೋತ್ಸವದ ಪ್ರಚಾರ ಕಾರ್ಯಕ್ರಮಕ್ಕೆ ಶ್ರೀಗಳ ಸಮ್ಮುಖದಲ್ಲಿ ಚಾಲನೆ ನೀಡಲಾಯಿತು.

ಈ ವೇಳೆ ಮಹಾಸಭೆ ತಾಲ್ಲೂಕು ಅಧ್ಯಕ್ಷ ತಿಮ್ಮರಾಜೀಪುರ ಪುಟ್ಟಣ್ಣ ಮಾತನಾಡಿ, ಇದೇ ತಿಂಗಳ 24 ರಂದು ಜಗಜ್ಯೋತಿ ಶ್ರೀ ಬಸವೇಶ್ವರರವರ ಜಯಂತೋತ್ಸವದ ಅಂಗವಾಗಿ ಬೃಹತ್ ಮೆರವಣಿಗೆ ನಡೆಯಲಿದೆ. ಈ ಮೆರವಣಿಗೆಯನ್ನು ಸುತ್ತೂರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಜಿಗಳು ಸೇರಿದಂತೆ ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ. ಸಮಾರಂಭ ಯಶಸ್ವಿಗೆ ಎಲ್ಲರೂ ಕೈಜೋಡಿಸಿ, 24ರಂದು ಅದ್ದೂರಿ ಮೆರವಣಿಗೆಗೆ ಎಲ್ಲರೂ ಆಗಮಿಸಬೇಕು ಎಂದು ಮನವಿ ಮಾಡಿದರು

ಈ ಸಂದರ್ಭದಲ್ಲಿ ವೀರಶೈವ ಮುಖಂಡ ತೋಟೇಶ್, ಕೆಂಪನ ಪಾಳ್ಯ ಮಹೇಶ್, ಮಾಜಿ ಅಧ್ಯಕ್ಷರುಗಳಾದ ಬಸಪ್ಪನದೊಡ್ಡಿ ಬಸವರಾಜು, ಮಹದೇವ ಪ್ರಸಾದ್, ಜಿಲ್ಲಾ ನಿರ್ದೇಶಕ ಗುಂಡೇಗಾಲ ಬಸಪ್ಪ, ತಾಲೂಕು ನಿರ್ದೇಶಕ ತಿಮ್ಮರಾಜಿಪುರ ಮಹದೇವಸ್ವಾಮಿ, ಅಜ್ಜಾಲ್ ಮಹದೇವ ಸ್ವಾಮಿ, ಬೂದಿತಿಟ್ಟು ಶಿವಕುಮಾರ್, ಖಜಾಂಚಿ ಜಿನಕಹಳ್ಳಿ ನಟರಾಜು, ವೀರಶೈವ ಲಿಂಗಾಯತ ನೌಕರರ ಸಂಘದ ಅಧ್ಯಕ್ಷ ಇಂದ್ರ ಕುಮಾರ್, ಮಠದ ಬೀದಿ ಮನು, ಮಹಾಮನೆ ಟ್ರಸ್ಟ್ ಅಧ್ಯಕ್ಷ ಮಲ್ಲೇಶಪ್ಪ, ಖಜಾಂಚಿ ನಂದೀಶ್, ರಾಜೇಶ್, ಆರ್.ಬಸವಣ್ಣ, ಕಾಂತರಾಜು ಇನ್ನಿತರರರು ಇದ್ದರು.

ಅಶ್ವಿನಿ ನಿಧನ



ಕೊಳ್ಳೇಗಾಲ: ಪಟ್ಟಣದ ಭೀಮನಗರ ಬಡಾವಣೆಯ ಪಾಲ್ ಚಾವಡಿ ಬೀದಿ ನಿವಾಸಿ, ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಎನ್.ನಟರಾಜು ಅವರ ಸಹೋದರಿ ಅಶ್ವಿನಿ (46) ಅವರು ಮಂಗಳವಾರ ತಡರಾತ್ರಿ ನಿಧನರಾಗಿದ್ದು, ಬುಧವಾರ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಿತು.

ಮೃತರು ತಂದೆ, ತಾಯಿ, ಓರ್ವ ಸಹೋದರಿ, ಇಬ್ಬರು ಸಹೋದರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮಾಜಿ ಸಚಿವ ಎನ್.ಮಹೇಶ್, ಜೆಡಿಎಸ್ ಕ್ಷೇತ್ರಾಧ್ಯಕ್ಷ ಪುಟ್ಟಸ್ವಾಮಿ, ಸುರೇಶ್, ನಿಂಗರಾಜು, ಸರ್ಕಾರಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಚಿಕ್ಕರಾಜು, ನಿರ್ದೇಶಕ ಹರೀಶ್, ನಾಗರಿಕ ಸಮಿತಿಯ ನಟರಾಜಮಾಳಿಗೆ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಚಿಕ್ಕಮಾಳಿಗೆ, ಮಾಜಿ ಅಧ್ಯಕ್ಷರುಗಳಾದ ನಿಂಪು ರಾಜೇಶ್, ಡಿ. ನಟರಾಜು, ನಾಗೇಂದ್ರಸ್ವಾಮಿ, ಸಿದ್ದರಾಜು, ಜಿಲ್ಲಾ ನಿರ್ದೇಶಕ ರಾಜಶೇಖರ್, ಮರಿಸ್ವಾಮಿ, ಸಂಗಂ ಗಿರೀಶ್, ಶಿವು, ಜಗದೀಶ್ ಸೇರಿದಂತೆ ಅನೇಕ ಗಣ್ಯರು ಮೃತರಿಗೆ ಅಂತಿಮ ನಮನ ಸಲ್ಲಿಸಿದರು.

ಕೆಸ್ತೂರು ರಾಜೇಂದ್ರ ಪ್ರಚಾರ ಸಮಿತಿ ಉಪಾಧ್ಯಕ್ಷ



ಕೊಳ್ಳೇಗಾಲ ಬ್ಲಾಕ್ ಕಾಂಗ್ರೆಸ್ ಪ್ರಚಾರ ಸಮಿತಿಯ ನೂತನ ಉಪಾಧ್ಯಕ್ಷ ಕೆ.ಎನ್.ರಾಜೇಂದ್ರ ಅವರಿಗೆ ನೇಮಕಾತಿ ಪತ್ರ ವಿತರಿಸಲಾಯಿತು.

ಯಳಂದೂರು: ಕೆಸ್ತೂರು ಗ್ರಾಮದ ರಾಜೇಂದ್ರ ಕೆ ಎನ್ ಅವರನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಪ್ರಚಾರ ಸಮಿತಿ, ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ಬ್ಲಾಕ್ ಕಾಂಗ್ರೆಸ್ ಪ್ರಚಾರ ಸಮಿತಿಯ ಉಪಾಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಪ್ರಚಾರ ಸಮಿತಿಯ ರಾಜ್ಯ ಸಂಯೋಜಕರಾದ ಕಲಾ ಸಾಮ್ರಾಟ್ ಡಾ.ಎಸ್.ನಾರಾಯಣ್ ಅವರು ನೇಮಕಾತಿ ಆದೇಶ ಪತ್ರವನ್ನು ಶಾಸಕ ಎ.ಆರ್.ಕೃಷ್ಣಮೂರ್ತಿ ರವರ ಸಮ್ಮುಖದಲ್ಲಿ ನೀಡಿದರು.

ರಾಜೇಂದ್ರ ಕೆ .ಎನ್. ಮಾತನಾಡಿ ತಮಗೆ ವಹಿಸಿರುವ ಜವಾಬ್ದಾರಿಯನ್ನು ನಿಷ್ಠೆಯಿಂದ ನಿರ್ವಹಿಸಿ ಪಕ್ಷದ ಸಂಘಟನೆಯಲ್ಲಿ ಹಾಗೂ ಪ್ರಚಾರ ಕಾರ್ಯದಲ್ಲಿ ಪರಿಣಾಮಕಾರಿಯಾಗಿ ತೊಡಗಿಸಿಕೊಂಡು ಕಾರ್ಯನಿರ್ವಹಿಸುತ್ತೇನೆ. ನಮ್ಮನ್ನು ಆಯ್ಕೆಮಾಡುವುದಕ್ಕೆ ತಮ್ಮೆಲ್ಲರಿಗೂ ಅಭಿನಂದನೆಗಳು.

ಈ ಸಂದರ್ಭದಲ್ಲಿ ಚಾಮರಾಜನಗರ ಜಿಲ್ಲಾ ಪ್ರಚಾರ ಸಮಿತಿಯ ಅಧ್ಯಕ್ಷ ಮಧುಸೂದನ್, ಕೊಳ್ಳೇಗಾಲ ತಾಲೂಕು ಪ್ರಚಾರ ಸಮಿತಿಯ ಅಧ್ಯಕ್ಷ ಮನೋಹರ್, ಭೂ ನ್ಯಾಯಮಂಡಳಿ ಸದಸ್ಯ ಗುರುರಾಜ್, ಕೆಸ್ತೂರು ಗ್ರಾಪಂ ಸದಸ್ಯ ಗುರುಲಿಂಗಯ್ಯ, ಬಸವಪುರ ಪುಟ್ಟರಾಜು, ಕೆಸ್ತೂರು ಮಧು ಹಾಜರಿದ್ದರು.

ಚಾ.ನಗರದಲ್ಲಿ ಆರಕ್ಷಕರ ಮಕ್ಕಳ ಬೇಸಿಗೆ ಶಿಬಿರ

ಮಕ್ಕಳ ಪ್ರತಿಭೆ ಬೆಳವಣಿಗೆಗೆ ಪ್ರೋತ್ಸಾಹ ಅಗತ್ಯ: ಎಸ್‌ಪಿ

ಚಾಮರಾಜನಗರ, ಮೇ 13– ಜಿಲ್ಲಾ ಪೊಲೀಸ್ ಇಲಾಖೆಯ ವತಿಯಿಂದ ಪೊಲೀಸ್ ಕಲ್ಯಾಣ ಕಾರ್ಯಕ್ರಮದಡಿ ಆಯೋಜಿಸಲಾದ ಆರಕ್ಷಕರ ಮಕ್ಕಳ ಬೇಸಿಗೆ ಶಿಬಿರ–2026ಕ್ಕೆ ಡಿಎಆರ್ ಕೇಂದ್ರಸ್ಥಾನ ಆವರಣದ ಪೊಲೀಸ್ ಭವನದಲ್ಲಿ ಚಾಲನೆ ನೀಡಲಾಯಿತು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಮಕ್ಕಳು ಹೆಚ್ಚು ಪ್ರೋತ್ಸಾಹದಾಯಕ ಚಟುವಟಿಕೆಗಳಲ್ಲಿ ಭಾಗವಹಿಸಿದರೆ ಅವರ ಜ್ಞಾನ ಮತ್ತು ಸಾಮರ್ಥ್ಯ ವೃದ್ಧಿಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.


ಆರಕ್ಷಕರ ಮಕ್ಕಳ ಬೇಸಿಗೆ ಶಿಬಿರ–2026ಕ್ಕೆ ಡಿಎಆರ್ ಕೇಂದ್ರ ಸ್ಥಾನ ಆವರಣದ ಪೊಲೀಸ್ ಭವನದಲ್ಲಿ ಚಾಲನೆ ನೀಡಲಾಯಿತು.

ಮಕ್ಕಳು ಪ್ರತಿಯೊಂದು ಕ್ಷೇತ್ರದಲ್ಲೂ ಆಸಕ್ತಿ ವಹಿಸಿ ತಮ್ಮ ಪ್ರತಿಭೆಯನ್ನು ಬೆಳಗಿಸಬೇಕು. ಶಿಬಿರಗಳು ಮಕ್ಕಳ ಆತ್ಮವಿಶ್ವಾಸ ಮತ್ತು ಕೌಶಲ್ಯ ಅಭಿವೃದ್ಧಿಗೆ ಸಹಕಾರಿಯಾಗುತ್ತವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪೊಲೀಸ್ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ಹಾಗೂ ಆರಕ್ಷಕರ ಮಕ್ಕಳು ಭಾಗವಹಿಸಿದ್ದರು. ಬೇಸಿಗೆ ಶಿಬಿರದಲ್ಲಿ ವಿವಿಧ ಸಾಂಸ್ಕೃತಿಕ, ಕ್ರೀಡಾ ಹಾಗೂ ವ್ಯಕ್ತಿತ್ವ ವಿಕಸನ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಲಾಗಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821-2496522/23

ಬೇಕಾಗಿದ್ದಾರೆ
Accountant, Supervisor, Helper ಮತ್ತು Cashier ಪುರುಷರು ಹಾಗೂ ಮಹಿಳೆಯರು Full time or Part time, GRS Fantacy Park ಹತ್ತಿರವಿರುವ ಭಾರತ್ ಪೆಟ್ರೋಲಿಯಂ ಬಂಕಿಗೆ ಉತ್ತಮ ಸಂಬಳ ಹಾಗೂ ESI Facility ಇರುತ್ತದೆ. ಆಸಕ್ತ ಉಳ್ಳವರು ಭೇಟಿ ಕೊಡಿ ಹಾಗೂ ಸಂಪರ್ಕಿಸಿ:
7090802736
7892835168

ಬೇಕಾಗಿದ್ದಾರೆ
ಬಿರ್ಲಾ ಒಪಸ್ ಪೇಂಟ್ಸ್ (c/o) ಪೆರಿಟೆಚ್ ಅಂಡ್ ಕೋ ಗೋಡೌನ್‌ನಲ್ಲಿ ಕೆಲಸ ಮಾಡಲು ಆಸಕ್ತ ಅನ್‌ಲೋಡರ್‌ಗಳು ಹಾಗೂ ಅಶೋಕ ಲೇಲ್ಯಾಂಡ್‌ಗೆ ಡ್ರೈವರ್‌ಗಳು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
9113956899
9148108838

ಬೇಕಾಗಿದ್ದಾರೆ
ಆಯುರ್ ವೈದ್ಯ ಸಂಪತ್ (AVS)
Ayur Vaidhya Sampath
1) Telecaller with good communication skill
* Fluency in Kannada,
* Work at office.
2) BAMS Doctor with 5 years experience.
Mob: 6361272757

FOR SALE
40x70
Noth east Corner
Site @ Srirampura
9945019509

ಭಾರೀ ರಿಯಾಯಿತಿ ಮಾರಾಟ
ಬೂಟೀಕ್ ಸಾಮಗ್ರಿಗಳ ಸಂಪೂರ್ಣ ಮಾರಾಟ
- ಹೊಲಿಗೆ ಯಂತ್ರಗಳು ಮತ್ತು ರೆಡಿಮೇಡ್ ಮೆಟೀರಿಯಲ್
- ರೆಡಿಮೇಡ್ ಡ್ರೆಸ್‌ಗಳು ಮತ್ತು ಚೂಡಿದಾರ್‌ಗಳು
- ಆಕರ್ಷಕ ಸೀರೆಗಳು ಮತ್ತು ರೆಡಿ ಮೆಟೀರಿಯಲ್‌ಗಳು
- ಪೀಠೋಪಕರಣ ಮತ್ತು ಪರಿಕರಗಳು

ಸ್ಥಳ: ಮೈಸೂರು
ಕರೆ ಮಾಡಿ: 8867 499 510

ಕೆಲಸಕ್ಕೆ ಬೇಕಾಗಿದ್ದಾರೆ
ಐಸ್‌ಕ್ರೀಂ, ಮಿಲ್ಕ್ ಶಾಪ್, ಸ್ಯಾಂಡ್‌ವಿಚ್ ಮಾಡಲು ಸಂಜೆ 6 ರಿಂದ ರಾತ್ರಿ 10 ರವರೆಗೆ ಹುಡುಗರು, ಪುರುಷರು, ಮಹಿಳೆಯರು ಸಂಪರ್ಕಿಸಿ:
Mob: 63643 45433
(ಕುವೆಂಪುನಗರ ಸುತ್ತಮುತ್ತ ಇರುವವರು ಮಾತ್ರ)

ನೇರ ಸಂದರ್ಶನ
ಶಾಲಾ ನೇಮಕಾತಿ ಅಭಿಯಾನ
- ಶಿಕ್ಷಕರು ಬೇಕಾಗಿದ್ದಾರೆ
- ಶಾಲಾ ಬಸ್ ಚಾಲಕರು
- ಸೆಕ್ಯೂರಿಟಿ ಗಾರ್ಡ್‌ಗಳು

(ಉಚಿತ ಕೌಟುಂಬಿಕ ವಸತಿ)
ಸ್ಥಳ: ಇಲವಾಲ, ಮೈಸೂರು
ಕರೆ ಮಾಡಿ: 88674 99510

ಶ್ರೀ ಗೌರೀಶಂಕರ ಟ್ರಾವೆಲ್ಸ್
29-5-2026 (13 ದಿನ): ಹರಿದ್ವಾರ್, ಗಂಗೋತ್ರಿ, ಯಮುನೋತ್ರಿ, ಕೇದಾರ್ ನಾಥ್, ಬದರೀನಾಥ್, ದೆಹಲಿ ಇತ್ಯಾದಿ
20-6-2026 (2 ದಿನ): ಕೊಟ್ಟಿಯೂರು, ಕಣ್ಣೂರು ಬೀಚ್, ಮಡಿಕಾಪ್, ರಾಜರಾಜೇಶ್ವರಿ ಇತ್ಯಾದಿ
Mob: 9620002114

WANTED
Teaching staff for reputed institution (Experience Preferred) for English, Maths, Science and Nursery subjects.Transport facilities available. Drop your resume through WhatsApp
8971577685
9980631121

MAHI NAMMADE CONSTRUCTION
Approval plan, estimation, 3d elevation
ಕಡಿಮೆ ದರದಲ್ಲಿ ಮಾಡಿಕೊಡಲಾಗುವುದು.
Mob: 7899162660

SITE FOR SALE
40×60 North-facing, DTS Rao Nagar Layout, Sathgalli village, Mysore. Contact :
9986621579

ಮಾರಾಟಕ್ಕಿದೆ
ವಿಜಯನಗರ 4ನೇ ಹಂತ 2ನೇ ಘಟ್ಟ ವಿಜಯನಗರ ಮುಖ್ಯ ರಸ್ತೆ 80 ಅಡಿ ರಸ್ತೆ ಹತ್ತಿರ 30x40 ಅಳತೆಯ ನಿವೇಶನ ಮಾರಾಟಕ್ಕಿದೆ. ಕೊಳ್ಳುವವರು ಮಾತ್ರ ಸಂಪರ್ಕಿಸಿ :
7026724407

ಬೇಕಾಗಿದ್ದಾರೆ
ಹೋಟೆಲ್ ಉದ್ಯಮದಲ್ಲಿ Cheff ಮತ್ತು ವೇಟರ್ ಅನುಭವಿ ಮಹಿಳೆಯರು ಮತ್ತು ಪುರುಷರಿಗೆ ಆದ್ಯತೆ. ಹೋಟೆಲ್ ಗೋಲ್ಡನ್ ಕ್ಲಾಸ್, ನಂ. 3615/1, 28/1, ಹಳೇಯ ಆರ್.ಎಂ.ಸಿ ಎದುರು, ಟಿವಿಎಸ್ ಪಕ್ಕ, ಸಯ್ಯಾಜಿರಾವ್ ರಸ್ತೆ, ಮೈಸೂರು-570021.
ಇ-ಮೇಲ್ : gemsyuru@gmail.com
9845293146

ಮಹಿಳಾ ಮನೆ ಕೆಲಸದವರು ಬೇಕಾಗಿದ್ದಾರೆ
ಮನೆ ಕೆಲಸ ಮತ್ತು ಮಕ್ಕಳ ಆರೈಕೆಗಾಗಿ ವಿಶ್ವಾಸಾರ್ಹ, ನಮ್ಮ ಮನೆಯಲ್ಲಿಯೇ ವಾಸವಿರುವವರನ್ನು ಹುಡುಕುತ್ತಿದ್ದೇವೆ. ವಸತಿ, ಆಹಾರ ಒದಗಿಸಲಾಗುವುದು. ಸಂಬಳ: 21000/- ದಟ್ಟಗಳ್ಳಿ, ಮೈಸೂರು.
9663570750

ಸದ್ಗುರು ಮ್ಯಾರೇಜಸ್
ಕುರುಬ ಶ್ರೀಮಂತ ಕೋಟ್ಯಾಧೀಶ್ವರ ಸ್ವಂತ ಕಂಪನಿ ಬಿಜಿನೆಸ್, ಸೈಟುಗಳು, ಮನೆಗಳು, ಜಮೀನು ಇರುವ ಒಬ್ಬನೇ ವರನಿಗೆ ಸೂಕ್ತ ವಧುಬೇಕು. ನೇರ ಸಂಪರ್ಕಿಸಿ.
9448229184
7899625268

ಬೇಕಾಗಿದ್ದಾರೆ
ಮೈಸೂರು ಜಿಲ್ಲೆಯಲ್ಲಿ ಇರುವ ಕಾರ್ ಶೋರೂಮ್ ಹಾಗೂ ಬೈಕ್ ಶೋರೂಮ್‌ಗಳಿಗೆ, ತಕ್ಷಣ ಯುವಕ ಮತ್ತು ಯುವತಿಯರು ಬೇಕಾಗಿದ್ದಾರೆ. EDUCATION SSLC, PUC, ITI, DIPLOMA, DEGREE ಜಾಬ್ ಇರುವ ಹುದ್ದೆಗಳು, CASHIER, BILLING, RECEPTIONIST, HR, ADMIN, ACCOUNTANT ETC, SALARY (18k -38k), ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ
9632659609
7899627704

ಬೇಕಾಗಿದ್ದಾರೆ
1. ಟೈಲರುಗಳು 2. ಹೆಲ್ಪರ್‌ಗಳು, 3. ಅನುಭವವುಳ್ಳ ಅಕೌಂಟೆಂಟ್‌ಗಳು 4. ಡ್ರೈವರ್‌ಗಳು 5. ಡ್ರೈವರ್ cum ಮಾರ್ಕೆಟಿಂಗ್, 6. ಡಿಪ್ಲೋಮ ಹುಡುಗರು, ಸೆಕ್ಯೂರಿಟಿ ಗಾರ್ಡ್, ವೆಲ್ಡರ್, ಸಂಪರ್ಕಿಸಿ :
81052 49880
77952 85485

ಉಚಿತ ತರಬೇತಿ
ಮನೆಯಿಂದಲೇ ಬತ್ತಿಗಳು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

Document Lost
Mamatha Joshi No: 786/5A Anantha House Tottakkara Road Pathaikara Post Perinthalamanna Malappuram, Kerala-679322. Property No2. Rama krishnanagra 1) Possession Certificate 2) Allotment Letter 3) Sale deed 4) khatta 3nos 5) Plan & License 6) Partision Deed and Other Connected Docment Lost. Finders Contact: 9035989183

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲೋಮ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸೆಂಟ್ ಮೇರಿಸ್ ಆಸ್ಪತ್ರೆ ಸಿಲ್ಕ್ ಫ್ಯಾಕ್ಟರಿ ಸರ್ಕಲ್, NIE ಕಾಲೇಜ್ ಪಕ್ಕ, ಮೈಸೂರು
Mob: 9916908454

ಬೇಕಾಗಿದ್ದಾರೆ
5 ವರ್ಷ ಅನುಭವವುಳ್ಳ Security Field Officer ಬೇಕಾಗಿದ್ದಾರೆ.
Whatsapp resume to
7795104543
9538886328

ಸೈಟು ಬೇಕಾಗಿದೆ
ಶಕ್ತಿನಗರ, ವಿದ್ಯಾಶಂಕರ್ ಲೇಔಟ್, ಬಸವೇಶ್ವರ ಲೇಔಟ್ ಮತ್ತು ಟೀಚರ್ ಲೇಔಟ್ ಇಲ್ಲಿ 60x40, 50x40, 50x30 ಮತ್ತು 30x40(ಪೂರ್ವ ಮತ್ತು ಉತ್ತರ ಮಾತ್ರ)ನೇರ ಮಾಲೀಕ, ಸೈಟ ಮಾರಾಟಗಾರರು ಮಾತ್ರ
7019740655ರ
ಮೂಲಕ ಸಂಪರ್ಕಿಸುವುದು. ಮಧ್ಯವರ್ತಿಗಳು ಕ್ಷಮಿಸಿ.

ತಕ್ಷಣ ಬೇಕಾಗಿದ್ದಾರೆ
ಹುಡುಗಿಯರು
ಟೆಲಿಕಾಲರ್ (11000)+ Incentive)
ಸ್ಥಳ : ಚಾಮುಂಡಿಪುರಂ
63640 83091

ಡ್ರೈವರ್ ಬೇಕಾಗಿದ್ದಾರೆ
ಡ್ರೈವಿಂಗ್ ಶಾಲೆಯಲ್ಲಿ ತರಬೇತಿ ನೀಡಲು ನುರಿತ ಡ್ರೈವರ್ ಬೇಕಾಗಿದ್ದಾರೆ. ಹೆಬ್ಬಾಳ್ ಸಮೀಪದವರು ಮಾತ್ರ ಸಂಪರ್ಕಿಸಿ.
9880181918

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www.imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

PLOTS FOR SALE
at Rs 2600 per sq.ft Narayanaguru Nagara layout, Kumarabeedu, 1km from Sobha Retreat Layout, Mysore. Brokers Excuse. Contact:
7483722108

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

100% TEAK WOOD
FACTORY FINISH DOORS & WINDOWS
@ FACTORY DEPOT RATES



10 YEARS WARRANTY
9731591267
9901291267

ಮನೆಯಿಂದಲೇ ಕೆಲಸ ನೇರ ನೇಮಕಾತಿ
ಡೇಟಾ ಎಂಟ್ರಿ, ಫಾರಂ ಫಿಲ್ಲಿಂಗ್, ಟೆಲಿ ಕಾಲರ್, ಪ್ಯಾಕಿಂಗ್, ಲೇಬಲ್ ಮಾಡುವುದು ದಿನದಲ್ಲಿ 4 ಗಂಟೆಗಳ ಕೆಲಸ ಗೃಹಿಣಿಯರಿಗೆ, ಮಹಿಳೆಯರಿಗೆ, ಪುರುಷರಿಗೆ & ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶವಿದೆ. Work from home.
18,000 ರಿಂದ 30,000.
Mob: 7090177661

ಆಫೀಸ್ / ಗೋಡೌನ್ ಬಾಡಿಗೆಗೆ ದೊರೆಯುತ್ತದೆ
ಅಳತೆ 12x26
ಭೀಮ ಜ್ಯುವೆಲರ್ಸ್ ಹಿಂಭಾಗ, ದೇವರಾಜ ಅರಸು ರಸ್ತೆ ಹತ್ತಿರ
99457 58599

ಜಮೀನು ಮಾರಾಟಕ್ಕಿದೆ
ಮೈಸೂರಿನ ಕುವೆಂಪುನಗರದಿಂದ ಕೇವಲ ಆರು ಕಿಲೋಮೀಟರ್ ದೂರದಲ್ಲಿರುವ ಹೆರಿಟೇಜ್ ರಿಂಗ್ ರೋಡ್‌ಗೆ ಹೊಂದಿಕೊಂಡಿರುವ ಲೇಔಟ್‌ಗೆ ಸೂಕ್ತವಾದ 8.5 ಎಕರೆ ಜಮೀನು ಮಾರಾಟಕ್ಕಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿ : ಡಾ. ಗುರುಪ್ರಸಾದ್
9036284426

FOR LEASE
3 BHK House Kuvempunagara M Block Mysore
9972118999

SITE FOR SALE
20/30 MUDA Site For Sale in VIVEKANANDA NAGARA Circle Near Bhramaramba Choultry Mysore.
30/60 Site for Sale In Dattagalli Near SARA Mahesh Choultry Mysore.
PH: 9900464111

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬೇಕಾಗಿದ್ದಾರೆ
ಶಾಲೆಯಲ್ಲಿ ಕಸಗುಡಿಸಲು ಮತ್ತು ಆಯಾಗೆ ಹಾಗೂ ಮನೆ ಕೆಲಸಗಳಿಗೆ 40 ವಯಸ್ಸು ಒಳಪಟ್ಟ ಆರೋಗ್ಯವಂತ ಮಹಿಳೆಯರು, ತಕ್ಷಣ ಸೇರಬೇಕು. ಕೆಲಸದ ಸಮಯ ಬೆಳಗ್ಗೆ 9 ರಿಂದ ಸಂಜೆ 5-30, ಸಂಬಳ ಪ್ರತಿ ದಿನಕ್ಕೆ 400/- ಜ್ಞಾನ ಗಂಗೋತ್ರಿ ಶಾಲೆ, ರಾಜೀವನಗರ, ಮೈಸೂರು.
8762205021

ಸಂಪರ್ಕಿಸಿ
ನಾಟಿಸ್ಟೈಲ್ ನಾನ್‌ವೆಜ್ ಅಡಿಗೆಯವರು ಬೇಕಾದಲ್ಲಿ ಸಂಪರ್ಕಿಸಿ
9945637026

ಹಳೆಮನೆ ಮಾರಾಟಕ್ಕಿದೆ
ಜಯನಗರ, "50x60", 60' ಅಡಿ ರಸ್ತೆ, ಪಕ್ಕದಲ್ಲಿದೆ, ಬೆಲೆ 9,750/- per Sq. ft. ಖರೀದಿದಾರರು ಮಾತ್ರ ಸಂಪರ್ಕಿಸಿ:
9342119411
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)

DOCUMENT LOST
I, H. Abdul Munaf R/a # 137, Chaithra Apartment, Old No 6, New No 26, 2nd Floor, Swamy Vivekananda road, Yadavagiri, Devaraj Mohalla, Mysore-570020 have lost Original absolute Sale Deed, Reg No 2336, Name H Abdul Munaf, CD No MYSD74, MYS 1 02336 2006 and 2007, Finders Contact:
9902610699

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್ - ಪುರುಷರು
2) ಹೌಸ್‌ಕೀಪಿಂಗ್ - ಪುರುಷರು / ಮಹಿಳೆಯರು
3) ಕೆಫೆ ಕೌಂಟರ್: ಬಾಯ್/ಗರ್ಲ್.
ಸ್ಥಳ: ಹೆಬ್ಬಾಳು, ಕುವೆಂಪುನಗರ, ಬೋಗಾದಿ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
9482810407, 9739199355

ಬೇಕಾಗಿದ್ದಾರೆ
ಫುಟ್‌ವೇರ್ ಅಂಗಡಿಯಲ್ಲಿ ಕೆಲಸ ನಿರ್ವಹಿಸಲು ಸೇಲ್ಸ್‌ಮೆನ್ ಹುಡುಗರು / ಹುಡುಗಿಯರು ಬೇಕಾಗಿದ್ದಾರೆ.
Mob: 8951593118

PG ಯಲ್ಲಿ ಅಡುಗೆ ಸಹಾಯಕಿ ಹಾಗೂ ವಾರ್ಡನ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಕಡ್ಡಾಯವಾಗಿ PG ಯಲ್ಲೇ ಉಳಿಯಬೇಕು. ಊಟ ವಸತಿ ಇರುತ್ತದೆ. ಸಂಪರ್ಕಿಸಿ:
9535744143 / 9986622769

ಮನೆ ಮಾರಾಟಕ್ಕಿದೆ
30x50 E/F ನಿರ್ಸ KHB ಇಲವಾಲ 2 ಬಿ ಬೆಡ್, ಓವರ್ ಟ್ಯಾಂಕ್, ಸೋಲಾರ್, ಕಾಂಪೌಂಡ್, ಬೆಲೆ 65 ಲಕ್ಷ.
Mob: 9379655551

ಮ್ಯೂಸಿಕ್ ಸ್ಟುಡಿಯೋ
ಮೈಸೂರಿನ ಸ್ಟುಡಿಯೋದಿಂದ ಲೈವ್ ನಲ್ಲಿ ಚಲನಚಿತ್ರ ಗೀತೆಗಳನ್ನು ಹಾಡಲು ಉತ್ಸಾಹಿ ಸಿಂಗರ್‌ಗಳು ಹುಡುಗರು, ಹುಡುಗಿಯರು, ಮಹಿಳೆಯರು, ಪುರುಷರು ಬೇಕಾಗಿದ್ದಾರೆ.
Mob: 9901080314

WANTED IMMEDIATELY
ASSTS(M/F) WITH 2 WH FLUENT IN ENGLISH. AGE NO BAR, PART TIME/FULL TIME ಮಹಿಳೆಯರು ಮನೆ ಕೆಲಸಕ್ಕೆ (2 ಗಂಟೆ) ವಯೋಮಿತಿ ಇಲ್ಲ, ಜೆ.ಪಿ.ನಗರ ಸುತ್ತಮುತ್ತ ಇರುವವರು ಬೇಕಾಗಿದ್ದಾರೆ.
9449923880

ನೇರ ಸಂದರ್ಶನ
1) ಭದ್ರತಾ ಸಿಬ್ಬಂದಿ - 10 ಜನ. 25 ರಿಂದ 35 ವರ್ಷ. ವಾರದ ಸಂಬಳವಿರುತ್ತದೆ. 2) ಡೇಟ ಆಪರೇಟರ್ (ಮಹಿಳೆ ಮಾತ್ರ) ಮೇಟಗಳ್ಳಿ, ವಿಜಯನಗರ, ಹೆಬ್ಬಾಳ್, ಗೋಕುಲಂ ಸುತ್ತಮುತ್ತ ಮಾತ್ರ BA, BCom any degree (MS WORD/EXCEL KANNADA NUDI)
ಸಂಪರ್ಕಿಸಿ: 99007 49104
90367 45292

RUNNING BOUTIQUE FOR SALE
Well-established running boutique available for sale at Bogadi. Good location with existing customer base. Interested buyers can contact:
9742758790

ತಕ್ಷಣ ಬೇಕಾಗಿದ್ದಾರೆ
ಸರಸ್ವತಿಪುರಂ ಕುವೆಂಪುನಗರ ಏರಿಯಾದಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮೇಲ್ಪಟ್ಟು, ವಯೋಮಿತಿ : 48 ವರ್ಷದೊಳಗೆ ಸಂಬಳ : 23,000/-, 26 ದಿನಗಳು ಊಟ, ತಿಂಡಿ ಸೌಲಭ್ಯವಿರುತ್ತದೆ.
9620777819

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದಲ್ಲಿನ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ ವಿದ್ಯಾರ್ಹತೆ : SSLC ಮೇಲ್ಪಟ್ಟು, ಸಂಬಳ: 18000 (8 ಗಂಟೆ, 26 ದಿನಗಳು) ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ.
9620777819

WANTED
HEALTHCARE SALES / MANAGER / OFFICE BOYS / HOME CARE AT MYSORE / MANDYA / NEED BUSINESS DEVELOPMENT EXECUTIVE / MANAGER MALE FRESH WITH 0 TO 10 YEARS EXPERIENCE IN DIAGNOSTIC / HEALTHCARE / PHARMA. PART TIME PERSON CAN ALSO APPLY. ALSO NEED HOME CARE FEMALE AT MYSORE. CONTACT NO
888-464-5218
SEND CV TO : myfamilycustomercare@gmail.com

HOUSE FOR SALE
30x40, W/N door 2 BHK 9 years old, Single floor Dattagalli Mysore Rs. 1.65 cr. Slightly negotiable. Contact genuine buyers only.
9606774333

ಬೇಕಾಗಿದ್ದಾರೆ
Marketing executives-Min 2yrs Experience
ಮಿನರಲ್ ವಾಟರ್ ಡಿಸ್ಟ್ರಿಬ್ಯೂಷನ್ ಕಂಪನಿಗೆ Office : Bannimantap, Mysore,
9611073939

ಸೈಟುಗಳು ಮಾರಾಟಕ್ಕಿವೆ
ಟಿ.ನರಸೀಪುರ ರಸ್ತೆ
20x30, 22x36
30x40,
30x50 ಕಾರ್ನರ್,
20x40 E/F
9686071750
9187593627

We are HIRING
House wives, Leaders, Retired persons / NRIs / Teachers, Self employed, Automobile distributor. Benefits: Flexible working hours. Earn minimum 50k pm. Promotion. Reward and recognition. Foreign trips. Contact
Suryakala-9845543874

FOR SALE
JP Ngr 40x60 G+1 New Construction
Dattagalli 30x40 G+1 New House.
30x40 New Duplex VidyaranyPrm
50x85 Duplex House @ Ramakrishna Nagar
30x45 Corner Commercial Sites @ 80 Feet Road, Dattagalli
23x35 G+1 House @ Srirampura
PRAKRUTHI PROPERTIES
95386 90359, 90359 90359



VGUARD
10 ವರ್ಷಗಳ ವಾರಂಟಿ
Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

PRAKRUTHI PROPERTIES
FOR SALE
30x50+Sites Opp Park@ 60ft & 50ft Road Approach, Available Nr Defence Apartments
From blueprint to doorstep—we build and deliver
Near Rainbow School Bogadi
20x30 2BHK 45L
20x30 3BHK 60L
20x30 4BHK 62L
2&3 BHK Apartments @ Prime Location in Ramakrishna Nagar
95386 90359, 90359 90359

DTCP SITES FOR SALE
THALUR CIRCLE, OFF SRIRAMPURA RING ROAD, HD KOTE RDAD, MYSURU.
₹1900/- per Sft.
9606966006

MUDA & DTCP APPROVED SITES
Last "5" Sites available Just @ rs. 3,333/- per Sqt, Near International Cricket Stadium, Bogadi Road,
9945-0202-12

ಬೇಕಾಗಿದ್ದಾರೆ
ಶಾಲೆಯಲ್ಲಿ ಕೆಲಸ ಮಾಡಲು ಮಹಿಳಾ ಆಯಾ, ಹೆವಿ ಲೈಸನ್ಸ್ ಹೊಂದಿರುವ ಅನುಭವಿ ಡ್ರೈವರ್ ಹಾಗೂ ಸೆಕ್ಯುರಿಟಿ ಗಾರ್ಡ್ ಬೇಕಾಗಿದ್ದಾರೆ. ಸಂಪರ್ಕಿಸಿ:
Mob: 9606959451

MUDA SITE FOR SALE
RT NAGAR, MYSURU
₹5400/- PER SFT.
9611110601

ಬಾಡಿಗೆಗೆ ಇದೆ
1) 40x60 ಕಮರ್ಷಿಯಲ್ ಬಿಲ್ಡಿಂಗ್ ಶ್ರೀರಾಂಪುರ 2ನೇ ಹಂತ, (ಭ್ರಮರಾಂಬ ಕಲ್ಯಾಣ ಮಂಟಪದ ಹತ್ತಿರ)
2) 2 ಬೆಡ್ ರೂಂ ಇಂಡಿಪೆಂಡೆಂಟ್ ಮನೆ, ಪೂರ್ವದಿಕ್ಕು, ಅಮೃತ್ ಬೇಕರಿ, ಶ್ರೀರಾಂಪುರ 2ನೇ ಹಂತದಲ್ಲಿ ಬಾಡಿಗೆಗೆ ಇದೆ
9036413529

ಬೇಕಾಗಿದ್ದಾರೆ
ಮಂಡ್ಯ ಜಿಲ್ಲೆ, ಅರಕೆರೆಯಲ್ಲಿ ಅಡುಗೆ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ವಯಸ್ಸು 18-45 #380/ಎ, 2ನೇ ಮಹಡಿ, ಕೃಷ್ಣ ವಿಲಾಸ ರಸ್ತೆ, ಮೈಸೂರು
9964820837
9606023463

ಬೇಕಾಗಿದ್ದಾರೆ
ಕಂಪ್ಯೂಟರ್ Typing ಬಲ್ಲ ನುರಿತ ಅಭ್ಯರ್ಥಿಗಳು Office ಕೆಲಸಕ್ಕೆ ಬೇಕಾಗಿದ್ದಾರೆ
ಅನಿಲ್ 7026996123
ಶೇಖರ್ 9945911118

ಸೈಟು ಮಾರಾಟಕ್ಕಿದೆ
25x30
Site No. 533, 6ನೇ ಕ್ರಾಸ್, ಎಸ್.ಎಸ್.ನಗರ, ಬನ್ನಿಮಂಟಪ 'ಬಿ' ಲೇಔಟ್, ಮೈಸೂರು.
Mob: 8412866262

ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ
Home appliances ಕಂಪನಿಯಲ್ಲಿ ಟೆಕ್ನೀಷಿಯನ್ ಆಗಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ
Mob: 9880151303
Salary - 25000/-

ಮನೆಯಿಂದಲೇ ಕೆಲಸ
ಗೃಹಿಣಿಯರು, ವಿದ್ಯಾರ್ಥಿಗಳು, ನಿವೃತ್ತ ಹೊಂದಿರುವವರು, ಲೈಸೆನ್ಸ ಮಿತಿ ಇಲ್ಲ, ನಿಮ್ಮ ಬಿಡುವಿನ ವೇಳೆಯಲ್ಲಿ ಕೆಲಸ ಮಾಡಿ, ಡೈಲಿಟಿಂಗ್, ಫಾರಂ ಫಿಲ್ಲಿಂಗ್, ಹಾಡು ಎಂಟ್ರಿ, ಪೆನ್ಸಿಲ್ ಪ್ಯಾಕಿಂಗ್, ಕ್ಯಾಂಡಲ್ ಪ್ಯಾಕಿಂಗ್, ಹೇರ್ ಕ್ಲಿಪ್, ಪೆನ್ನಿನ್ ಪ್ಯಾಕಿಂಗ್, ಇನ್ನೂ ಅನೇಕ ರೀತಿಯ ಕೆಲಸ ಪಡೆಯಿರಿ ಇನ್ನೂ ಅನೇಕ ಕೆಲಸ ಮಾಡಲು ಆಸಕ್ತರು ಸಂಪರ್ಕಿಸಿ, ಮಾಡಲು ಎಲ್ಲರಿಗೂ ಮುಕ್ತ ಅವಕಾಶ. ಗಳಿಸಿ ತಿಂಗಳಿಗೆ ತಿಂಗಳಿಗೆ 30,000/- ರಿಂದ 40,000/- ವರೆಗೆ
9606983268

WANTED
Sri Sapthagiri Builders and Developers, Mysuru
1) Marketing Executive: Experience person required. basic salary 20K + Incentive
Mob: 9591828444

ಸುವರ್ಣ ಯಾತ್ರಾ
13 ದಿನಗಳ ಚಾರ್ ಧಾಮ್ ಪ್ರವಾಸ 26/5/26
9 ದಿನಗಳ ನೇಪಾಳ ಪ್ರವಾಸ 04/06/26
9 ದಿನಗಳ ಕಾಮಾಕ್ಯ ಮೇಘಾಲಯ ಅರುಣಾಚಲ ಪ್ರದೇಶ ಪ್ರವಾಸ 10/6/26
6360146483
9008381022

ಬೇಕಾಗಿದ್ದಾರೆ
ರೋಗಿಗಳನ್ನು, ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವ ಇರುವ ಮಹಿಳೆಯರು ಪುರುಷರು ಬೇಕಾಗಿದ್ದಾರೆ. Day/night/24 hrs ಕೆಲಸ ಮಾಡುವವರು. ಸಂಪರ್ಕಿಸಿ:
8951717070

ನೇಮಕಾತಿ
ಫೀಲ್ಡ್ ಸೇಲ್ ಎಕ್ಸಿಕ್ಯೂಟಿವ್, ಅನುಭವ: 0-1 ವರ್ಷ, ವೇತನ : 18 ಸಾವಿರದಿಂದ 30 ಸಾವಿರ, ಅರ್ಹತೆ : 10ನೇ/12ನೇ ತರಗತಿ, ಬೈಕ್ + ಮೊಬೈಲ್ ಇರಬೇಕು. ಕೆಲಸದ ಸ್ಥಳ : ಮೈಸೂರು ನಗರ.
Mob: 6363806349

ತಕ್ಷಣ ಬೇಕಾಗಿದ್ದಾರೆ
ಚಟ್ನಿ, ಮಡಾನ, ಕೆ.ಆರ್. ಆಸ್ಪತ್ರೆ ಹತ್ತಿರ, ಕೇಸರಬಾತ್, ಹುಲಿಕೆರೆ, ಹೋಟೆಲ್ ಹತ್ತಿರ ಕೆಲಸ ಮಾಡಲು ಸೆಕ್ಯೂರಿಟಿ, ಸೂಪರ್‌ವೈಸರ್, ಸೆಕ್ಯೂರಿಟಿ ಗಾರ್ಡ್, ಫೀಲ್ಡ್ ಆಫೀಸರ್ ತಕ್ಷಣ ಬೇಕಾಗಿದ್ದಾರೆ. ESI & PF ಹಾಗೂ ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ:
8660309477

ಬೇಕಾಗಿದ್ದಾರೆ
ಖಾಸಗಿ ಶಾಲೆಯಲ್ಲಿ ಆಯ ಕೆಲಸಕ್ಕಾಗಿ ಇಬ್ಬರು ಹೆಂಗಸರು ಬೇಕಾಗಿದ್ದಾರೆ. (ವಯೋಮಿತಿ 30 ರಿಂದ 40 ವರ್ಷ) ಸೆಕ್ಯೂರಿಟಿ ಕೆಲಸಕ್ಕಾಗಿ ಇಬ್ಬರು ಗಂಡಸರು ಬೇಕಾಗಿದ್ದಾರೆ. (ವಯೋಮಿತಿ 45-50 ವರ್ಷದೊಳಗೆ)
8197983888

STAFF WANTED
Premium Ice Cream Parlour – Mysore
- Store Manager
- Asst. Manager
- Senior Guest Service Staff
- Guest Service Staff

Age limit: Up to 40 years
Good Salary | Immediate Joining
8792464700

ಕುಬೇರಮಿತ್ರ ನಿಧಿ ಲಿಮಿಟೆಡ್
Relationship Officer & Area Manager.
Qualification: SSLC, PUC & Any Degree
Salary: 18,000 to 30,000.
ESI, PF & incentive available.
8296656589
9731756977

SITE FOR SALE
VIJAYANAGAR 4TH STAGE, 1650 Sft, North facing, Contact:
9845187966

ಕೆಲಸಕ್ಕೆ ಬೇಕಾಗಿದ್ದಾರೆ
ಸೆಕ್ಯೂರಿಟಿ ಏಜೆನ್ಸಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಫೀಲ್ಡ್ ಆಫೀಸರ್ ಬೇಕಾಗಿದ್ದಾರೆ. ಕೆಲಸದಲ್ಲಿ ಅನುಭವ ಇರಬೇಕು. ಎಸ್.ಎಸ್.ಎಲ್.ಸಿ ಪಾಸ್, ಸ್ಕೂಟರ್ ಇರಬೇಕು, ವಯಸ್ಸು 45ರ ಒಳಗೆ).
8105522314
8310098788

CHANGE OF NAME
I, Manju H.S., residing at No. 89, HIG, FF (2), Group 1, KHB Colony, Hootagalli, Mysuru-570 018, have changed my minor daughter's name from Vaishnavi M to Niveditha M. on my own free will in front of Notary C. Mangala, dtd. 12-5-2026 at Mysuru.
Sd/- Manju H.S.

ಮೈಸೂರು ಮಿತ್ರ 47
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸರ್ಹವೆಂದೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಂದಿಗೆ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರರಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಕಾರ್ಮಿಕ ಸಂಹಿತೆಗಳ ರದ್ದತಿಗೆ ಆಗ್ರಹಿಸಿ ಪ್ರತಿಭಟನೆ

ತಿ.ನರಸೀಪುರ, ಮೇ 13– ಕೇಂದ್ರ ಸರ್ಕಾರ ಜಾರಿಗೆ ತರಲು ಉದ್ದೇಶಿಸಿರುವ 4 ಕಾರ್ಮಿಕ ಸಂಹಿತೆಗಳು ಕಾರ್ಮಿಕರಿಗೆ ಅತ್ಯಂತ ಮಾರಕವಾಗಿರುವುದರಿಂದ ಅವುಗಳನ್ನು ರದ್ದುಪಡಿಸುವಂತೆ ಒತ್ತಾಯಿಸಿ ಪಟ್ಟಣದಲ್ಲಿ ತಾಲೂಕು ಸಿಐಟಿಯು ಘಟಕ ಪ್ರತಿಭಟನೆ ನಡೆಸಿತು.

ಪಟ್ಟಣದ ತಾಲೂಕು ಕಚೇರಿ ಎದುರಿನ ಅಂಬೇಡ್ಕರ್ ಪುತ್ಥಳಿ ಮುಂದೆ ಹೊಸ ಕಾರ್ಮಿಕ ಸಂಹಿತೆಯ ಪ್ರತಿ ಸುಡುವ ಮೂಲಕ ಪ್ರತಿಭಟನೆ ನಡೆಸಿ ಮಾತನಾಡಿದ ಕಾರ್ಮಿಕ ಮುಖಂಡ ಆಲಗೂಡು ಪುಟ್ಟಮಲ್ಲಯ್ಯ, ದೇಶದಲ್ಲಿ ನೂತನ ಕಾರ್ಮಿಕ ಸಂಹಿತೆಗಳ ಜಾರಿಗೆ ಹಲವು ಸಂಘಟನೆಗಳ ವಿರೋಧವಿದ್ದು, ಕಾರ್ಮಿಕರ ವಿರೋಧವನ್ನು ಲೆಕ್ಕಿಸದೆ ಕೇಂದ್ರ ಸರ್ಕಾರ ಹೊಸ ಕಾರ್ಮಿಕ ಕಾನೂನುಗಳನ್ನು ಜಾರಿಗೆ ತರುತ್ತಿರುವುದು ವಸಾಹತುಶಾಹಿ ವರ್ಗವನ್ನು ಬೆಂಬಲಿಸಿದಂತೆ ಆಗುತ್ತದೆ. ಹೊಸ ಕಾರ್ಮಿಕ ಸಂಹಿತೆಗಳಿಂದ ಕಾರ್ಮಿಕರ ಅಸ್ತಿತ್ವಕ್ಕೆ ಧಕ್ಕೆ ಆಗಲಿದೆ. ಅಲ್ಲದೆ ಕಾರ್ಮಿಕ ಸಂಹಿತೆಗಳು ಸಮವರ್ತಿತ ಪಟ್ಟಿಯಲ್ಲಿ ಬರುವುದರಿಂದ ದೇಶದಲ್ಲಿನ ಎಲ್ಲಾ ರಾಜ್ಯಗಳು ಹೊಸ ಕಾರ್ಮಿಕ ಸಂಹಿತೆಗಳ ಬಗ್ಗೆ ಆಕ್ಷೇಪ ವ್ಯಕ್ತಪಡಿಸಬೇಕು ಎಂದು ಮನವಿ ಮಾಡಿದರು.

ಹೊಸ ಕಾರ್ಮಿಕ ಸಂಹಿತೆಗಳಿಂದ ಕಾರ್ಮಿಕರ ಬಹುಪಾಲು ಹಕ್ಕುಗಳ ಶೋಷಣೆಯಾಗಲಿದ್ದು, ಕಾರ್ಮಿಕರ ವೇತನ, ಕೆಲಸದ ಅವಧಿ, ಇಡಿಗಂಟು ಮತ್ತು ಕಾರ್ಮಿಕರ ಶ್ರೇಯೋಭಿವೃದ್ಧಿ ಸೇರಿದಂತೆ ಕಾರ್ಮಿಕರ ಹಿತರಕ್ಷಣೆ ಬಗ್ಗೆ ಸಂಹಿತೆಗಳಲ್ಲಿ ಯಾವುದೇ ಉಲ್ಲೇಖವಿಲ್ಲ. ಹಾಗಾಗಿ ಕಾರ್ಮಿಕ ಸಂಹಿತೆಗಳನ್ನು ರದ್ದುಪಡಿಸಲೇಬೇಕು ಎಂದು ಒತ್ತಾಯಿಸಿದರು.


ಕಾರ್ಮಿಕ ಸಂಹಿತೆಗಳ ರದ್ದತಿಗೆ ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು.

ತಾಲೂಕು ರೈತ ಸಂಘದ ಸಂಘಟನಾ ಕಾರ್ಯದರ್ಶಿ ಶಾಂತ ಮೂರ್ತಿ ಮಾತನಾಡಿ, ದೇಶಾದ್ಯಂತ ಹೊಸ ಕಾರ್ಮಿಕ ಸಂಹಿತೆಗಳನ್ನು ರದ್ದುಪಡಿಸುವಂತೆ ಕಾರ್ಮಿಕರು ನಿರಂತರ ಪ್ರತಿಭಟನೆ ನಡೆಸುತ್ತಿದ್ದು, ಕಾರ್ಮಿಕ ವಿರೋಧಿ ಕಾರ್ಮಿಕ ಸಂಹಿತೆಗಳನ್ನು ರದ್ದುಪಡಿಸದಿದ್ದರೆ ಉಗ್ರ ಹೋರಾಟ ನಡೆಸಲಾಗುವುದು ಎಂದರು.

ಪ್ರತಿಭಟನೆಯಲ್ಲಿ ಮುಖಂಡರಾದ ನೀಲಸೋಗೆ ಸಿದ್ದರಾಜು, ಆಲಗೂಡು ಮುತ್ತುರಾಜ್, ನಾಗಮ್ಮ, ಗಾಯತ್ರಮ್ಮ, ಬಸವ ರಾಜು, ಪುಟ್ಟಸ್ವಾಮಿ ಮಹದೇವಮ್ಮ ಇತರರು ಹಾಜರಿದ್ದರು.

ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ನೀರಿನ ಅಭಾವ

ಶಾಸಕರ ಸೂಚನೆ: ಗ್ರೂಪ್ 'ಡಿ' ಸಿಬ್ಬಂದಿ ಅಮಾನತು

ನಂಜನಗೂಡು, ಮೇ 13– ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ನೀರಿನ ಅಭಾವಕ್ಕೆ ಕಾರಣರಾದ ಗ್ರೂಪ್ 'ಡಿ' ಸಿಬ್ಬಂದಿಗಳನ್ನು ಶಾಸಕ ದರ್ಶನ್ ಧ್ರುವನಾರಾಯಣ್ ಸಲಹೆ ಮೇರೆಗೆ ಡಿಹೆಚ್‌ಓ ಡಾ.ಕುಮಾರ ಸ್ವಾಮಿ ಅಮಾನತುಗೊಳಿಸಿದರು.

ಸೋಮವಾರ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ನೀರು ಇಲ್ಲದ ಸಂಬಂಧ ಮಂಗಳವಾರ ಆಸ್ಪತ್ರೆಯ ಆಡಳಿತಾಧಿಕಾರಿ ಮತ್ತು ಡಿಹೆಚ್‌ಓ ಸಮ್ಮುಖದಲ್ಲಿ ಸಭೆ ನಡೆಸಿದ ನಂತರ ಶಾಸಕ ದರ್ಶನ್ ಧ್ರುವನಾರಾಯಣ ಮಾತನಾಡಿ, ಸೋಮವಾರ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ನೀರಿನ ಪೈಪ್‌ಲೈನ್ ಕಾಮಗಾರಿ ನಡೆಸುತ್ತಿದ್ದರಿಂದ ಬೆಳಗ್ಗೆಯಿಂದ ಸಂಜೆವರೆಗೂ ನೀರು ಇರಲಿಲ್ಲ. ಆದರೆ ಕಾಮಗಾರಿ ಮುಗಿದ ನಂತರವೂ ಸಹ ನೀರು ಸರಬರಾಜು ಮಾಡದೇ ಇರುವುದು ಸಿಬ್ಬಂದಿಗಳ ಬೇಜವಾಬ್ದಾರಿತನಕ್ಕೆ ಸಾಕ್ಷಿಯಾಗಿದೆ. ಆದ್ದರಿಂದ ಗ್ರೂಪ್ 'ಡಿ' ನೌಕರರಾದ ಲಕ್ಷ್ಮಿ, ವೆಂಕಟೇಶ್ ಅವರನ್ನು ಅಮಾನತುಗೊಳಿಸಲಾಗಿದೆ. ಜೊತೆಗೆ ರಾತ್ರಿ 10 ಗಂಟೆಯಾದರೂ ರಾತ್ರಿ ಪಾಳಿ ವೈದ್ಯರು ಆಸ್ಪತ್ರೆಯಲ್ಲಿ ಇಲ್ಲದಿರುವುದು ನಾಚಿಕೆಗೇಡಿನ ಸಂಗತಿ. ಈ ಸಂಬಂಧ ವೈದ್ಯೆ ಇರ್ಫಾನ್ ಖಾದ್ರಿ, ನರ್ಸಿಂಗ್ ಸಿಬ್ಬಂದಿ ಪುಟ್ಟರತ್ನ ಅವರಿಗೆ ನೋಟಿಸ್ ಜಾರಿಗೊಳಿಸಲಾಗಿದೆ. ಆಸ್ಪತ್ರೆಯ ಆಡಳಿತ ಅಧಿಕಾರಿ ನಾಗರಾಜು ಅವರಿಗೆ 2 ತಿಂಗಳ ಕಾಲಾವಕಾಶ ನೀಡಲಾಗಿದ್ದು, ಆಸ್ಪತ್ರೆಯ ಸೇವೆಯಲ್ಲಿ ಸುಧಾರಣೆ ಕಾಣದಿದ್ದಲ್ಲಿ ಅವರ ಮೇಲು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ. ಜೊತೆಗೆ ಆಸ್ಪತ್ರೆಯ ಆವರಣದಲ್ಲಿ ನಾಮ ಫಲಕ ಅಳವಡಿಸಿ ಪ್ರತಿ ನಿತ್ಯ ಪಾಳಿಯ ಆಧಾರದ ಮೇಲೆ ಕರ್ತವ್ಯ ನಿರತ ವೈದ್ಯರು ಮತ್ತು ನರ್ಸ್ ಸಿಬ್ಬಂದಿ ಹಾಗೂ ಸ್ವಚ್ಛತಾ ಸಿಬ್ಬಂದಿಯ ಹೆಸರು ದೂರವಾಣಿ ಸಂಖ್ಯೆಗಳನ್ನು ನಮೂದಿಸಬೇಕು. ಅಲ್ಲದೇ ಆಸ್ಪತ್ರೆಯ ವೈದ್ಯಾಧಿಕಾರಿಗಳು ಟಿಹೆಚ್‌ಓ ಮತ್ತು ಡಿಹೆಚ್‌ಓ ಅವರ ದೂರವಾಣಿ ಸಂಖ್ಯೆಯನ್ನು ನಮೂದಿಸಿ ಸಾರ್ವಜನಿಕರು ದೂರು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಒಂದು ವೇಳೆ ಅಧಿಕಾರಿಗಳು ಸ್ಪಂದಿಸದಿದ್ದಲ್ಲಿ ನೇರವಾಗಿ ಸಾರ್ವಜನಿಕರು ನನ್ನ ಗಮನಕ್ಕೆ ತರುವಂತೆ ಇದೇ ಸಂದರ್ಭದಲ್ಲಿ ತಿಳಿಸಿದರು.


ಸಭೆಯಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿದರು.

ಡಿಹೆಚ್‌ಓ ಡಾ.ಕುಮಾರಸ್ವಾಮಿ ಮಾತನಾಡಿ, ಆಸ್ಪತ್ರೆ ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿಗಳು ಮಾಡಿರುವುದು ಕ್ಷಮಿಸಲಾರದ ತಪ್ಪು ಆದ್ದರಿಂದ ಗ್ರೂಪ್ 'ಡಿ' ಸಿಬ್ಬಂದಿಯನ್ನು ಕರ್ತವ್ಯದಿಂದ ಅಮಾನತುಗೊಳಿಸಲಾಗಿದೆ ಅಲ್ಲದೇ ಘಟನೆಗೆ ಕಾರಣರಾದ ಖಾಯಂ ಸಿಬ್ಬಂದಿಯನ್ನು ಅಮಾನತುಗೊಳಿಸಲು ನೋಟಿಸ್ ಜಾರಿ ಮಾಡಲಾಗಿದೆ. ವೈದ್ಯೆ ಇರ್ಫಾನ್ ಖಾದ್ರಿ ಮತ್ತು ನರ್ಸಿಂಗ್ ಪುಟ್ಟರತ್ನ ಅವರ ಮೇಲೆ ಕಾರಣ ಕೇಳಿ ನೋಡಿ ಜಾರಿ ಗೊಳಿಸಲಾಗಿದೆ ಎಂದು ಹೇಳಿದರು.

ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಟಿಹೆಚ್‌ಓ ಈಶ್ವರ್ ಕಾನಟ್ಕೆ ಸೇರಿದಂತೆ ಇತರರಿದ್ದರು.

ಸಂಬಂಧವೇ ಇಲ್ಲದ ಭೂಮಿ ವಿಚಾರದ ಕ್ಯಾತೆ ತೆಗೆದು

ಪ್ರಚಾರದ ಗೀಳಿಗಾಗಿ ಬಿಜೆಪಿ ಮುಖಂಡನಿಂದ ಅಪಪ್ರಚಾರ

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್

ನಂಜನಗೂಡು, ಮೇ 13– ಪ್ರಚಾರದ ಗೀಳಿಗಾಗಿ ಸಂಬಂಧವೇ ಇಲ್ಲದ ಭೂಮಿ ವಿಚಾರದ ಖ್ಯಾತೆ ತೆಗೆದು ಬಿಜೆಪಿ ಮುಖಂಡ ಅನಂತ್ ಅವರು ಕ್ಷೇತ್ರದ ಶಾಸಕರು ಮತ್ತು ಕಾಂಗ್ರೆಸ್ ಪಕ್ಷದ ಮುಖಂಡರನ್ನು ಮನ ಬಂದಂತೆ ನಿಂದಿಸಿ ಅಪ ಪ್ರಚಾರ ಮಾಡುತ್ತಿದ್ದಾರೆ. ಅವರು ತಮ್ಮ ಚಾಳಿ ಬದಲಿಸಿಕೊಳ್ಳದಿದ್ದಲ್ಲಿ ಕಾನೂನು ಮೂಲಕ ತಕ್ಕ ಪಾಠ ಕಲಿಸಲಾಗುವುದು ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್ ಹೇಳಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಮುಖಂಡ ಅನಂತ್ ಅವರು ತಮಗೆ ಸಂಬಂಧಿಸಿಲ್ಲದ ಭೂಮಿಯ ಖ್ಯಾತೆ ತೆಗೆದು ಶಾಸಕರ ಮೇಲೆ ಮತ್ತು ಪಕ್ಷದ ಕೆಲ ಮುಖಂಡರ ಮೇಲೆ ಅಪ ಪ್ರಚಾರ ಮಾಡುತ್ತಿದ್ದಾರೆ. ಅವರನ್ನು ಕರೆಸಿ ಮಾತನಾಡಿ ಎಂದು ಕೆಲ ಸ್ನೇಹಿತರು ಸಲಹೆ ನೀಡಿದ ಮೇರೆಗೆ ಅವರನ್ನು ಕರೆಸಿ ಮಾತನಾಡಿ ನಿಮಗೆ ಏನಾದರೂ ತೊಂದರೆಯಾಗಿದ್ದಲ್ಲಿ ನೀವು ಕಾನೂನು ಮೂಲಕ ಹೋರಾಟ ನಡೆಸಿ ಅದನ್ನು ಬಿಟ್ಟು ಈ ರೀತಿ ಅಪಪ್ರಚಾರದಲ್ಲಿ ತೊಡಗುವುದು ಸರಿಯಲ್ಲ ಎಂದು ಎಚ್ಚರಿಕೆ ನೀಡಿದ್ದೇ. ಈ ವೇಳೆ ಅನಂತ್ ಅವರು ಬೇರೆ 8 ಕುಂಟೆ ಜಮೀನನ್ನು ನಿಮ್ಮ ಪಕ್ಷದ ಮುಖಂಡರು ಮೂಲ ವಾರಸುದಾರರ ಬಳಿ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿ ದರ್ಶನ್ ಎಂಬುವರ ಹೆಸರಿಗೆ ಮಾಡಿಸಿದ್ದಾರೆ. ಆ ಜಮೀನನ್ನು ಬಿಟ್ಟಲ್ಲಿ ಈ ಜಮೀನಿನ ತಂಟೆಗೆ ನಾವು ಹೋಗುವುದಿಲ್ಲ ಎಂದು ಹೇಳಿದ್ದರು. ಆದರೆ ಅನಂತ್ ಅವರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ನನಗೆ ನಿವೇಶನ ನೀಡುವುದಾಗಿ ಆಮಿಷ ಒಡ್ಡಿದ್ದರು ಎಂದು ಪತ್ರಿಕಾ ಹೇಳಿಕೆ ನೀಡಿ ಅಪಪ್ರಚಾರ ಮಾಡಿದ್ದಾರೆ. ಅವರಿಗೆ ಏನಾದರೂ ಅನ್ಯಾಯವಾಗಿದ್ದಲ್ಲಿ ಕಾನೂನಿನ ಚೌಕಟ್ಟಿನಲ್ಲಿ ಹೋರಾಟ ನಡೆಸಲಿ. ಅದನ್ನು ಬಿಟ್ಟು ಹೀಗೆ ನಮ್ಮ ಪಕ್ಷದ ಶಾಸಕರು ಮತ್ತು ಮುಖಂಡರ ಮೇಲೆ ಅಪಪ್ರಚಾರ ಮಾಡಿದಲ್ಲಿ ಕಾನೂನಿನ ಮೂಲಕ ತಕ್ಕ ಪಾಠ ಕಲಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.


ಸುದ್ದಿಗೋಷ್ಠಿಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್ ಮಾತನಾಡಿದರು.

ನಗರಸಭೆ ಮಾಜಿ ಅಧ್ಯಕ್ಷ ಶ್ರೀಕಂಠಸ್ವಾಮಿ ಮಾತನಾಡಿ, ನೀಲಕಂಠ ನಗರದ ಸಮೀಪ ಸರ್ಕಾರ ಪ.ಜಾತಿಯ ಕುಟುಂಬಸ್ಥರಿಗೆ ಚಕ್ರ ಇನಾಂ ಭೂಮಿ ಮಂಜೂರು ಮಾಡಿದ್ದು, ಆ ಭೂಮಿಯನ್ನು ಸರ್ಕಾರದ ನಿಯಮದಂತೆ ವಾರಸುದಾರರು ಮಾರಾಟ ಮಾಡಿ ತಮ್ಮ ಕುಟುಂಬದ ನಿರ್ವಹಣೆ ಮಾಡಿಕೊಳ್ಳುತ್ತಿದ್ದಾರೆ. ಇದನ್ನೇ ಬಂಡವಾಳವನ್ನಾಗಿ ಮಾಡಿಕೊಂಡ ಬಿಜೆಪಿ ಮುಖಂಡ ಅನಂತ್ ಮತ್ತು ಸಹಚರರು ಕೃಷಿ ಭೂಮಿ ಖರೀದಿಸಿದವರಿಗೆ ಬ್ಲಾಕ್ ಮೇಲ್ ಮಾಡುತ್ತಿದ್ದಾರೆ. ದಲಿತರ ಭೂಮಿಗೂ ಅನಂತ್ ಅವರಿಗೂ ಏನು ಸಂಬಂಧ? ಸರ್ಕಾರಿ ಭೂಮಿ ಎಂದು ಆರೋಪಿಸುತ್ತಿರುವ ಸರ್ವೇ ನಂ 1324ರ ಸಿದ್ದಯ್ಯ ಎಂಬುವರ ಹೆಸರಿಗೆ ಸರ್ಕಾರ ಚಕ್ರ ಇನಾಂ ಗ್ರಾಂಟ್ ಜಾರಿ ಮಾಡಿದೆ. ಚಕ್ರ ಇನಾಂ ಭೂಮಿ ಹೇಗೆ ಸರ್ಕಾರ ಭೂಮಿಯಾಗಲು ಸಾಧ್ಯ? ಭೂಮಿ ಸರ್ವೇ ಕಾರ್ಯ ನಡೆಸಿದ ತಾಲೂಕು ಅಧಿಕಾರಿಗಳು ಸಹ ಸ್ಪಷ್ಟನೆ ನೀಡಿದ್ದಾರೆ. ಆದರೂ ಸಹ ಅನಂತ್ ಅವರು ದಲಿತರ ಮೇಲೆ ದಬ್ಬಾಳಿಕೆ ನಡೆಸುವ ಯತ್ನ ನಡೆಸಿ ಶಾಂತಿ ಸುವ್ಯವಸ್ಥೆಯನ್ನು ಕದಡುವ ಕೆಲಸ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ನಗರಸಭಾ ಸದಸ್ಯೆ ಗಾಯಿತ್ರಿ ಮೋಹನ್, ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಚಂದನ್ ಗೌಡ, ಸೇರಿದಂತೆ ಹಲವರಿದ್ದರು.

ನಾಟಕ ಮನರಂಜನೆಯಲ್ಲ ಸಮಾಜದ ಪ್ರತಿಬಿಂಬ

ಸರಗೂರು, ಮೇ 13– ನಾಟಕ ಕೇವಲ ಮನರಂಜನೆಯ ಸಾಧನವಲ್ಲ. ಬದಲಾಗಿ ಸಮಾಜದ ಪ್ರತಿಬಿಂಬ ಎಂದು ನಾಟಕ ನಿರ್ದೇಶಕ ರಾಮಚಂದ್ರ ಅಭಿಪ್ರಾಯಪಟ್ಟರು.

ಪಟ್ಟಣದ ಶ್ರೀಚೌಡೇಶ್ವರಿ ಅಮ್ಮನವರ 86ನೇ ವಾರ್ಷಿಕೋತ್ಸವದ ಅಂಗವಾಗಿ ಆಯೋಜಿಸಿದ್ದ ಮಾಂಗಲ್ಯ ಭಾಗ್ಯ ಹಾಗೂ ದೊಡ್ಡಮನೆ ಮಕ್ಕಳು ಸಾಮಾಜಿಕ ನಾಟಕ ಪ್ರದರ್ಶನ ವೇಳೆ ಮಾತನಾಡಿದ ಅವರು, ನಾಟಕಗಳು ಸಾಮಾಜಿಕ ಸಮಸ್ಯೆಗಳು ಮತ್ತು ಜೀವನದ ಮೌಲ್ಯಗಳನ್ನು ನೇರವಾಗಿ ಪ್ರೇಕ್ಷಕರ ಮುಂದಿಟ್ಟು, ಆತ್ಮಾವಲೋಕನ ಹಾಗೂ ಸಮಾಜದ ತಪ್ಪುಗಳನ್ನು ತಿದ್ದುವ ಕಾರ್ಯ ಮಾಡುತ್ತದೆ. ನಾಟಕವು ಸಮಾಜದಲ್ಲಿನ ಪ್ರಸ್ತುತ ವಿದ್ಯಮಾನಗಳು, ಸಮಸ್ಯೆಗಳು ಮತ್ತು ಸಂಸ್ಕೃತಿಯನ್ನು ಕನ್ನಡಿಯಂತೆ ಪ್ರತಿಬಿಂಬಿಸುತ್ತದೆ. ಶಿಕ್ಷಣದಲ್ಲಿ ವಿದ್ಯಾರ್ಥಿಗಳ ಸೃಜನಶೀಲತೆ, ಭಾಷಾ ಕೌಶಲ್ಯ ಮತ್ತು ಭಾವನಾತ್ಮಕ ಬುದ್ಧಿವಂತಿಕೆಯನ್ನು ಬೆಳೆಸುವಲ್ಲಿ ನಾಟಕಗಳ ಪಾತ್ರ ಪ್ರಮುಖವಾಗಿರುತ್ತದೆ ಎಂದರು.

ನಾಟಕ ನಿರ್ದೇಕ, ನಿವೃತ್ತ ಶಿಕ್ಷಕ ನಾಗರಾಜು ಮಾತನಾಡಿ, ನಾಟಕದಲ್ಲಿ ಪಾತ್ರಾಭಿನಯ ಇತರರೊಂದಿಗೆ ಆತ್ಮವಿಶ್ವಾಸ ಹೆಚ್ಚಿಸುತ್ತದೆ. ಕಲೆ, ಸಂಗೀತ ಮತ್ತು ನೃತ್ಯದ ಮೂಲಕ ಸಾಂಪ್ರದಾಯಿಕ ಕಲೆಗಳನ್ನು ಉಳಿಸಿ ಬೆಳೆಸಲು ನಾಟಕ ಸಹಕಾರಿಯಾಗಿದೆ ಎಂದು ತಿಳಿಸಿದರು.



ನಿವೃತ್ತ ಶಿಕ್ಷಕರನ್ನು ಸನ್ಮಾನಿಸಲಾಯಿತು.

ಡಿಜೆ, ರಸಮಂಜರಿ ಇಂತಹ ಕಾರ್ಯಕ್ರಮದ ನಡುವೆ ಶ್ರೀಚೌಡೇಶ್ವರಿ ಕೃಪಾ ಪೋಷಿತ ನಾಟಕ ಮಂಡಳಿಯಿಂದ ಆಯೋಜಿಸಿದ್ದ ಮಾಂಗಲ್ಯ ಭಾಗ್ಯ ಅಥವಾ ದೊಡ್ಡಮನೆ ಮಕ್ಕಳು ಎಂಬ ಸಾಮಾಜಿಕ ನಾಟಕವು ಜನರ ಮೆಚ್ಚಿಗೆ ಪಾತ್ರವಾಯಿತು. ಇದೇ ವೇಳೆ ನಾಟಕ ನಿರ್ದೇಶಕರು ಹಾಗೂ ನಿವೃತ್ತ ಶಿಕ್ಷಕರಾದ ನಾಗರಾಜು ಹಾಗೂ ರಾಮಚಂದ್ರ ಅವರನ್ನು ಸನ್ಮಾನಿಸಲಾಯಿತು.

ನಾಟಕ ಮಂಡಳಿ ಪಾತ್ರಧಾರಿಗಳಾದ ರಘುರಾಮ್, ವಲ್ಲೀಶ್, ಮಧು, ರಾಘವ, ಗೋಪಾಲ ಕೃಷ್ಣ, ಹರೀಶ್ ಇನ್ನಿತರರಿದ್ದರು.

ಶ್ರೀರಾಮ ಮಂದಿರ, ಬಸವೇಶ್ವರ ದೇವಾಲಯ ಲೋಕಾರ್ಪಣೆ

ಹೆಚ್.ಡಿ.ಕೋಟೆ, ಮೇ 13– ತಾಲೂಕಿನ ಚಿಕ್ಕಕೆರೆಯೂರು ಗ್ರಾಮದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಶ್ರೀರಾಮ ಮಂದಿರ ಮತ್ತು ಬಸವೇಶ್ವರ ದೇವಸ್ಥಾನವನ್ನು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಲೋಕಾರ್ಪಣೆಗೊಳಿಸಿದರು.

ನಂತರ ಮಾತನಾಡಿದ ಸುತ್ತೂರು ಶ್ರೀಗಳು, ಬಸವಣ್ಣ ಮತ್ತು ಶ್ರೀರಾಮಚಂದ್ರ ನಮ್ಮ ಸಮಾಜ ದಲ್ಲಿ ಮಾದರಿ ವ್ಯಕ್ತಿಗಳಾಗಿ ನಿಲ್ಲುತ್ತಾರೆ. ಅವರ ತತ್ವಾದರ್ಶಗಳನ್ನು ಅಳವಡಿಸಿಕೊಂಡು ನಡೆದರೇ ಸಮ ಸಮಾಜ ನಿರ್ಮಾಣವಾಗಲಿದೆ. ಇಂತಹ ದೇವಾಲಯವನ್ನು ಗ್ರಾಮದಲ್ಲಿ ನಿರ್ಮಿಸಿ ಅವರು ನಡೆದು ಬಂದ ಹಾದಿಯನ್ನು ಯುವ ಪೀಳಿಗೆಗೆ ತಿಳಿಸಲು ಹೊರಟಿರುವ ಚಿಕ್ಕಕೆರೆಯೂರು ಗ್ರಾಮಸ್ಥರಿಗೆ ಅಭಿನಂದನೆ ಎಂದರು.

ಆದಿಚುಂಚನಗಿರಿ ಮಹಾಸಂಸ್ಥಾನದ ಮಠದ ನಿರ್ಮಲಾನಂದ ನಾಥ ಸ್ವಾಮೀಜಿ ಮಾತನಾಡಿ, ಹಿಂದೂ ಸಮಾಜದಲ್ಲಿ ರಾಮ ಲಕ್ಷ್ಮಣರಿಗೆ ಅಗ್ರಸ್ಥಾನ ನೀಡುತ್ತಾ ಬಂದಿ ದ್ದೇವೆ. ಮದುವೆ ಯಾದ ದಂಪತಿಗಳಿಗೆ ರಾಮ, ಸೀತೆಯಂತೆ ಮಾದರಿಯಾಗಿ ಬದುಕಿರಿ ಎಂದು ಹಿರಿಯರು ಆಶೀರ್ವಾದ ಮಾಡುವುದನ್ನು ನಾವು ಗಮನಿಸಿದ್ದು, ರಾಮನಿಗೆ ಇರುವ ಮಹತ್ವ ನಮಗೆ ಇದರಿಂದಲೂ ಸಹ ಅರ್ಥವಾಗುತ್ತದೆ ಎಂದರು.


ಚಿಕ್ಕಕೆರೆಯೂರಲ್ಲಿ ಬಸವೇಶ್ವರರ ಪ್ರತಿಮೆ ಮೆರವಣಿಗೆ ಮಾಡಲಾಯಿತು.

ಇದಕ್ಕೂ ಮುನ್ನಾ, ಗ್ರಾಮಕ್ಕೆ ಆಗಮಿಸಿದ ಸ್ವಾಮೀಜಿಗಳನ್ನು ಗ್ರಾಮಸ್ಥರು ವಿವಿಧ ಮಂಗಳವಾದ್ಯಗಳೊಂದಿಗೆ ಸತ್ತಿಗೆ, ಸೂರಪಾನಿಗಳೊಂದಿಗೆ ಮತ್ತು ಮಹಿಳೆಯರು ಪೂರ್ಣ ಕುಂಭ ಕಳಸಗಳೊಂದಿಗೆ ಸ್ವಾಗತಿಸಿ ಗ್ರಾಮದ ಪ್ರಮುಖ ಬೀದಿಗಳ ಮೂಲಕ ದೇವಾಲಯಕ್ಕೆ ಕರೆತಂದಿದ್ದು ವಿಶೇಷವಾಗಿತ್ತು. ಈ ವೇಳೆ ಬಿಡಗಲಿನ ಮಹದೇವ ಸ್ವಾಮೀಜಿ, ಮಾದಾಪುರದ ಚಂದ್ರಮೌಳೇಶ್ವರ ಸ್ವಾಮೀಜಿ ಇದ್ದರು.

ಗೋ ಸಂರಕ್ಷಣೆಗಾಗಿ ಹಿಂದೂಪರ ಸಂಘಟನೆಗಳ ಮನವಿ

ಹುಣಸೂರು, ಮೇ 13– ಸರ್ಕಾರ ಗೋ ಸಂರಕ್ಷಣೆಗಾಗಿ ಏ.27 ಅನ್ನು ಗೋಮಾತೆಯ ಗೌರವ ಧನವನ್ನಾಗಿ ಘೋಷಿಸಬೇಕೆಂದು ವಿಶ್ವ ಹಿಂದೂ ಪರಿಷತ್ ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಕುಂಟೇಗೌಡ ಮನವಿ ಮಾಡಿದರು.

ನಗರದ ತಾಲೂಕು ಕಚೇರಿ ಆವರಣದಲ್ಲಿ ಜಮಾಯಿಸಿದ್ದ ವಿವಿಧ ಹಿಂದೂ ಸಂಘಟನೆಗಳು ಹಾಗೂ ಗೋಪಾಲಕರನ್ನುದ್ದೇಶಿಸಿ ಮಾತನಾಡಿದ ಅವರು, ಗೋವನ್ನು ಪೂಜಿಸುವ ನಾವು ಕೃಷಿ ಚಟುವಟಿಕೆ ಜೊತೆಗೆ ಎಲ್ಲವನ್ನೂ ಪಡೆಯುತ್ತೇವೆ. ಆದರೆ ಮನುಷ್ಯನ ದುರಾಸೆಯಿಂದ ಗೋವನ್ನು ನಿರ್ಲಕ್ಷಿಸುತ್ತಾ ಬಂದಿದ್ದರಿಂದ ಗೋವಿನ ರಕ್ಷಣೆಯೇ ಇಲ್ಲದಂತಾಗಿ ಕಸಾಯಿ ಖಾನೆಗಳಿಗೆ ಹೋಗುವಂತಾಗಿದೆ. ಹೀಗಾಗಿ ಹಿಂದೂ ಪರ ಸಂಘಟನೆಗಳೊಳಗೂಡಿ ಗೋ ಸಂರಕ್ಷಣೆಗಾಗಿ ಗೋಮಾತೆಯ ಗೌರವ ದಿನವನ್ನು ಸರ್ಕಾರ ಘೋಷಿಸಬೇಕು. ಆ ಮೂಲಕ ಗೋವಿನ ಸಂರಕ್ಷಣೆ ಮಾಡಬೇಕೆಂದು ಮನವಿ ಮಾಡಿದರು.


ಗೋ ಸಂರಕ್ಷಣೆಗಾಗಿ ಹಿಂದೂಪರ ಸಂಘಟನೆಗಳ ಮುಖಂಡರು ಮನವಿ ಸಲ್ಲಿಸಿದರು.

ಹಿಂದೂಪರ ಸಂಘಟನೆ ಮುಖಂಡ ಚಂದ್ರಮೌಳಿ ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಏ.27 ಅನ್ನು ಗೋಮಾತೆಯ ಗೌರವ ದಿನವನ್ನಾಗಿ ಘೋಷಿಸಬೇಕು. ಎಲ್ಲಾ ಗೋ ಶಾಲೆಗಳಿಗೂ ಸಕಾಲದಲ್ಲಿ ಅನುದಾನ ಬಿಡುಗಡೆಗೊಳಿಸಬೇಕು. ಒತ್ತುವರಿ ಗೋ ಮಾಳ ಬಿಡಿಸಬೇಕು. ಪ್ರತಿ ಗ್ರಾಮಗಳಲ್ಲೂ ಗೋಮಾಳ ನಿಗದಿಗೊಳಿಸಬೇಕು. ಗೋ ಹತ್ಯೆ ಮತ್ತು ಗೋವುಗಳ ಕಳ್ಳ ಸಾಗಾಣಿಕೆ ತಡೆಗೆ ಇರುವ ಕಠಿಣ ಕಾಯ್ದೆಯ ಸಮರ್ಪಕ ಅನುಷ್ಠಾನವಾಗಬೇಕು. ಕೃಷಿ ವಿವಿಗಳಲ್ಲಿ ಗೋ ಮೂತ್ರ, ಗೋಮಯದ ಪ್ರಾಮುಖ್ಯತೆ ಬಗ್ಗೆ ದೊಡ್ಡ ಪ್ರಮಾಣದ ಸಂಶೋಧನೆ ನಡೆಸಬೇಕು. ಆಯುರ್ವೇದ ಆಸ್ಪತ್ರೆಗಳಲ್ಲಿ ಪಂಚಗೌವ್ಯ ಔಷಧ ವಿತರಣೆಗೆ ಕ್ರಮವಾಗಬೇಕು. ಗೂಳಿ ಆಧರಿತ ಕೃಷಿಕರಿಗೆ ವಿಶೇಷ ಆರ್ಥಿಕ ನೆರವು ನೀಡಲು ಸರ್ಕಾರ ಯೋಜನೆ ರೂಪಿಸಬೇಕೆಂದರು.

ನಂತರ ಎಸಿ ಕಚೇರಿಯ ತಹಸೀಲ್ದಾರ್ ಯದುಗಿರೀಶ್ ಅವರಿಗೆ ಮನವಿ ಸಲ್ಲಿಸಿದರು. ಈ ವೇಳೆ ವಿಶ್ವ ಹಿಂದೂ ಪರಿಷತ್ ಜಿಲ್ಲಾ ಉಪಾಧ್ಯಕ್ಷ ವಿ.ಎನ್.ದಾಸ್, ಮಹಿಳಾ ಉಪಾಧ್ಯಕ್ಷೆ ಪುಷ್ಪಲತಾ, ಅರ್ಚಕ ಶ್ರೀಹರಿ, ಮುಖಂಡರಾದ ನಂದಕುಮಾರ್, ಮೋಹಿತ್, ಅರುಣ್ ಔವ್ಹಾಣ್, ಸವಿತ, ಕುಮಾರ, ಅಭಿಲಾಷ್, ರಘು, ಅಮಿತ್, ಪವನ್, ದರ್ಶನ್ ಸೇರಿದಂತೆ ಅನೇಕರಿದ್ದರು.

ತಿ.ನರಸೀಪುರ ಎಪಿಎಂಸಿಯಲ್ಲಿ 33 ಜಾನುವಾರುಗಳ ರಕ್ಷಣೆ

ತಿ.ನರಸೀಪುರ, ಮೇ 13– ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ(ಎಪಿಎಂಸಿ) ಆವರಣದಲ್ಲಿ ಕಸಾಯಿ ಖಾನೆಗೆ ರವಾನಿಸಲು ಅಥವಾ ಯಾವುದೋ ದುರುದ್ದೇಶಕ್ಕಾಗಿ ಕಟ್ಟಿ ಹಾಕಿದ್ದ 33 ಜಾನುವಾರುಗಳನ್ನು ಪಟ್ಟಣ ಠಾಣೆ ಪೊಲೀಸರು ರಕ್ಷಿಸಿದ್ದಾರೆ.

ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪೊಲೀಸರಿಗೆ ಎಪಿಎಂಸಿ ಆವರಣದೊಳಗೆ ಸುಡು ಬಿಸಿಲಿನಲ್ಲಿ ಮೇವು, ನೀರಿಲ್ಲದೇ ಹಗ್ಗದಿಂದ ಹಸು, ಕರುಗಳನ್ನು ಕಟ್ಟಿ ಹಾಕಿರುವುದು ಕಂಡು ಬಂತು. ಈ ವೇಳೆ ವಾರಸುದಾರರ ಬಗ್ಗೆ ವಿಚಾರಿಸಿದಾಗ ಯಾರೊಬ್ಬರೂ ತಮ್ಮದೆಂದು ಹೇಳಲು ಮುಂದೆ ಬರಲಿಲ್ಲ. ಹೀಗಾಗಿ ಸೋಮವಾರದ ಸಂತೆಯಲ್ಲಿ ಹಸು, ಕರು, ದನಗಳನ್ನು ಖರೀದಿ ಮಾಡಿ ಅವುಗಳನ್ನು ಅಕ್ರಮವಾಗಿ ಕಸಾಯಿ ಖಾನೆಗಳಿಗೆ ಮಾಂಸಕ್ಕಾಗಿ ಸಾಗಾಣಿಕೆ ಮಾಡಲು ಕಟ್ಟಿ ಹಾಕಿರುವುದು ಮೇಲ್ನೋಟಕ್ಕೆ ಸಾಬೀತಾಯಿತು.

ಒಟ್ಟು 33 ಜಾನುವಾರುಗಳ ಪೈಕಿ 13 ಹಸು, 2 ಎತ್ತು, 9 ಗಂಡು ಕರು, 8 ಹೆಣ್ಣು ಕರು ಹಾಗೂ 1 ಎಮ್ಮೆ ಕರುವನ್ನು ವಶಕ್ಕೆ ಪಡೆದು ಮೈಸೂರಿನ ಪಿಂಜಾರ ಪೋಲ್‌ಗೆ ಕಳುಹಿಸಿದರು. ಗೋ ಸಾಗಾಣಿಕೆ ಹಾಗೂ ಹತ್ಯೆ ನಿಷೇಧ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಇನ್ಸ್‌ಪೆಕ್ಟರ್ ಧನಂಜಯ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆ ಎಎಸ್‌ಐ ಚೆಲುವ ರಾಜು, ಮುಖ್ಯಪೇದೆ ರವಿ, ಪೇದೆಗಳಾದ ಶಂಕರ, ನವೀನ ಹಾಗೂ ಸಂದೇಶ ಭಾಗವಹಿಸಿದ್ದರು.

ನಾಳೆ ವಿದ್ಯುತ್ ವ್ಯತ್ಯಯ

ತಿ.ನರಸೀಪುರ, ಮೇ 13– ತುಂಬಲ ಹಾಗೂ ವ್ಯಾಸರಾಜಪುರ



ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮೇ 15ರಂದು ಬೆಳಗ್ಗೆ 10 ರಿಂದ ಸಂಜೆ 6 ರವರೆಗೆ ತುಂಬಲ, ಕುಪ್ಯಾ, ಅಗಸ್ಥಾಪುರ, ಬೊಮ್ಮನಾಯಕನಹಳ್ಳಿ, ಭಟ್ಟಳಿಗೆಹುಂಡಿ, ನಿಂಗೇಗೌಡನ ಹುಂಡಿ, ಮುತ್ತತ್ತಿ, ರಾಮನಾಥಪುರ, ಸೋಮನಾಥಪುರ, ಕಗ್ಗಲೀಪುರ, ಜಗಜೀವನ ಗ್ರಾಮ, ತಮ್ಮಡಿಪುರ, ಶ್ರೀರಂಗರಾಜಪುರ, ಕುಳ್ಳನಕೊಪ್ಪಲು ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ರೈತರು ಕೃಷಿಯೊಂದಿಗೆ ಹೈನುಗಾರಿಕೆ ಕೈಗೊಳ್ಳಿ

ಪಶುಸಂಗೋಪನಾ ಇಲಾಖೆ ಸಹಾಯಕ ನಿರ್ದೇಶಕ ಬಿ.ಹೆಚ್.ಮೋಹನ್


ಕಾರ್ಯಕ್ರಮವನ್ನು ಪಶು ಸಂಗೋಪನಾ ಇಲಾಖೆ ಸಹಾಯಕ ನಿರ್ದೇಶಕ ಮೋಹನ್ ಉದ್ಘಾಟಿಸಿದರು.

ನಂಜನಗೂಡು, ಮೇ 13– ರೈತರು ಕೃಷಿ ಚಟುವಟಿಕೆ ಜೊತೆಗೆ ಪಶು ಸಂಗೋಪನೆ ಕೈಗೊಳ್ಳುವುದರಿಂದ ದುಪ್ಪಟ್ಟು ಆದಾಯ ಗಳಿಸಿ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಬಹುದು ಎಂದು ಪಶುಸಂಗೋಪನಾ ಇಲಾಖೆ ಸಹಾಯಕ ನಿರ್ದೇಶಕ ಬಿ.ಹೆಚ್.ಮೋಹನ್ ತಿಳಿಸಿದರು.

ನಗರದ ಗೌರಿಘಟ್ಟ ಬೀದಿಯಲ್ಲಿರುವ ನಾಯಕರ ಸಮುದಾಯ ಭವನದಲ್ಲಿ ಪಶುಸಂಗೋಪನೆ ಇಲಾಖೆ ಸಹಯೋಗದೊಂದಿಗೆ ಗಂಗಾ ಚಾರಿಟಬಲ್ ಟ್ರಸ್ಟ್ ವತಿಯಿಂದ ನಡೆದ ಉಚಿತ ಕುರಿ, ಹಸು ಮತ್ತು ಮೇಕೆ ಸಾಕಾಣಿಕೆ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ರೈತರ ಆದಾಯ ಹೆಚ್ಚಿಸುವ ಸಲುವಾಗಿ ರೈತರಿಗೆ ಕುರಿ–ಮೇಕೆ ಸಾಕಣೆ, ಕೋಳಿ ಸಾಕಣೆ, ಹಾಗೂ ಹಾಲು ಉತ್ಪಾದನೆ ಮತ್ತು ಡೈರಿ ಫಾರ್ಮಿಂಗ್ ಬಗ್ಗೆ ಉಚಿತ ತರಬೇತಿ ನೀಡಿ ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ರೈತರು ಇದರ ಸದುಪಯೋಗ ಪಡೆದು ಪಶು ಸಂಗೋಪನೆಯಲ್ಲಿ ತೊಡಗಿಕೊಳ್ಳುವ ಮೂಲಕ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಿ ಎಂದು ಸಲಹೆ ನೀಡಿದರು.

ಈ ವೇಳೆ ಶ್ರೀಗಂಗಾ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ರಾಜ್‌ಕಾಮಯ್ಯ, ಕಾರ್ಯದರ್ಶಿ ದಿವ್ಯಶ್ರೀ, ಕರ್ನಾಟಕ ಗ್ರಾಮೀಣ ಬ್ಯಾಂಕ್ ಪ್ರಾದೇಶಿಕ ವ್ಯವಸ್ಥಾಪಕಿ ಹೆಚ್.ಎಸ್.ತ್ರಿವೇಣಿ, ಎಸ್‌ಬಿಐ ಮುಖ್ಯ ವ್ಯವಸ್ಥಾಪಕ ಮನೋಜ್ ಕುಮಾರ್, ತಾಲೂಕು ನಾಯಕ ಸಮುದಾಯ ಅಧ್ಯಕ್ಷ ಕೆ.ನಾಗರಾಜು, ಹನುಮಂತ ನಾಯಕ, ಶಶಾಂಕ್, ಮಂಜುಳಾ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ರೆಸಾರ್ಟ್‌ಗಳಲ್ಲಿ ಗ್ರಾಹಕರಿಗೆ ಗುಣಮಟ್ಟದ ಆಹಾರ ನೀಡಿ

ತಾಲೂಕು ಆಹಾರ ಸುರಕ್ಷತಾಧಿಕಾರಿ ಡಾ.ರವಿಕುಮಾರ್

ಹೆಚ್.ಡಿ.ಕೋಟೆ, ಮೇ 13– ರೆಸಾರ್ಟ್‌ಗಳಲ್ಲಿ ಗ್ರಾಹಕರು ಹಾಗೂ ಪ್ರವಾಸಿಗರಿಗೆ ಗುಣಮಟ್ಟದ ಆಹಾರ ನೀಡಬೇಕು ಹಾಗೂ ಸ್ವಚ್ಛತಾ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಪಡೆಯಬೇಕು ಎಂದು ತಾಲೂಕು ಆಹಾರ ಸುರಕ್ಷತಾಧಿಕಾರಿ ಡಾ.ರವಿಕುಮಾರ್ ತಿಳಿಸಿದರು.

ತಾಲೂಕಿನ ಜಂಗಲ್ ಲಾಡ್ಜ್ ರೆಸಾರ್ಟ್‌ನಲ್ಲಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ಮೈಸೂರು, ತಾಲೂಕು ಆಹಾರ ಸುರಕ್ಷತಾಧಿಕಾರಿಗಳ ಕಚೇರಿ ಹೆಚ್.ಡಿ.ಕೋಟೆ ವತಿಯಿಂದ ತಾಲೂಕಿನ ಎಲ್ಲಾ ರೆಸಾರ್ಟ್‌ಗಳ ಅಡುಗೆ ತಯಾರಕರಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ಆಯೋಜಿಸಿದ್ದ ಆಹಾರ ಸುರಕ್ಷತಾ ತರಬೇತಿ ಮತ್ತು ಪ್ರಮಾಣ ಪತ್ರ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರೆಸಾರ್ಟ್‌ಗೆ ಬರುವ ಗ್ರಾಹಕರು ಹಾಗೂ ಪ್ರವಾಸಿಗರಿಗೆ ಕಲಬೆರಕೆ ಆಹಾರ ನೀಡದೇ, ಗುಣಮಟ್ಟದ ಆಹಾರ ನೀಡಬೇಕು. ಅಲ್ಲದೇ ಆಹಾರ ತಯಾರಿಸುವ ಸ್ಥಳದಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಬೇಕು. ಅಲ್ಲದೇ ಕಡ್ಡಾಯವಾಗಿ ಸ್ವಚ್ಛತಾ ಪ್ರಮಾಣ ಪತ್ರ ಪಡೆದುಕೊಳ್ಳಬೇಕು ಎಂದರು.

ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ (ಎಫ್‌ಎಸ್‌ಎಸ್) ಭಾರತದಲ್ಲಿ ಆಹಾರದ ಸುರಕ್ಷತೆ, ಗುಣಮಟ್ಟ, ತಯಾರಿಕೆ, ಸಂಗ್ರಹಣೆ, ಮಾರಾಟ ಮತ್ತು ಆಮದುಗಳನ್ನು ನಿಯಂತ್ರಿಸುವ ಪ್ರಮುಖ ಶಾಸನವಾಗಿದೆ. ಇದು ಗ್ರಾಹಕರಿಗೆ ಸುರಕ್ಷಿತ ಆಹಾರವನ್ನು ಖಚಿತಪಡಿಸಿಕೊಳ್ಳಲು ವಿಜ್ಞಾನ ಆಧಾರಿತ ಮಾನದಂಡಗಳನ್ನು ರೂಪಿಸುತ್ತದೆ. ಆಹಾರದಲ್ಲಿ ಕಲಬೆರಕೆ ತಡೆಗಟ್ಟಲು, ಕಲುಷಿತ ಆಹಾರ ನಿಯಂತ್ರಿಸಲು ಮತ್ತು ಸುರಕ್ಷಿತ ಆಹಾರದ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಕಟ್ಟುನಿಟ್ಟಿನ ನಿಬಂಧನೆಗಳಿವೆ. ಎಂದ ಅವರು ಕಾಯ್ದೆಯ ನಿಯಮಗಳನ್ನು ಉಲ್ಲಂಘಿಸಿದರೆ, ವಿಶೇಷವಾಗಿ ಕಲಬೆರಕೆ ಆಹಾರ ಮಾರಾಟ ಮಾಡಿದರೆ 2 ಲಕ್ಷ ರೂ. ವರೆಗಿನ ದಂಡ ಅಥವಾ ಜೈಲು ಶಿಕ್ಷೆಯಾಗಬಹುದು ಎಂದರು.



ಕಾರ್ಯಕ್ರಮವನ್ನು ತಾಲೂಕು ಆಹಾರ ಸುರಕ್ಷತಾಧಿಕಾರಿ ಡಾ.ರವಿಕುಮಾರ್ ಉದ್ಘಾಟಿಸಿದರು.

ಇದು ಗ್ರಾಹಕರ ಆರೋಗ್ಯವನ್ನು ರಕ್ಷಿಸಲು ಮತ್ತು ಆಹಾರ ಉದ್ಯಮದಲ್ಲಿ ಜವಾಬ್ದಾರಿಯನ್ನು ಉತ್ತೇಜಿಸಲು ಇರುವ ಸಮಗ್ರ ಕಾನೂನಾಗಿದೆ ಎಂದ ಅವರು ಅಡುಗೆ ಸಿಬ್ಬಂದಿ ಅಡುಗೆ ಕೋಣೆಯನ್ನು ಶುಚಿಯಾಗಿಟ್ಟುಕೊಳ್ಳಬೇಕು. ಶುದ್ಧ ಆಹಾರ ನೀಡಬೇಕು. ಅಡುಗೆ ಮಾಡಿದ ನಂತರ ಆಹಾರ ಮುಚ್ಚಿಡಬೇಕು. ಕುಡಿಯಲು ಬಿಸಿ ನೀರನ್ನೇ ನೀಡಬೇಕು. ಅಡುಗೆ ಮಾಡುವಾಗ ಹೆಡ್ ಕ್ಯಾಪ್ ಮತ್ತು ಗ್ಲೌಸ್ ಅನ್ನು ಹಾಕಿಕೊಳ್ಳಬೇಕು. ಪ್ಲಾಸ್ಟಿಕ್ ಕವರ್‌ಗಳನ್ನು ಉಪಯೋಗಿಸಬಾರದು. ಮಕ್ಕಳಿಗೆ ನೀಡುವ ಆಹಾರದಲ್ಲಿ ಯಾವುದೇ ತೊಂದರೆ ಆದರೂ ಅಡುಗೆ ಸಿಬ್ಬಂದಿ ನೇರ ಜವಾಬ್ದಾರರು ಎಂದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಶ್ರೀನಿವಾಸ್, ಜಂಗಲ್ ಲಾಡ್ಜ್ ರೆಸಾರ್ಟ್ ಮ್ಯಾನೇಜರ್ ಕಾರ್ತಿಕ್, ಸರಾಯ್ ರೆಸಾರ್ಟ್ ಮ್ಯಾನೇಜರ್ ವಿಶ್ವನಾಥ್ ಆರಾಧ್ಯ, ಬೆಂಗಳೂರಿನ ತರಬೇತುದಾರರಾದ ದೀಪ, ರಾಘವೇಂದ್ರ ಶೆಟ್ಟಿ, ರಶ್ಮಿ, ಶರಣಪ್ಪ, ರವಿರಾಜ್, ಪ್ರತಾಪ್, ರೆಸಾರ್ಟ್‌ನ ಅಡುಗೆ ತಯಾರಕರು ಮತ್ತು ಸಿಬ್ಬಂದಿ ವರ್ಗದವರು, ಇನ್ನಿತರರಿದ್ದರು.

ಲಕ್ಷ್ಮಿ ನರಸು ನಿಧನ



ಹುಣಸೂರು, ಮೇ 13– ನಗರದ ಮಂಜುನಾಥ ಬಡಾವಣೆ ನಿವಾಸಿ, ಲೇ.ಪೋಸ್ಟ್ ಮೂರ್ತಿ ಅವರ ಪತ್ನಿ ಲಕ್ಷ್ಮಿ ನರಸು(84) ಬುಧವಾರ ಬೆಳಗ್ಗೆ ನಿಧನರಾದರು. ಮೃತರು ಪುತ್ರ ಮಧು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಧ್ಯಾಹ್ನ ತಾಲೂಕು ಕಚೇರಿ ಪಕ್ಕದಲ್ಲಿರುವ ಸ್ಮಶಾನದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ವಿದ್ಯಾರ್ಥಿಗಳ ಪ್ರವೇಶಕ್ಕೆ ತೊಂದರೆ ಆಗದಂತೆ ಜಾತಿ ಪ್ರಮಾಣ ಪತ್ರ ವಿತರಿಸಿ

ತಹಶೀಲ್ದಾರ್‌ಗಳಿಗೆ ಎಡಿಸಿ ಸೂಚನೆ

ಮೈಸೂರು, ಮೇ 13(ಎಂಕೆ)– ಶಾಲಾ–ಕಾಲೇಜು ದಾಖಲಾತಿ ಪ್ರಾರಂಭವಾಗಿದ್ದು, ವಿದ್ಯಾರ್ಥಿಗಳ ದಾಖಲಾತಿಗೆ ತೊಂದರೆಯಾಗದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸೇರಿದಂತೆ ಇತರೆ ಜಾತಿ ಪ್ರಮಾಣ ಪತ್ರ ಕೋರಿ ಸಲ್ಲಿಕೆಯಾಗುವ ಅರ್ಜಿಗಳಿಗೆ ಆದ್ಯತೆ ನೀಡಿ ವಿತರಣೆ ಮಾಡುವಂತೆ ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ, ತಹಶೀಲ್ದಾರ್‌ಗಳಿಗೆ ಸೂಚನೆ ನೀಡಿದರು.

ಮೈಸೂರಿನ ಪಡುವಾರಹಳ್ಳಿಯಲ್ಲಿರುವ ಸಮಾಜ ಕಲ್ಯಾಣ ಇಲಾಖೆ ಕಚೇರಿಯ ಡಾ.ಬಾಬು ಜಗಜೀವನ್ ರಾಮ್ ಸಭಾಂಗಣದಲ್ಲಿ ಬುಧವಾರ ನಡೆದ ಜಿಲ್ಲಾ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಜಾತಿ ಪ್ರಮಾಣ ಪತ್ರಕ್ಕೆ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಸಲ್ಲಿಸಬೇಕಿರುವ ದಾಖಲಾತಿಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವಂತೆ ತಿಳಿಸಿದರು.

ಮೈಸೂರು ನಗರದ ಕೆಲವು ಬಡಾವಣೆಗಳು, ವೃತ್ತಗಳಿಗೆ, ದ್ವಾರಗಳಿಗೆ ಡಾ.ಬಿ.ಆರ್ ಅಂಬೇಡ್ಕರ್ ಅವರ ಹೆಸರು ನಾಮಕರಣ ಮಾಡುವ ಕುರಿತು ನಡೆದ ಚರ್ಚೆಯಲ್ಲಿ ವೃತ್ತ ಹಾಗೂ ದ್ವಾರಗಳಿಗೆ ಡಾ.ಬಿ.ಆರ್. ಅಂಬೇಡ್ಕರ್ ಹೆಸರು ನಾಮಕರಣ ಮಾಡಲು ಸಂಬಂಧಿಸಿದ ಕಚೇರಿಗೆ ಅರ್ಜಿ ಸಲ್ಲಿಸುವಂತೆ ತಿಳಿಸಿದರು. ಹಾಗೆಯೇ ಮೈಸೂರು ತಾಲೂಕು ಆಲನಹಳ್ಳಿ ಗ್ರಾಮದ ಸರ್ವೆನಂ. 28 ರಲ್ಲಿ ಜಮೀನು ಒತ್ತುವರಿ ಕುರಿತು, ಸ್ಥಳ ಪರಿಶೀಲನೆ ನಡೆಸಿ ಒತ್ತುವರಿಯಾಗಿದ್ದಲ್ಲಿ ಕ್ರಮ ಕೈಗೊಳ್ಳುವಂತೆ ಮೈಸೂರು ತಹಶೀಲ್ದಾರ್‌ಗೆ ನಿರ್ದೇಶನ ನೀಡಿದರು.

ಸಭೆ ನಡೆಸಲು ಮನವಿ: ಸಮಿತಿ ಸದಸ್ಯ ಚಿಕ್ಕ ಜವರಯ್ಯ ಮಾತನಾಡಿ, ಪೊಲೀಸ್ ಇಲಾಖೆ ವತಿಯಿಂದ ನಡೆಸಲಾಗುವ ಕುಂದು–ಕೊರತೆ ಸಭೆಗಳಿಗೆ ಆಯಾ ವ್ಯಾಪ್ತಿಯ ಎಸ್‌ಸಿ ಮತ್ತು ಎಸ್‌ಟಿ ಸಮುದಾಯದ ಮುಖಂಡರನ್ನು ಆಹ್ವಾನಿಸಿದರೆ, ಬಹಳಷ್ಟು ತೊಂದರೆಗಳ ಬಗ್ಗೆ ಚರ್ಚಿಸಬಹುದು ಹಾಗೆಯೇ ತಾಲೂಕು ಮಟ್ಟದಲ್ಲಿ ನಿಗದಿತವಾಗಿ ಸಮಿತಿ ಸಭೆಗಳು ನಡೆಯುತ್ತಿಲ್ಲ. ಆದ್ದರಿಂದ ಸಮಿತಿ ರಚಿಸಿಕೊಂಡು ನಿಗದಿತವಾಗಿ ಸಭೆ ನಡೆಸುವಂತೆ ಮನವಿ ಮಾಡಿದರು.

ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸದಸ್ಯರಾದ ಎಸ್.ಟಿ.ರವಿಕುಮಾರ್, ಪಾರ್ವತಮ್ಮ, ವೇಣುಗೋಪಾಲ್, ಜಿಪಂ ಉಪ ಕಾರ್ಯದರ್ಶಿ ಸವಿತಾ, ನಗರಪಾಲಿಕೆ ಉಪ ಆಯುಕ್ತೆ ವೀಣಾ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ.ರಂಗೇಗೌಡ ಮತ್ತಿತರರು ಉಪಸ್ಥಿತರಿದ್ದರು.



ಸಮಾಜ ಕಲ್ಯಾಣ ಇಲಾಖೆ ಕಚೇರಿಯ ಡಾ.ಬಾಬು ಜಗಜೀವನ್ ರಾಮ್ ಸಭಾಂಗಣದಲ್ಲಿ ಬುಧವಾರ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆ ನಡೆಯಿತು.

ಅಧಿಕಾರಿಗಳ ಗೈರಿಗೆ ಆಕ್ಷೇಪ...

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜಿಲ್ಲಾ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸಭೆಗೆ ಜಿಲ್ಲಾ ಮಟ್ಟದ ಅಧಿಕಾರಿಗಳು ಗೈರಾಗಿದ್ದಕ್ಕೆ ಸಮಿತಿ ಸದಸ್ಯ ಚಿಕ್ಕ ಜವರಯ್ಯ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಸಭೆಗೆ ಜಿಲ್ಲಾಧಿಕಾರಿಗಳು, ಎಸ್‌ಪಿ, ಪಾಲಿಕೆ ಆಯುಕ್ತರು, ಎಂಡಿಎ ಆಯುಕ್ತರ ಗೈರಿಗೆ ಅಸಮಾಧಾನ ವ್ಯಕ್ತಪಡಿಸಿದ ಅವರು, ಪರಿಶಿಷ್ಟ ಜಾತಿ ಜನರ ಕಷ್ಟ–ಕಾರ್ಪಣ್ಯಗಳನ್ನು ಕೇಳಿ ಬಗೆಹರಿಸಬೇಕಾದ ಮಹತ್ವದ ಸಭೆಗಳಿಗೆ ಜಿಲ್ಲಾಧಿಕಾರಿಗಳ ಸಹಿತವಾಗಿ ಜಿಲ್ಲಾಮಟ್ಟದ ಅಧಿಕಾರಿಗಳು ಗೈರಾಗಿದ್ದಾರೆ. ಮೂರು ತಿಂಗಳಿಗೊಮ್ಮೆ ಕರೆಯಬೇಕಿದ್ದ ಸಭೆಯನ್ನು 6 ತಿಂಗಳಿಗೆ ಕರೆಯುತ್ತಿದ್ದಾರೆ. ಅಹವಾಲು ಕೇಳಿಸಿಕೊಳ್ಳಬೇಕಾದ ಅಧಿಕಾರಿಗಳೇ ಗೈರಾಗಿದ್ದಾರೆ ಎಂದು ಅಸಮಾದಾನ ಹೊರಹಾಕಿದರು.

ಸಿಎಂ ತವರು ಜಿಲ್ಲೆಯಲ್ಲಿ ಅಂಬೇಡ್ಕರ್ ಅವರ ಪ್ರತಿಮೆಗಳಿಗೆ ಅವಮಾನ ಮಾಡಲಾಗುತ್ತಿದೆ. ದಲಿತರ ಭೂ ಸಮಸ್ಯೆಗಳು ಬಗೆಹರಿದಿಲ್ಲ. ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳು ಹೆಚ್ಚಾಗುತ್ತಲೇ ಇವೆ. ಶೇ.24ರ ಅನುದಾನದ ಹಂಚಿಕೆ, ಎಸ್‌ಇಪಿ/ ಟಿಎಸ್‌ಪಿ ಅನುದಾನ, ಹೊರಗುತ್ತಿಗೆಯಲ್ಲಿ ಮೀಸಲಾತಿ ಕೊಡುವುದು, ಅಂತರ್ಜಾತಿ ವಿವಾಹಿತರಿಗೆ ಸೌಲಭ್ಯ ಕೊಡುವ ಗಂಭೀರ ವಿಷಯಗಳ ಬಗ್ಗೆ ಚರ್ಚಿಸುವ ಸಭೆಗೆ ಜವಾಬ್ದಾರಿಯಿಂದ ವರ್ತಿಸಬೇಕಾದ ಅಧಿಕಾರಿಗಳು ಗೈರಾಗಿರುವುದು ಸರಿಯಲ್ಲ ಎಂದು ಕಿಡಿಕಾರಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಕರ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಡಕಾಯಿಟ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕೆಡಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೋಟಿಗೊಬ್ಬ (ಕ)	4 ಪ್ರದರ್ಶನಗಳು
ರಾಜಕಮಲ್	
ಕರುಪ್ಪು (ತ)	4 ಪ್ರದರ್ಶನಗಳು
ಸಂಗಂ	
ಕರ (ತ)	4 ಪ್ರದರ್ಶನಗಳು
ಲಿಡೋ	
ಮಾಣಿಕ್ಯ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಪುನೀತ್ ನಿವಾಸ (ಕ)	4 ಪ್ರದರ್ಶನಗಳು

‘ರಜಾ–ಮಜಾ’ ಬೇಸಿಗೆ ಶಿಬಿರದಲ್ಲಿ ಮಕ್ಕಳ ವಿಶೇಷ ಪ್ರತಿಭೆ ಅನಾವರಣ



ಮೈಸೂರು, ಮೇ 13– ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ವಿದ್ಯೋದಯ ಶಾಲೆಯ ಆವರಣದಲ್ಲಿ ನಟನಾ ರಂಗಶಾಲೆಯ ವತಿಯಿಂದ 24ನೇ ವರ್ಷದ ಮಕ್ಕಳ ಬೇಸಿಗೆ ಶಿಬಿರ ರಜಾ–ಮಜಾ ಯಶಸ್ವಿಯಾಗಿ ನಡೆಯಿತು.

ಈ 'ರಜಾ–ಮಜಾ' ಕಾರ್ಯಕ್ರಮದಲ್ಲಿ ಸುಮಾರು 250ಕ್ಕೂ ಹೆಚ್ಚು ಶಿಬಿರಾರ್ಥಿಗಳು ಭಾಗವಹಿಸಿದ್ದರು. ಪ್ರಸ್ತುತ ಒತ್ತಡದ ಬದುಕಿನಲ್ಲಿ ಜಂಜಾಟದ ನಡುವೆ ಸದಾ ಮೊಬೈಲ್, ಟಿ.ವಿ., ಲ್ಯಾಪ್‌ಟಾಪ್ ಹಾಗೂ ಪಾಶ್ಚಾತ್ಯ ಶೈಲಿಯ ನೃತ್ಯ ಮತ್ತು ಸೊಬಗಿಗೆ ಮನಸೋತ ಯುವ ಮನಸ್ಸುಗಳು, ಇನ್ನಿತರ ಆಕರ್ಷಣೀಯ ಅತ್ಯಾಧುನಿಕ ಯಂತ್ರೋಪಕರಣಗಳನ್ನು ಹೆಚ್ಚು ಬಳಸಿ ನಮ್ಮ ನಡುವೆ ಇರುವ ನೆಮ್ಮದಿ, ಸಂತೋಷ ಹಾಗೂ ವಿಶ್ವಾಸವನ್ನು ಕಡೆಗಣಿಸುತ್ತಿದ್ದೇವೆ.

ಇಂತಹ ಸಂದಿಗ್ಧ ಇತಿಹಾಸ ಪರಂಪರೆ ಇರುವ ನಾಟಕ, ರಂಗಕಲೆ, ನೃತ್ಯ, ಕೋಲಾಟ, ಕಲೆಗಳನ್ನು ಮನೆ ಮಂದಿಯೆಲ್ಲಾ ಕೂತು ಸಂತೋಷಿಸುವ, ಸಂಭ್ರಮಿಸುವ ನಕ್ಕು ನಗಿಸುವ ದಿನಗಳು ದೂರವಾಗುತ್ತಿರುವುದು ಪ್ರಸ್ತುತ ದಿನಗಳಲ್ಲಿ ಸರಿಯಷ್ಟೆ. ಇಂತಹ ಪ್ರಸ್ತುತ ಸನ್ನಿವೇಶದಲ್ಲಿ ನಟನಾ ರಂಗಶಾಲೆಯು 'ರಜಾ–ಮಜಾ' ಬೇಸಿಗೆ ಶಿಬಿರವನ್ನು ನಡೆಸುತ್ತಿರುವುದು ಅತ್ಯಂತ ಅಗತ್ಯ ಮತ್ತು ಅವಶ್ಯಕ. ಮಕ್ಕಳಲ್ಲಿ ರಂಗಗೀತೆಗಳು, ಕಿರುನಾಟಕಗಳು, ಕಂಪನಿ ಶೈಲಿಯ ನಾಟಕ, ಕಂಗೀಲು, ಜಡೆಕೋಲಾಟ, ನೃತ್ಯ ಮಲ್ಲಗಂಬ, ಹಗ್ಗದ ಮಲ್ಲಗಂಬ, ನಾಟಕದ ರಂಗಗೀತೆಗಳು, ಹೀಗೆ ಹತ್ತು ಹಲವು ವಿಭಿನ್ನ, ವಿಶಿಷ್ಟವಾದ ಎಳೆ ಮನಸ್ಸುಗಳನ್ನು ಒಂದುಗೂಡಿಸುವ ವಿಹಂಗಮ ನೋಟ ರಜಾ–ಮಜಾ ಬೇಸಿಗೆ ಶಿಬಿರವಾಗಿತ್ತು.

ನಟ, ರಂಗಕರ್ಮಿ ಮಂಡ್ಯ ರಮೇಶ್, ದಿಶಾ ರಮೇಶ್, ನಿರ್ದೇಶಕರಾದ ಮೇಘ ಸಮೀರ, ಯುವನಟರಾದ ಚೇತನ್‌ರಾಜ್, ಲಕ್ಷ್ಮೀ ವಿ.ನಾಯಕ್, ಲಾವಣ್ಯ ನಟನಾ, ಸನತ್ ಆಚಾರ್ಯ, ಆರ್ಯ ಮೈಸೂರು, ಮನೋಜ್ ಭಾರತ್‌ಧ್ವಾಜ್ ಮಕ್ಕಳನ್ನು ನೋಡಿಕೊಂಡ ಸಂದರ್ಭ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ನಟ–ನಿರ್ಮಾಪಕ ದಿಲೀಪ್‌ರಾಜ್ ಹೃದಯಾಘಾತದಿಂದ ನಿಧನ



ಬೆಂಗಳೂರು: ಖ್ಯಾತ ನಟ ದಿಲೀಪ್ ರಾಜ್ ಹೃದಯಾಘಾತದಿಂದ ನಿಧನರಾಗಿದ್ದಾರೆ. ಅವರಿಗೆ 47 ವರ್ಷ ವಯಸ್ಸಾಗಿತ್ತು.

ಹೃದಯಾಘಾತವಾಗಿರುವುದು ತಿಳಿಯುತ್ತಿದ್ದಂತೆ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತಾದರೂ ಅಷ್ಟು ಹೊತ್ತಿಗೆ ಪ್ರಾಣಪಕ್ಷಿ ಹಾರಿಹೋಗಿತ್ತು. ದಿಲೀಪ್ ರಾಜ್ ನಿಧನಕ್ಕೆ ಚಿತ್ರರಂಗದ ಅನೇಕರು ಹಾಗೂ ಅಭಿಮಾನಿಗಳು ಕಂಬನಿ ಮಿಡಿದಿದ್ದಾರೆ.

ದಿಲೀಪ್ ರಾಜ್ ಸಿನಿಪಯಣ: ದಿಲೀಪ್ ರಾಜ್ ಅವರ ಕನ್ನಡ ಚಿತ್ರರಂಗದ ಪಯಣ 2005ರಲ್ಲಿ ಬಿಡುಗಡೆಯಾದ ಬಾಯ್ ಫ್ರೆಂಡ್ ಚಿತ್ರದ ಮೂಲಕ ನಾಯಕ ನಟನಾಗಿ ಆರಂಭವಾಯಿತು. 2007ರಲ್ಲಿ ದಿವಂಗತ ನಟ ಪುನೀತ್ ರಾಜ್ ಕುಮಾರ್ ಅವರೊಂದಿಗೆ ಅಭಿನಯಿಸಿದ ಮಿಲನ ಚಿತ್ರದ ನಂತರ ಅವರಿಗೆ ಹೆಚ್ಚಿನ ಮನ್ನಣೆ ಸಿಕ್ಕಿತು.

ನಂತರ ದಿಲೀಪ್ ರಾಜ್ ಸುಮಾರು 20ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದರು. ಅವರ ಇತ್ತೀಚಿನ ಚಿತ್ರವಾಗಿ ಲವ್ ಮಾಕ್ಟೇಲ್ 3 ಗಮನ ಸೆಳೆದಿದ್ದು, ಇದನ್ನು ಡಾರ್ಲಿಂಗ್ ಕೃಷ್ಣ ನಿರ್ದೇಶಿಸಿದ್ದರು. ಈ ಚಿತ್ರ ಮಾರ್ಚ್ 16ರಂದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಿತ್ತು. ನಟ, ನಿರ್ಮಾಪಕ ದಿಲೀಪ್ ರಾಜ್ ಅಂತ್ಯಕ್ರಿಯೆ ಲಿಂಗಾಯತ ಸಂಪ್ರದಾಯದಂತೆ ರಾಮನಗರ ತಾಲೂಕಿನ ಗುನ್ನೂರು ಬಳಿಯ ಫಾರ್ಮ್ ಹೌಸ್‌ನಲ್ಲಿ ನೆರವೇರಿತು.

ಸಮಯ ಸಿಕ್ಕಾಗಲೆಲ್ಲಾ ಇಲ್ಲಿನ ತೋಟದ ಮನೆಗೆ ದಿಲೀಪ್ ರಾಜ್ ಬರುತ್ತಿದ್ದರು. ಹಳೇ ಶೈಲಿಯಲ್ಲಿ ತೊಟ್ಟಿ ಮನೆ ನಿರ್ಮಾಣ ಮಾಡಿಕೊಂಡಿದ್ದರು. ಗ್ರಾಮಸ್ಥರ ಜೊತೆಗೂ ಉತ್ತಮ ಒಡನಾಟ ಹೊಂದಿದ್ದರು. ಹೀಗಾಗಿ ಇಲ್ಲೇ ಅವರ ಅಂತ್ಯಕ್ರಿಯೆ ಮಾಡಲಾಗಿದೆ.

ಅಂತ್ಯಕ್ರಿಯೆಗೂ ಮುನ್ನ ರೇವಣಸಿದ್ದೇಶ್ವರ ಮಠದ ರಾಜಶೇಖರ ಸ್ವಾಮೀಜಿ ನೇತೃತ್ವದಲ್ಲಿ, ದಿಲೀಪ್ ರಾಜ್ ಅಣ್ಣನ ಮಗನಿಂದ ಪೂಜಾ ಕೈಂಕರ್ಯ ನೆರವೇರಿಸಲಾಯಿತು.

ದಿಲೀಪ್ ರಾಜ್ ಅಂತ್ಯಕ್ರಿಯೆಯಲ್ಲಿ ನಟ ಸೃಜನ್ ಲೋಕೇಶ್, ನಟಿ ಅನುಪ್ರಭಾಕರ್, ರಘುಮುಖರ್ಜಿ, ಕಾಮಿಡಿ ಕಿಲಾಡಿ ಖ್ಯಾತಿಯ ಜಗಪ್ಪ ಸೃಜನ್, ಮಂಜುಪಾವಗಡ, ಹುಲಿ ಕಾರ್ತಿಕ್ ಸೇರಿ ಕಿರುತೆರೆ ಕಲಾವಿದರು ಸೇರಿದಂತೆ ಅಕ್ಕಪಕ್ಕದ ಗ್ರಾಮಸ್ಥರು ಭಾಗಿಯಾಗಿದ್ದರು. ಈ ವೇಳೆ ಪಾರ್ಥಿವ ಶರೀರದ ಎದುರು ಪತ್ನಿ, ಮಕ್ಕಳು ಹಾಗೂ ಕುಟುಂಬಸ್ಥರ ಆಕ್ರಂದನ ಮುಗಿಲುಮುಟ್ಟಿತ್ತು.

ಹಿಟ್ಲರ್ ಕಲ್ಯಾಣ ಸೀರಿಯಲ್ ಮೂಲಕ ದಿಲೀಪ್ ರಾಜ್ ಕಿರುತೆರೆಗೆ ಕಂಬ್ಯಾಕ್ ಮಾಡಿದ್ದರು. ಆ ಪಾತ್ರಕ್ಕೆ ವೀಕ್ಷಕರಿಂದ ಉತ್ತಮ ಪ್ರತಿಕ್ರಿಯೆ ಸಿಕ್ಕಿತ್ತು. ಸಿನಿಮಾ ಮತ್ತು ಟಿವಿ ಎರಡರಲ್ಲೂ ನಟ, ನಿರ್ಮಾಪಕ ದಿಲೀಪ್ ರಾಜ್ ಗುರುತಿಸಿಕೊಂಡಿದ್ದರು.

ಶುಶ್ರೂಷಕರು ವೈದ್ಯಕೀಯ ಕ್ಷೇತ್ರದ ಅಶ್ವಿನಿದೇವತೆಗಳಿದ್ದಂತೆ

ಅಂಕಣಕಾರ ಎಂ.ಆರ್. ಚಂದ್ರಶೇಖರ್ ಅಭಿಮತ



ಅಂತಾರಾಷ್ಟ್ರೀಯ ಶುಶ್ರೂಷಕರ ದಿನಾಚರಣೆಯನ್ನು ದೀಪ ಬೆಳಗಿಸುವ ಮೂಲಕ ಎಂ.ಆರ್.ಚಂದ್ರಶೇಖರ್ ಉದ್ಘಾಟಿಸಿದರು.

ಮೈಸೂರು, ಮೇ 13– ಶುಶ್ರೂಷಕರು ವೈದ್ಯರಿಗೆ ಜೀವಾಳವಿದ್ದಂತೆ ಎಂದು ಹಿರಿಯ ಅಂಕಣಕಾರ ಎಂ.ಆರ್.ಚಂದ್ರಶೇಖರ್ ಅಭಿಪ್ರಾಯಪಟ್ಟರು.

ಸುಯೋಗ್ ಆಸ್ಪತ್ರೆ ಮತ್ತು ಸುಯೋಗ್ ಕಾಲೇಜು ಆಫ್ ನರ್ಸಿಂಗ್ ವತಿಯಿಂದ ಆಸ್ಪತ್ರೆಯ ಸಭಾಂಗಣದಲ್ಲಿ ಏರ್ಪಡಿಸಿದ್ದ ಅಂತಾರಾಷ್ಟ್ರೀಯ ಶುಶ್ರೂಷಕರ ದಿನಾಚರಣೆಯನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಶುಶ್ರೂಷಕರು ಬಿಳಿ ವಸ್ತ್ರ ಧರಿಸಿರುವ ಅಶ್ವಿನಿದೇವತೆಗಳಂತೆ ಎಂದು ಬಣ್ಣಿಸಿದರಲ್ಲದೇ ವೈದ್ಯರು ರೋಗಿಗಳೊಂದಿಗೆ ಒಂದೆರಡು ತಾಸು ಕಳೆದರೆ ರೋಗಿಯೊಂದಿಗೆ ಇಡೀ ದಿನ ಆಸ್ಪತ್ರೆಯಲ್ಲಿಯೇ ಕಳೆದು, ವೈದ್ಯರಿಗೆ ಪೂರಕವಾಗಿ ಕಾರ್ಯನಿರ್ವಹಿಸುವ ಶುಶ್ರೂಷಕರು ಆಕಾಶವನ್ನು ಬೆಳಗಿಸುವ ನಕ್ಷತ್ರಗಳಂತೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಶುಶ್ರೂಷಕರಿಗೆ ನಮ್ಮ ದೇಶದಲ್ಲಿ ಸರ್ಕಾರ ಮತ್ತು ಖಾಸಗಿ ಆಸ್ಪತ್ರೆಗಳಿಂದ ಲಭ್ಯವಾಗುತ್ತಿರುವ ವೇತನ ಬಹಳ ಕಡಿಮೆಯಿದ್ದು, ಅದನ್ನು ಗಣನೀಯವಾಗಿ ಹೆಚ್ಚಿಸಬೇಕೆಂದು ಸಲಹೆ ನೀಡಿದರಲ್ಲದೆ, ತುರ್ತು ಸೇವೆ, ಐಸಿಯು ಹಾಗೂ ಆಪರೇಷನ್ ಕೊಠಡಿಗಳಲ್ಲಿ ಸೇವೆ ಸಲ್ಲಿಸಲು ಶುಶ್ರೂಷಕರಿಗೆ ವಿಶೇಷ ತರಬೇತಿಯ ಅಗತ್ಯವಿದೆ ಎಂದರು.

ಸುಯೋಗ್ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಆರ್.ರಾಜೇಂದ್ರ ಪ್ರಸಾದ್ ಶುಶ್ರೂಷಕರ ದಿನಾಚರಣೆಯ ಮಹತ್ವವನ್ನು ಕುರಿತು ತಿಳಿಸಿದರು.

ಈ ಸಂದರ್ಭ ಆಸ್ಪತ್ರೆಯ ಶುಶ್ರೂಷಕಿ ಶ್ರೀಮತಿ ಜ್ಯೋತಿ ಅವರಿಗೆ ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಸುಯೋಗ್ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ. ಸುಯೋಗ್ ಯೋಗಣ್ಣ, ಟ್ರಸ್ಟಿ ಶ್ರೀಮತಿ ಸುಧಾ ಯೋಗಣ್ಣ ಹಾಗೂ ನಿರ್ದೇಶಕರಾದ ಡಾ.ಸೀಮಾ ಯೋಗಣ್ಣ ಉಪಸ್ಥಿತರಿದ್ದರು.

'ಮಾತಿಲ್ಲ ಗುರುತು ಇದೆ' ಕೃತಿ ಬಿಡುಗಡೆ



ಸಾಹಿತಿ ಪ್ರೊ.ಕಾಳೇಗೌಡ ನಾಗವಾರ 'ಮಾತಿಲ್ಲ ಗುರುತು ಇದೆ' ಕೃತಿ ಬಿಡುಗಡೆ ಮಾಡಿದರು.

ಮೈಸೂರು, ಮೇ 13(ವಿವಿಹೆಚ್)– ಬದುಕಿನಲ್ಲಿ ನಡೆದಿರುವ ಹಲವಾರು ನೈಜ ಘಟನೆಗಳಿಗೆ ಪದಗಳ ಪೋಣಿಸಿ ರಚಿಸಿರುವ ಕವಿತೆಗಳ ಸಂಕಲನವೇ 'ಮಾತಿಲ್ಲ ಗುರುತು ಇದೆ' ಕೃತಿ ಎಂದು ಹಿರಿಯ ಸಾಹಿತಿ ಪ್ರೊ.ಕಾಳೇಗೌಡ ನಾಗವಾರ ತಿಳಿಸಿದರು.

ನಗರದ ಕಲಾಮಂದಿರದ ವನರಂಗ ರಂಗಾಯಣದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಓದುಗರ ಒಕ್ಕೂಟ–2010, ಸಂಸ್ಕೃತಿ ಪ್ರಕಾಶನ ಸಂಯುಕ್ತಾಶ್ರಯದಲ್ಲಿ ಬುಧವಾರ ಎಂ.ಬಿ.ಪ್ರವೀಣ್ ಅವರ 'ಮಾತಿಲ್ಲ ಗುರುತು ಇದೆ' ಪುಸ್ತಕ ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು.

ತಮ್ಮ ಬದುಕಿನಲ್ಲಿ ತಾವು ಕಂಡದ್ದನ್ನು ನೇರ–ನಿಷ್ಠೂರವಾಗಿ ದಾಖಲಿಸುವ ಕೆಲಸ ಮಾಡಿದ್ದಾರೆ. ಕಡಿಮೆ ಪದಗಳನ್ನು ಬಳಸಿಕೊಂಡು, ತಾವು ಹೇಳಬಯಸುವ ವಿಷಯನ್ನು ನೇರವಾಗಿ ಮನಮುಟ್ಟುವಂತೆ ವಿವರಿಸಲು ಕವನಗಳನ್ನು ರಚಿಸಿದ್ದಾರೆ. ಇದನ್ನು ಅರ್ಥೈಸಿಕೊಳ್ಳುವ ಮೂಲಕ ಕವಿಯ ಭಾವದೊಳಗೆ ಬೆರೆತುಹೋಗಬೇಕು ಎಂದರು.

'ಮಾತಿಲ್ಲ ಗುರುತು ಇದೆ' ಸಂಕಲನದ ಕವಿತೆಗಳನ್ನು ಓದಿದಾಗ ಅಮೂರ್ತ ಚಿತ್ರಕಲೆಯ ಹಲವು ಬಿಂಬಗಳಿಗೆ ಎದುರಾದಂತೆ ಅನಿಸಿತು. ಯಾಕೆ ಕವಿತೆಯ ಸಾಲುಗಳು ಸ್ಪಷ್ಟ ಚಿತ್ರಗಳನ್ನು ಕೊಡದೆ ಒಂದು ರೀತಿಯ ಅಸ್ಪಷ್ಟ ಚಿತ್ರಗಳ ಸರಣಿಯನ್ನು ಕಾಣಿಸುತ್ತವೆ. ಕಾವ್ಯದಲ್ಲಿ ಸ್ಪಷ್ಟತೆ ಎನ್ನುವುದು ಕೂಡ ಒಂದು ಭ್ರಮೆಯೆ ಅಥವಾ ಈ ಅಮೂರ್ತ ಬಿಂಬದೊಳಗೇ ಸ್ಪಷ್ಟತೆಯ ತುಣುಕುಗಳಿವೆಯೆ ಇಲ್ಲವೇ ಎಲ್ಲರ ಅನುಭವಗಳೂ ಬಹುತೇಕ ಬಾರಿ ಅಮೂರ್ತವಾಗಿಯೇ ಇರುತ್ತವೆಯೆ ಹೀಗೆ ಹತ್ತು ಹಲವು ಚಿಂತನೆಗೆ ಹಚ್ಚಬಲ್ಲ ಕಾವ್ಯಕೃತಿ ಇದಾಗಿದೆ ಎಂದರು.

ಕನ್ನಡದ ಸದಭಿರುಚಿ ಈ ಕೃತಿಯಲ್ಲಿ ನಾವು ಕಾಣಬಹುದಾಗಿದೆ. ಕಾಲ–ಕಾಲದಿಂದಲೂ ಜಾತ್ಯಾತೀತ ಪರಿಕಲ್ಪನೆಯನ್ನು ಕನ್ನಡಿಗರು 12ನೇ ಶತಮಾನದಲ್ಲಿಯೇ ನೀಡಿದ್ದರು. ಬಸವಣ್ಣ, ಅಲ್ಲಮ, ಅಕ್ಕಮಹಾದೇವಿ ಅವರು ಸಮಾಜ ತಿದ್ದಲು ಆರಿಸಿಕೊಂಡ ಮಾರ್ಗದಲ್ಲಿ ಪ್ರವೀಣ್ ಸಾಗಲು ಅಂಬೆಗಾಲು ಹಾಕಿದ್ದಾರೆ. ತನ್ನದೇ ವಿಶಿಷ್ಟ ಮಾದರಿಯ ಅಪರೂಪದ ಆದರ್ಶಗಳ ಅಸಲಿ ವ್ಯಕ್ತಿ ಆಗಿದ್ದು, ಅವರ ಜೀವನದಲ್ಲಿನ ಶ್ರದ್ಧೆ, ಪರಿಶ್ರಮ, ತ್ಯಾಗ ಎಲ್ಲವನ್ನು ಒಳಗೊಂಡ ಕವನಗಳನ್ನು ಇಲ್ಲಿ ಕಾಣಬಹುದಾಗಿದೆ ಎಂದು ವಿವರಿಸಿದರು.

ಕೆಎಸ್‌ಓಯು ಸಹ ಪ್ರಾಧ್ಯಾಪಕ ಡಾ. ಪಿ.ಮಣಿ, ಮನುಷ್ಯನ ಒಳ ಮನಸಿನ ಮೌನವನ್ನು ಅತ್ಯಂತ ಸೂಕ್ಷ್ಮವಾಗಿ ಚಿತ್ರಿಸುವ, ಅಂತರಾಳದ ಮಾತುಗಳು, ಸಮಾಜದ ವಸ್ತು ಸ್ಥಿತಿಗಳು, ಪ್ರಸಕ್ತ ನಡೆಯುತ್ತಿರುವ ಅನ್ಯಾಯ, ನೋವು, ದುಗುಡ ದುಮ್ಮಾನಗಳ ಒಳಗೊಂಡ ಸಂಕಲನ ಇದಾಗಿದೆ. ಕವನಗಳ ಮೂಲಕ ನಮ್ಮೊಳಗಿನ ಮನುಷ್ಯತ್ವವನ್ನು ಬಡಿದೆಚ್ಚರಿಸುವ ಕೆಲಸ ಕವಿ ಮಾಡಿದ್ದಾರೆ ಎಂದು ಕೃತಿ ಕುರಿತು ವಿವರಿಸಿದರು.

ಈ ವೇಳೆ ವಿಶ್ರಾಂತ ಕನ್ನಡ ಪ್ರಾಧ್ಯಾಪಕ ರಾಗೌ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಗೆರೆ ಗೋಪಾಲ್, ಮೈಸೂರು ಬುಕ್ ಕ್ಲಬ್ಸ್ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷೆ ಶುಭ ಸಂಜಯ್ ಅರಸ್, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಎಂ.ಬಿ.ಪ್ರವೀಣ್ ಉಪಸ್ಥಿತರಿದ್ದರು.

ಅಭಿನಂದನೆ



ಶಾಸಕರಾಗಿ ಮೂರು ವರ್ಷ ಪೂರೈಸಿದ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಅವರನ್ನು ನಗರ ಪಾಲಿಕೆ ಮಾಜಿ ಸದಸ್ಯ ಜಯರಾಮ್, ವಕೀಲರೂ ಆದ ಬಿಜೆಪಿ ಮುಖಂಡ ಶಿವರಾಜ್‌ರಾವ್, ರಾಜ್ಯ ಕಾರ್ಯಕಾರಿಣಿ ಸದಸ್ಯ ವಾಣಿಶ್ ಆದಿತ್ಯ, ಅಲ್ಪಸಂಖ್ಯಾತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕಿಶೋರ್ ಜೈನ್ ಇತರರು ಅಭಿನಂದಿಸಿದರು.

ಮೈಸೂರು ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಖಾದಿ ಮಾರಾಟ ಮಳಿಗೆ

ಇನ್ನು ಸರ್ಕಾರಿ ನೌಕರರು ಖಾದಿ ಧರಿಸುವಂತೆ ಸಲಹೆ

ಮೈಸೂರು, ಮೇ 13– ಕರ್ನಾಟಕ ಸರ್ಕಾರದ ಆದೇಶದನ್ವಯ ರಾಜ್ಯದ ಎಲ್ಲಾ ಸರ್ಕಾರಿ ನೌಕರರು, ಅನುದಾನಿತ ಸಂಸ್ಥೆಗಳು, ನಿಗಮ–ಮಂಡಳಿ, ಸ್ವಾಯತ್ತ ಸಂಸ್ಥೆಗಳು, ವಿಶ್ವವಿದ್ಯಾಲಯಗಳ ಅಧಿಕಾರಿ, ನೌಕರರು ಸ್ವಯಂ ಪ್ರೇರಣೆಯಿಂದ ಪ್ರತಿ ತಿಂಗಳ ಮೊದಲನೇ ಶನಿವಾರದಂದು ಖಾದಿ ಉಡುಪನ್ನು ಧರಿಸುವುದು ಅಲ್ಲದೇ, ಸ್ವಾತಂತ್ರ್ಯ ದಿನಾಚರಣೆ & ಗಣರಾಜ್ಯೋತ್ಸವ ಸೇರಿದಂತೆ ಎಲ್ಲಾ ಸರ್ಕಾರಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವಾಗ ಖಾದಿ ಉಡುಪನ್ನು ಧರಿಸುವಂತೆ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು 29–01–2026 ರ ಪತ್ರದಂತೆ ಸುತ್ತೋಲೆಯನ್ನು ಹೊರಡಿಸಿರುವುದರಿಂದ ಮೇ 14 ಮತ್ತು 15 ರಂದು ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 6 ಗಂಟೆಯವರಗೆ ಬನ್ನೂರು ರಸ್ತೆಯಲ್ಲಿರುವ ಜಿಲ್ಲಾಧಿಕಾರಿಗಳ ಹೊಸ ಕಚೇರಿ–ಕಟ್ಟಡದ ಅವರಣದಲ್ಲಿ ತಾತ್ಕಾಲಿಕ ಖಾದಿ ಮಳಿಗೆಯನ್ನು ತೆರೆಯಲಾಗುತ್ತಿದೆ.

ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂ.ಸಂ: 0821–2566428/9480825633 ಅನ್ನು ಸಂಪರ್ಕಿಸಬಹುದೆಂದು ಜಿಲ್ಲಾ ಖಾದಿ ಗ್ರಾಮೋದ್ಯೋಗ ಅಧಿಕಾರಿ ಶರತ್ ಚಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಧಾನಸೌಧದ ಮೇಲೆ ಹಾರಾಡಿದ ಹೆಲಿಕಾಪ್ಟರ್: ಉಗ್ರರ ವಿರುದ್ಧ ಎನ್‌ಎಸ್‌ಜಿ ಮಾಕ್ ಡ್ರಿಲ್

ಬೆಂಗಳೂರು: ಬೆಂಗಳೂರಿನ ವಿಧಾನಸೌಧದ ಆವರಣದಲ್ಲಿ ಬುಧವಾರ ಉಗ್ರರ ವಿರುದ್ಧ ಹೇಗೆ ಕಾರ್ಯಾಚರಣೆ ಮಾಡಬೇಕು ಎಂಬ ಬಗ್ಗೆ ಮಾಕ್ ಡ್ರಿಲ್ ನಡೆಯಿತು.

ಇಂದು ವಿಧಾನಸೌಧದಲ್ಲಿ ಎನ್‌ಎಸ್‌ಜಿ ಕಮಾಂಡೋಗಳು ಹಾಗೂ ಪೊಲೀಸರು ಜಂಟಿಯಾಗಿ ಭದ್ರತಾ ಕಸರತ್ತು ನಡೆಸಿದರು. ಬಾಂಬ್ ಬ್ಲಾಸ್ಟ್, ಭಯೋತ್ಪಾದಕರ ದಾಳಿ ಸಮಯದಲ್ಲಿ ಹೇಗೆ ರೆಸ್ಪಾನ್ಸ್ ಮಾಡಬೇಕು ಉಗ್ರರ ವಿರುದ್ಧ ಹೇಗೆ ಕಾರ್ಯಾಚರಣೆ ಮಾಡಬೇಕೆಂದು ಎನ್‌ಸಿಜಿ ಕಮಾಂಡೋಗಳು ಅಣುಕು ಪ್ರದರ್ಶನ ಮಾಡಿದವು. ಅಣುಕು ಪ್ರದರ್ಶನದ ಸಾಹಸಮಯ ದೃಶ್ಯಗಳು ಮೈನವಿರೇಳಿಸುವಂತಿತ್ತು.

ವಿರಾಟ್ ಕೊಹ್ಲಿ ಶತಕ; ಕೊಲ್ಕತ್ತಾ ಮಣಿಸಿ ಪಾಯಿಂಟ್ಸ್ ಪಟ್ಟಿಯಲ್ಲಿ ಟಾಪರ್ ಆದ ಆರ್‌ಸಿಬಿ

ರಾಯ್‌ಪುರ, ಮೇ 13(ವಿವಿಹೆಚ್)– ವಿರಾಟ್ ಕೊಹ್ಲಿ ಅವರ ಅಜೇಯ ಶತಕದಾಟದ ಬಲದಿಂದ ಕೊಲ್ಕತ್ತಾ ನೈಟ್‌ರೈಡರ್ಸ್ ತಂಡವನ್ನು 6 ವಿಕೆಟ್‌ಗಳಿಂದ ಮಣಿಸಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು 16 ಅಂಕಗಳೊಂದಿಗೆ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಇಲ್ಲಿನ ಸಾಹೀದ್ ವೀರ್ ನಾರಾಯಣ್ ಸಿಂಗ್ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಐಪಿಎಲ್–2026ರ 57ನೇ ಲೀಗ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಕೊಲ್ಕತ್ತಾ ನೈಟ್‌ರೈಡರ್ಸ್ ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 192 ರನ್ ಗಳಿಸಿತು. ಈ ಮೊತ್ತ ಬೆನ್ನತ್ತಿದ ಆರ್‌ಸಿಬಿ 19.1 ಓವರ್‌ಗಳಲ್ಲಿ ಕೇವಲ 4 ವಿಕೆಟ್ ಕಳೆದುಕೊಂಡು 194 ರನ್ ಗಳಿಸಿ ಗೆಲುವಿನ ನಗೆ ಬೀರಿತು.

ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್‌ಗೆ ಆರ್‌ಸಿಬಿ ಬೌಲರ್‌ಗಳು ಆರಂಭಿಕ ಆಘಾತ ನೀಡಿದರು. ನಾಯಕ ಅಜಿಂಕ್ಯಾ ರಹಾನೆ 19(13) ರನ್ ಗಳಿಸಿ ಹೇಜಲ್ವುಡ್‌ಗೆ ವಿಕೆಟ್ ಒಪ್ಪಿಸಿದರೆ, ಫಿನ್ ಆಲೆನ್ 18(8) ಭುವಿ ಓವರ್‌ನಲ್ಲಿ ಕ್ಯಾಚಿತ್ತು ನಿರ್ಗಮಿಸಿದರು.

ಈ ವೇಳೆ ಒಂದಾದ ಅಂಗ್‌ಕ್ರಿಶ್ ರಘುವಂಶಿ ಹಾಗೂ ಕ್ಯಾಮರೋನ್ ಗ್ರೀನ್ ಜವಾಬ್ದಾರಿಯುತ ಇನ್ನಿಂಗ್ಸ್ ಕಟ್ಟಿದರು. ರಘುವಂಶಿ 46 ಎಸೆತಗಳಲ್ಲಿ 7 ಬೌಂಡರಿ, 3 ಸಿಕ್ಸರ್ ಸಹಿತ 71 ರನ್ ಗಳಿಸಿದರೆ, ಕ್ಯಾಮರೋನ್ ಗ್ರೀನ್ 24 ಎಸೆತಗಳಲ್ಲಿ 32 ರನ್ ಗಳಿಸಿ ತಂಡಕ್ಕೆ ಉಪಯುಕ್ತ ಕಾಣಿಕೆ ನೀಡಿದರು.

ಕೊನೆಯಲ್ಲಿ ಅಬ್ಬರಿಸಿದ ರಿಂಕು ಸಿಂಗ್ 29 ಎಸೆತಗಳಲ್ಲಿ 3 ಬೌಂಡರಿ, 2 ಸಿಕ್ಸರ್ ಸಹಿತ 43 ರನ್ ಗಳಿಸಿ ಅಜೇಯರಾಗಿ ಉಳಿದರು. ಇತ್ತ ಆರ್‌ಸಿಬಿ ಪರ ಭುವನೇಶ್ವರ್ ಕುಮಾರ್, ರಸಿಕ್ ಸಲಾಂ ದರ್ ಹಾಗೂ ಜೋಶ್ ಹೇಜಲ್ವುಡ್ ತಲಾ ಒಂದೊಂದು ವಿಕೆಟ್ ಪಡೆದರು.

ಈ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ಆರ್‌ಸಿಬಿಗೆ ಉತ್ತಮ ಆರಂಭ ದೊರೆಯಿತು. ವಿರಾಟ್ ಕೊಹ್ಲಿ–ಜಾಕೋಬ್ ಬೆಥೆಲ್ ಜೋಡಿ ಕೇವಲ 3 ಓವರ್‌ಗಳಲ್ಲಿ 37 ರನ್‌ಗಳ ಜೊತೆಯಾಟವಾಡಿದರು. ಬೆಥೆಲ್ 15(12) ರನ್ ಗಳಿಸಿ ಕಾರ್ತಿಕ್ ತ್ಯಾಗಿಗೆ ವಿಕೆಟ್ ಒಪ್ಪಿಸಿ ಹೊರನಡೆದರು.

ಬಳಿಕ ಬಂದ ದೇವ್‌ದತ್ ಪಡಿಕ್ಕಲ್ 27 ಎಸೆತಗಳಲ್ಲಿ 39 ರನ್ ಗಳಿಸಿ ನಿರ್ಗಮಿಸಿದರು. ನಾಯಕ ರಜತ್ ಪಾಟೀದರ್ 11(8)ರನ್ ಗಳಿಸಿ ಮತ್ತೊಮ್ಮೆ ನಿರಾಸೆ ಮೂಡಿಸಿದರು.

ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಮತ್ತೊಂದೆಡೆ ಭದ್ರವಾಗಿ ನಿಂತು ಇನ್ನಿಂಗ್ಸ್ ಕಟ್ಟಿದ ವಿರಾಟ್ ಕೊಹ್ಲಿ ಕೊನೆಯವರೆಗೂ ಬ್ಯಾಟಿಂಗ್ ಮಾಡಿ ತಂಡಕ್ಕೆ ಗೆಲುವು ತಂದುಕೊಟ್ಟರು. ತಮ್ಮ ಇನ್ನಿಂಗ್ಸ್‌ನಲ್ಲಿ 60 ಎಸೆತ ಎದುರಿಸಿದ ಅವರು 11 ಬೌಂಡರಿ, 3 ಸಿಕ್ಸರ್ ಸಹಿತ ಅಜೇಯ 105 ರನ್ ಚಚ್ಚಿದರು. ಆ ಮೂಲಕ ಐಪಿಎಲ್‌ನಲ್ಲಿ ತಮ್ಮ ವೈಯಕ್ತಿಕ 9ನೇ ಶತಕ ಬಾರಿಸಿದರು.

ಉಳಿದಂತೆ ಟಿಮ್ ಡೇವಿಡ್ 2(3), ಜಿತೇಶ್ ಶರ್ಮಾ ಅಜೇಯ 8(5) ರನ್ ಗಳಿಸಿದರು. ಕೆಕೆಆರ್ ಪರ ಕಾರ್ತಿಕ್ ತ್ಯಾಗಿ ಮೂರು, ಸುನೀಲ್ ನರೈನ್ ಒಂದು ವಿಕೆಟ್ ಕಿತ್ತರು.



ವಿರಾಟ್ ಕೊಹ್ಲಿ–ದೇವ್‌ದತ್ ಪಡಿಕ್ಕಲ್ ಜೊತೆಯಾಟ.

ಪುಟ್ಟ ಪೋರನ ಸಾಧನೆ ; 3 ವರ್ಲ್ಡ್ ಬುಕ್ ಆಫ್ ರೆಕಾರ್ಡ್ ನಿರ್ಮಾಣ



ಮೈಸೂರು,ಮೇ 13(ಪಿಎಂ)– ಪುಟ್ಟ ಪೋರ ಮಾಸ್ಟರ್ ವಶಿಷ್ಠ ವೇದಾಂತ್ ಮೂರು ವರ್ಲ್ಡ್ ಬುಕ್ ಆಫ್ ರೆಕಾರ್ಡ್‌ಗಳನ್ನು ನಿರ್ಮಿಸಿ ಸಾಧನೆಗೈದಿದ್ದಾನೆ.

ಮೈಸೂರಿನ ಶ್ರೀರಾಂಪುರದ ದಿ ಆಕ್ಟಿವಿಟಿ ಪ್ರಿಸ್ಕೂಲ್ ಡ್ರೀಮ್ ಕಿಡ್ಸ್‌ನ ವಿದ್ಯಾರ್ಥಿಯಾದ ಈತ, ಹಾಲೇಶಾಚಾರಿ ಮತ್ತು ಚೈತ್ರಾ ದಂಪತಿ ಪುತ್ರ. 1 ವರ್ಷ 11 ತಿಂಗಳ ವಯಸ್ಸಿನಲ್ಲಿ 554 ವಸ್ತುಗಳನ್ನು ಕ್ರಿಯೆಗಳೊಂದಿಗೆ ಹಾಗೂ ಸರಿಯಾದ ಉಚ್ಚಾರಣೆಯೊಂದಿಗೆ ಗುರುತಿಸುವ ಮೂಲಕ ತನ್ನ ಮೊದಲ ವರ್ಲ್ಡ್ ಬುಕ್ ಆಫ್ ರೆಕಾರ್ಡ್ (ಲಂಡನ್) ಅನ್ನು ಪಡೆದ. ಅಂತೆಯೇ 4 ವರ್ಷ 10 ತಿಂಗಳ ವಯಸ್ಸಿನಲ್ಲಿ ಹನುಮಾನ್ ಚಾಲೀಸವನ್ನು 2 ನಿಮಿಷ 10 ಸೆಕೆಂಡುಗಳಲ್ಲಿ ಪಠಿಸಿ ತನ್ನ ಎರಡನೇ ವರ್ಲ್ಡ್ ಬುಕ್ ಆಫ್ ರೆಕಾರ್ಡ್ (ಲಂಡನ್) ಅನ್ನು ಪಡೆದ. ಅದೇ ವಯಸ್ಸಿನಲ್ಲಿ ಐಗಿರಿ ನಂದಿನಿಯನ್ನು 8 ನಿಮಿಷ 34 ಸೆಕೆಂಡುಗಳಲ್ಲಿ ಪಠಿಸಿ ತನ್ನ ಮೂರನೇ ಅಂತಾರಾಷ್ಟ್ರೀಯ ಬುಕ್ ಆಫ್ ರೆಕಾರ್ಡ್ ಅನ್ನು ನಿರ್ಮಿಸಿ ಸಾಧನೆ ಮಾಡಿದ್ದಾನೆ.

ಮತ್ತೆ ಮೇ 20ರಂದು ಸಾರಿಗೆ ನೌಕರರ ಮುಷ್ಕರ

- ಕೇವಲ 12.5% ವೇತನ ಹೆಚ್ಚಿಸಿದ್ದಕ್ಕೆ ಸರ್ಕಾರದ ವಿರುದ್ಧ ಸಾರಿಗೆ ನೌಕರರು ಗರಂ
- ಶೇಕಡಾ 25ರಷ್ಟು ವೇತನ ಹೆಚ್ಚಳಕ್ಕೆ ಸಾರಿಗೆ ನೌಕರರ ಜಂಟಿ ಕ್ರಿಯಾ ಸಮಿತಿ ಒತ್ತಾಯ
- ಇದೇ ಮೇ 20ರಂದು ಮತ್ತೆ ಮುಷ್ಕರಕ್ಕೆ ಕರೆ ನೀಡಿದ ಸಾರಿಗೆ ನೌಕರರ ಜಂಟಿ ಕ್ರಿಯಾ ಸಮಿತಿ

ಬೆಂಗಳೂರು, ಮೇ 13– ಕರ್ನಾಟಕ ಸರ್ಕಾರವು ಕೆಎಸ್‌ಆರ್‌ಟಿಸಿ ಸೇರಿದಂತೆ 4 ಸಾರಿಗೆ ನಿಗಮಗಳ 1.05 ಲಕ್ಷ ನೌಕರರ ವೇತನವನ್ನು ಶೇ.12.5 ರಷ್ಟು ಹೆಚ್ಚಿಸಿ ಆದೇಶಿಸಿದೆ. ಆದರೆ, ಇದಕ್ಕೆ ಸಾರಿಗೆ ಸಿಬ್ಬಂದಿ ಮಾತ್ರ ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ. ಶೇಕಡಾ 25ರಷ್ಟು ವೇತನ ಹೆಚ್ಚಳಕ್ಕೆ ಬೇಡಿಕೆ ಇಡಲಾಗಿತ್ತು. ಆದರೆ, ರಾಜ್ಯ ಸರ್ಕಾರ ಅರ್ಧ ಅಂದರೆ ಶೇ.12.5 ರಷ್ಟು ವೇತನ ಹೆಚ್ಚಳ ಮಾಡಿದೆ. ಇದರಿಂದ ಸಾರಿಗೆ ಸಿಬ್ಬಂದಿ ಗರಂ ಆಗಿದ್ದಾರೆ. ಈ ಬಗ್ಗೆ ಬೆಂಗಳೂರಿನ ಶೇಷಾದ್ರಿಪುರಂನ ಎಐಟಿಯುಸಿ ಕಚೇರಿಯಲ್ಲಿಂದು ಸಭೆ ಮಾಡಿದ್ದು, ಈಗಿನ ವೇತನ ಹೆಚ್ಚಳವನ್ನು ತಿರಸ್ಕರಿಸಲಾಗಿದೆ. ಅಲ್ಲದೇ ವೇತನ ಹೆಚ್ಚಳಕ್ಕೆ ಆಗ್ರಹಿಸಿ



ಸಾರಿಗೆ ನೌಕರರ ಜಂಟಿ ಕ್ರಿಯಾ ಸಮಿತಿಯು ಇದೇ ಮೇ 20ರಂದು ಮುಷ್ಕರಕ್ಕೆ ಕರೆ ನೀಡಿದೆ. ಹೀಗಾಗಿ ಬಸ್ ಸಂಚಾರದಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆಗಳಿವೆ.

ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಾರಿಗೆ ನೌಕರರ ಮುಖಂಡ ವಿಜಯ್ ಭಾಸ್ಕರ್, ಕೇವಲ ಶೇ.12.50ರಷ್ಟು ವೇತನ ಹೆಚ್ಚಿಸಿ ಆದೇಶ ಮಾಡಿದ್ದಾರೆ. ಸರ್ಕಾರ ನಮ್ಮ ಜೊತೆ ಚರ್ಚಿಸದೆ ಏಕಾಏಕಿ ಆದೇಶ ಹೊರಡಿಸಿದೆ. ಶೇಕಡಾ 25ರಷ್ಟು ವೇತನ ಹೆಚ್ಚಳಕ್ಕೆ ನಮ್ಮ ಡಿಮ್ಯಾಂಡ್ ಇದೆ. ಕಳೆದ ಬಾರಿ ಶೇಕಡಾ 15ರಷ್ಟು ವೇತನ ಹೆಚ್ಚಳ ಮಾಡಿದ್ದರು. ಇದೀಗ ಕಳೆದ ಬಾರಿಗಿಂತ ಕಡಿಮೆ ವೇತನ ಹೆಚ್ಚಳ ಮಾಡಿದ್ದಾರೆ. ಹಾಗಾಗಿ ವೇತನ ಹೆಚ್ಚಳಕ್ಕೆ ಆಗ್ರಹಿಸಿ ಮೇ 20ರಂದು ಮುಷ್ಕರಕ್ಕೆ ಕರೆ ನೀಡಿದ್ದು, ಅಂದು ಸಾರಿಗೆ ನೌಕರರು ಕೆಲಸಕ್ಕೆ ಹಾಜರಾಗುವುದಿಲ್ಲ. ಸಾರ್ವಜನಿಕರು ನಮಗೆ ಸಹಕಾರ ಕೊಡಬೇಕು ಎಂದಿದ್ದಾರೆ.

ಈ ಬಾರಿ ಯಾವುದಕ್ಕೂ ಹೆದರಲ್ಲ: ಈಗಾ ಗಲೇ ಎರಡು ಸಮಾವೇಶ ಮಾಡಿದ್ದೇವೆ. ಉತ್ತಮ ರೆಸ್ಪಾನ್ಸ್ ವ್ಯಕ್ತವಾಗುತ್ತಿದೆ. ಸಾರಿಗೆ ನೌಕರರಲ್ಲಿ ಒಮ್ಮತ ಇದ್ದು, ನಿನ್ನೆ ಆದೇಶದ ಬಳಿಕ ಆಕ್ರೋಶ ಹೆಚ್ಚಾಗಿದೆ. 2024 ರಿಂದ ಸಂಬಳದ ವಿಚಾರವಾಗಿ ಯಾವುದೇ ರಾಜೀ ಇಲ್ಲ. ಸರ್ಕಾರ ನಮ್ಮ ಜೊತೆ ಚರ್ಚೆ ಬಿಟ್ಟು ಏಕಾಏಕಿ ಆದೇಶ ಹೊರಡಿಸಿದ್ದಾರೆ. ಮುಷ್ಕರ ನಿಲ್ಲಿಸಲ್ಲ ಮಾಡೇ ಮಾಡುತ್ತೇವೆ. ಎಸ್ಮಾ ಜಾರಿ ಮಾಡಿದರೂ ಈ ಬಾರಿ ಕೇರ್ ಮಾಡುವುದಿಲ್ಲ. ಅಲ್ಲದೇ ಹೈಕೋರ್ಟ್‌ಗೆ PIL ಬಂದರೂ ಆದೇಶ ಪಾಲಿಸಲು ಆಗಲ್ಲ. ನಮ್ಮನ್ನು ಸಸ್ಪೆಂಡ್ ಮಾಡಿದ್ರೂ ಒಪ್ಪಲ್ಲ. ಸರ್ಕಾರಿ ಬಸ್ ಬದಲಿಗೆ ಖಾಸಗಿ ಬಸ್ ಓಡಿಸಿದರೆ ಯಶಸ್ವಿ ಆಗಲ್ಲ. ಸರ್ಕಾರಿ ಬಸ್ ಮೇಲೆ ರಾಜ್ಯದ ಪ್ರಯಾಣಿಕರು ನಂಬಿಕೆ ಇಟ್ಟಿದ್ದಾರೆ ಎಂದು ಹೇಳಿದರು.

ಮೈಸೂರು ಮಹಾನಗರ ಪಾಲಿಕೆಯ 9 ಅಧಿಕಾರಿಗಳು ಮಾತೃ ಇಲಾಖೆಗೆ

ಒಟ್ಟು 50 ಮಂದಿ ಮಾತೃ ಇಲಾಖೆಗೆ ಹಿಂದಿರುಗಿಸಿ ಆದೇಶ

ಮೈಸೂರು,ಮೇ 13(ಪಿಎಂ)– ರಾಜ್ಯದ ವಿವಿಧ ಮಹಾನಗರ ಪಾಲಿಕೆಗಳಲ್ಲಿ ದೀರ್ಘಾವಧಿಯಿಂದ ಇತರೆ ಇಲಾಖೆಗಳಿಂದ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಒಟ್ಟು 50 ಅಧಿಕಾರಿ ಹಾಗೂ ಸಿಬ್ಬಂದಿಯನ್ನು ಅವರ ಮಾತೃ ಇಲಾಖೆಗಳಿಗೆ ಹಿಂದಿರುಗಿಸಿ, ಸರ್ಕಾರ ಆದೇಶಿಸಿದೆ. ಈ ಪೈಕಿ ಮೈಸೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ 9 ಅಧಿಕಾರಿಗಳು ಸೇರಿದ್ದಾರೆ.

ಮೈಸೂರು ಮಹಾನಗರ ಪಾಲಿಕೆಗೆ ಸಂಬಂಧಿಸಿದಂತೆ ವಲಯ ಆಯುಕ್ತ ಹುದ್ದೆಯಲ್ಲಿರುವ ಮಹೇಶ್‌ಕುಮಾರ್ ಜಿಗಣಿ ಅವರನ್ನು ಕಾರಾಗೃಹ ಇಲಾಖೆಗೆ, ಸಹಾಯಕ ಕಾರ್ಯಪಾಲಕ ಅಭಿಯಂತರ (ಸಿವಿಲ್) ಟಿ.ಎಸ್.ಸತ್ಯಮೂರ್ತಿ ಅವರನ್ನು ಪೌರಾಡಳಿತ ಇಲಾಖೆಗೆ, ಸಹಾಯಕ ಕಾರ್ಯಪಾಲಕ ಅಭಿಯಂತರ (ಸಿವಿಲ್) ಜಗದೀಶ್ ಅವರನ್ನು ಲೋಕೋಪಯೋಗಿ ಇಲಾಖೆಗೆ, ಸಹಾಯಕ ಕಾರ್ಯಪಾಲಕ ಅಭಿಯಂತರಾದ (ಪರಿಸರ) ಎಂ.ಜೆ.ಮೀನಾಕ್ಷಿ ಅವರನ್ನು ಪೌರಾಡಳಿತ ಇಲಾಖೆಗೆ ಹಿಂದಿರುಗಿಸಲಾಗಿದೆ.

ಅಂತೆಯೇ ಮೈಸೂರು ಮಹಾನಗರ ಪಾಲಿಕೆಯ ಅಭಿವೃದ್ಧಿ ಅಧಿಕಾರಿ/ಸಹಾಯಕ ಕಾರ್ಯಪಾಲಕ ಅಭಿಯಂತರ (ಸಿವಿಲ್) ಎಂ.ಚೇತನ್‌ಬಾಬು ಅವರನ್ನು ಲೋಕೋಪಯೋಗಿ ಇಲಾಖೆಗೆ, ಸಹಾಯಕ ಅಭಿಯಂತರ (ಸಿವಿಲ್) ಕೆ.ಮಣಿ ಅವರನ್ನು ಲೋಕೋಪಯೋಗಿ ಇಲಾಖೆಗೆ, ಸಹಾಯಕ ಅಭಿಯಂತರರಾದ ಎಂ.ವಿ.ಸಾಗರ್, ರಕ್ಷಿತ್ ಆರ್‌ಕೆ ಗೌಡ, ಪರಿಸರ ಅಭಿಯಂತರರಾದ ಲೋಕೇಶ್ವರಿ ಅವರನ್ನು ಪೌರಾಡಳಿತ ಇಲಾಖೆಗೆ ಹಿಂದಿರುಗಿಸಿ ಆದೇಶಿಸಲಾಗಿದೆ. 2026–27ನೇ ಸಾಲಿನ ಸಾರ್ವತ್ರಿಕ ವರ್ಗಾವಣೆ ಚಾಲ್ತಿಯಲ್ಲಿರುವುದರಿಂದ ಹಾಗೂ ಆಡಳಿತಾತ್ಮಕ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಈ ತಕ್ಷಣದಿಂದ ಜಾರಿಗೆ ಬರುವಂತೆ ಮಾತೃ ಇಲಾಖೆಗಳಿಗೆ ಹಿಂದಿರುಗಿಸಿರುವ ಅಧಿಕಾರಿಗಳು ಪಾಲಿಕೆಗಳಿಂದ ಕೂಡಲೇ ಬಿಡುಗಡೆಗೊಂಡು ಮಾತೃ ಇಲಾಖೆಗಳಲ್ಲಿ ಕಾರ್ಯವರದಿ ಮಾಡಿಕೊಳ್ಳುವಂತೆ ಸೂಚಿಸಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

